ಕರ್ನಾಟಕ ನಾಟಕ ಅಕಾಡೆಮಿ

# ರಾಮನಗರ
# ಜಿಲ್ಲಾ ರಂಗಮಾಹಿತಿ

- ಡಾ. ಎ.ಆರ್.ಗೋವಿಂದಸ್ವಾಮಿ



ಜಿಲ್ಲಾ ರಂಗಮಾಹಿತಿ ಮಾಲಿಕೆ

# ರಾಮನಗರ

## ಜಿಲ್ಲಾ ರಂಗ ಮಾಹಿತಿ

ಡಾ. ಎ. ಆರ್. ಗೋವಿಂದಸ್ವಾಮಿ

ಕರ್ನಾಟಕ ನಾಟಕ ಅಕಾಡೆಮಿ

ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು - ೫೬೦ ೦೦೨

**RAMANAGARA JILLA RANGA MAHITI KAIPIDI:** Written by **Dr. A. R. Govindaswamy**, Published by **Mr. B. Manjunatha Aradhya**, Registrar, Karnataka Nataka Academy, Kannada Bhavana, J.C. Road, Bengaluru - 560 002. Phone: 080-22237484

ಹಕ್ಕುಗಳು : ಕರ್ನಾಟಕ ನಾಟಕ ಅಕಾಡೆಮಿ
ಮೊದಲ ಮುದ್ರಣ : ೨೦೧೭
ಪ್ರತಿಗಳು : ೧೦೦೦
ಪುಟಗಳು : x + ೧೩೪
ಬೆಲೆ : ರೂ. ೬೦/-

**ಪ್ರಕಾಶಕರು**
**ಬಿ. ಮಂಜುನಾಥ ಆರಾಧ್ಯ,** ರಿಜಿಸ್ಟ್ರಾರ್
ಕರ್ನಾಟಕ ನಾಟಕ ಅಕಾಡೆಮಿ
ಕನ್ನಡಭವನ, ಜೆ.ಸಿ.ರಸ್ತೆ
ಬೆಂಗಳೂರು – ೫೬೦ ೦೦೨
ದೂರವಾಣಿ: ೦೮೦-೨೨೨೩೭೪೮೪

ರಕ್ಷಾಪುಟ ವಿನ್ಯಾಸ:
ಕೃಷ್ಣ ರಾಯಚೂರು

ಮುದ್ರಕರು:
ರಶ್ಮಿ ಪ್ರಿಂಟರ್ಸ್
ಸುಧಾಮನಗರ, ಬೆಂಗಳೂರು
ಮೊ: ೯೯೦೧೯೧೬೫೮೧

# ಅಧ್ಯಕ್ಷರ ನುಡಿ

ಕರ್ನಾಟಕ ನಾಟಕ ಅಕಾಡೆಮಿ ಮೂರು ವರ್ಷದ ನಮ್ಮ ಅವಧಿಯ ಮುಕ್ತಾಯದ ಹಂತಕ್ಕೆ ಬಂದಿದ್ದೇವೆ. ಜಿಲ್ಲೆಗಳಲ್ಲಿ ನಾಟಕೋತ್ಸವ, ಹವ್ಯಾಸಿ ರಂಗ ತಂಡಗಳಿಗೆ ಶಿಬಿರ, ರಸಗ್ರಹಣ, ನಾಟಕ ಕಂಪನಿಗಳಿಗೆ ಹೊಸ ನಾಟಕ ಬರೆಸುವ ಯೋಜನೆ, ಪೌರಾಣಿಕ ರಂಗೋತ್ಸವ, ತಿಂಗಳ ನಾಟಕ, ರಂಗಗೀತೆ ಪ್ರಾತ್ಯಕ್ಷಿಕೆ, ಬಾಗಲಕೋಟೆ ಜಿಲ್ಲೆ ಇಳಕಲ್‌ನಲ್ಲಿ 30 ದಿನಗಳ ವೃತ್ತಿ ರಂಗಭೂಮಿ ತರಬೇತಿ ಶಿಬಿರ, ಮುಂಬಯಿ, ದೆಹಲಿ ಹಾಗೂ ಕೇರಳದ ತ್ರಿಶೂರಿನಲ್ಲಿ ಹೊರರಾಜ್ಯ ನಾಟಕೋತ್ಸವ, ಕಾಸರಗೋಡಿನಲ್ಲಿ ಗಡಿನಾಡು ಬಹುಭಾಷಾ ನಾಟಕೋತ್ಸವ ಮತ್ತು ಮೈಂದರ್ಗಿಯಲ್ಲಿ ಗಡಿನಾಡ ನಾಟಕೋತ್ಸವ ಮುಂತಾದ ಹತ್ತು ಹಲವು ವಿನೂತನ ಕಾರ್ಯಕ್ರಮಗಳನ್ನು ಕಳೆದ ಮೂರು ವರ್ಷಕಾಲ ಹಮ್ಮಿಕೊಂಡಿದ್ದೆವು.

ವಿಜಯಪುರದಲ್ಲಿ 2015 ಸೆ.24 ರಿಂದ 30 ರ ವರೆಗೆ ನಡೆದರಾಜ್ಯ ವೃತ್ತಿರಂಗ ಸಮ್ಮೇಳನದಲ್ಲಿ ಎಲ್ಲ ಕಂಪನಿಗಳ ಕಲಾವಿದರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಐದು ದಿನಗಳ ಕಾಲ ಹತ್ತು ನಾಟಕ ಕಂಪನಿಗಳಿಗೆ ಏರ್ಪಡಿಸಿದ್ದ ನಾಟಕ ಸ್ಪರ್ಧೆರಂಗ ಇತಿಹಾಸದಲ್ಲಿ ಅಪರೂಪದ್ದಾಗಿತ್ತು. ಹಿರಿಯ ಕವಿಗಳಾದ ಬಿ.ಆರ್. ಅರಿಷಿಣಗೋಡಿ ಅವರಿಗೆ ಇಳಕಲ್‌ನಲ್ಲಿ, ಎಲ್.ಬಿ.ಕೆ. ಆಲ್ದಾಳ ಅವರಿಗೆ ಕಲಬುರಗಿಯಲ್ಲಿ, ಹಿರಿಯ ನಟ ಕಂಚಿಕೇರಿ ಶಿವಣ್ಣ ಅವರಿಗೆ ದಾವಣಗೆರೆಯಲ್ಲಿ ಏರ್ಪಡಿಸಿದ್ದ ಅಭಿನಂದನೆ, ವಿಚಾರ ಸಂಕಿರಣ, ಪುಸ್ತಕ ಬಿಡುಗಡೆ ವಿಶೇಷವಾಗಿತ್ತು.

ಹಾವೇರಿಜಿಲ್ಲೆಯ ಶೇಷಗಿರಿಯಲ್ಲಿ 21 ದಿನಗಳ ಕಾಲ ರಂಗ ನೇಪಥ್ಯ ಶಿಬಿರ, ರಾಮನಗರದ ಜಾನಪದ ಲೋಕದಲ್ಲಿ ನಡೆದ ಐದು ದಿನಗಳ ನಾಟಕರಚನಾ ಶಿಬಿರ, ಶಿರಸಿಯಲ್ಲಿ ನಡೆದರಂಗವಿಮರ್ಶಾಕಮ್ಮಟ, ದೆಹಲಿಯಲ್ಲಿ ನಡೆದ ವೃತ್ತಿ ಕಂಪನಿ ನಾಟಕೋತ್ಸವ ಹಾಗೂ ಬೆಂಗಳೂರಿನ ರವೀಂದ್ರಕಲಾಕ್ಷೇತ್ರದಲ್ಲಿ ಏಳು ದಿನಗಳ ಕಾಲ ನಡೆದ ವೃತ್ತಿರಂಗಭೂಮಿ ಕಂಪನಿ ನಾಟಕೋತ್ಸವ ಕೆಲವು ಮೈಲುಗಲ್ಲುಗಳು. ವಿಶೇಷ ಘಟಕ ಯೋಜನೆಯಡಿ 30 ಜಿಲ್ಲೆಗಳಲ್ಲಿ ರಂಗಶಿಬಿರ, ನಾಟಕ ಪ್ರದರ್ಶನ ಏರ್ಪಡಿಸಿದ್ದೇವೆ. ವಿಶೇಷ ಘಟಕಯೋಜನೆಯಡಿ ಐದು

ಕಲಾವಿದರ ಮತ್ತು ಗಿರಿಜನ ಯೋಜನೆಯಲ್ಲಿ ಇಬ್ಬರು ಕಲಾವಿದರ ಸಾಕ್ಷ್ಯಚಿತ್ರ ನಿರ್ಮಾಣ ಮಾಡಲಾಗಿದೆ. 12 ವೃತ್ತಿ ನಾಟಕ ಕಂಪನಿಗಳ ಸಾಕ್ಷ್ಯಚಿತ್ರ ನಿರ್ಮಿಸಲಾಗುತ್ತಿದೆ. ಫೆಲೋಶಿಪ್ ಯೋಜನೆ ಮುಂದುವರಿದಿದೆ. ಸರಿಸುಮಾರು 20 ವರ್ಷಗಳಿಂದ ಸ್ಥಗಿತಗೊಂಡಿದ್ದ ಕರ್ನಾಟಕ ನಾಟಕ ಅಕಾಡೆಮಿಯ ಮುಖವಾಣಿ 'ಸಂವಾದ' ಪತ್ರಿಕೆಯನ್ನು ಪುನರಾರಂಭಿಸಿದ್ದೇವೆ. ನಾಟಕ ರಚನಾ ಶಿಬಿರದಲ್ಲಿ ಆಯ್ಕೆಯಾದ ಏಳು ನಾಟಕಗಳ ಸಂಕಲನವನ್ನು ಹೊರತರಲಾಗುವುದು. ಕರ್ನಾಟಕ ನಾಟಕ ಅಕಾಡೆಮಿಯು ಇದೇ ಪ್ರಥಮ ಬಾರಿಗೆ ರಾಜ್ಯಮಟ್ಟದ ಹವ್ಯಾಸಿ ರಂಗಭೂಮಿ ಸಮಾವೇಶವನ್ನು ಐದು ದಿನಗಳ ಕಾಲ ಧಾರವಾಡದಲ್ಲಿ ಏರ್ಪಡಿಸಿತ್ತು.

ಪುಸ್ತಕಗಳ ಪ್ರಕಟನೆ ನಾಟಕ ಅಕಾಡೆಮಿಯ ಮಹಾತ್ವಾಕಾಂಕ್ಷೆಯ ಯೋಜನೆ. ಮೊದಲ ಸರ್ವ ಸದಸ್ಯರ ಸಭೆಯಲ್ಲಿ ಪ್ರಕಟಣಾ ಸಮಿತಿ ರಚಿಸಿ ಕಾರ್ಯಪ್ರವೃತ್ತ ರಾಗಿದ್ದೆವು. ಪ್ರಥಮ ಹಂತದಲ್ಲಿ ಜಿಲ್ಲಾ ರಂಗವಾಹಿತಿ ಮಾಲಿಕೆ ಮತ್ತು ರಂಗಸಂಪನ್ನರು ಮಾಲಿಕೆಯ 18 ಪುಸ್ತಕಗಳು ಬಿಡುಗಡೆಯಾಗಿವೆ. ಎರಡನೇ ಹಂತದಲ್ಲಿ 15 ಪುಸ್ತಕಗಳು ಬಿಡುಗಡೆಯಾಗುತ್ತಿವೆ. ಶತಮಾನದ ಶಕಪುರುಷ ಏಣಗಿ ಬಾಳಪ್ಪ, ರಂಗಭೂಮಿ ಮತ್ತು ಮಹಿಳೆ ಪುಸ್ತಕಗಳನ್ನು ಹೊರತರಲಾಗಿದೆ. 1959 ರಿಂದ 2016 ರ ವರೆಗಿನ ನಾಟಕ ಅಕಾಡೆಮಿಯ ಎಲ್ಲಾ ಪ್ರಶಸ್ತಿ ಪುರಸ್ಕೃತರ ಪರಿಚಯದ ಪುಸ್ತಕವನ್ನು ಹೊರತರಲು ಕ್ರಮ ವಹಿಸಲಾಗುತ್ತಿದೆ. ಈ ಎಲ್ಲಾ ಕನಸು ಸಾಕಾರಗೊಳ್ಳಲು ಶ್ರಮಿಸಿದ ಪ್ರಕಟಣಾ ಸಮಿತಿ ಸದಸ್ಯರು/ ನಾಟಕ ಅಕಾಡೆಮಿ ಸದಸ್ಯರು ಹಾಗೂ ಜಿಲ್ಲಾರಂಗಮಾಹಿತಿ ಮಾಲಿಕೆಯಡಿ ಸರಿಸುಮಾರು 25 ಮತ್ತು ರಂಗಸಂಪನ್ನರು ಮಾಲಿಕೆಯಡಿ 15 ಕಲಾವಿದರ ಪುಸ್ತಕಗಳನ್ನು ಬರೆದುಕೊಟ್ಟ ಎಲ್ಲಾ ಲೇಖಕರಿಗೆ, ಪುಸ್ತಕವನ್ನು ಸಕಾಲಕ್ಕೆ ಮುದ್ರಿಸಿಕೊಟ್ಟ ರಶ್ಮಿ ಪ್ರಿಂಟರ್ಸ್ ಅವರಿಗೂ, ಅಕಾಡೆಮಿಯ ರಿಜಿಸ್ಟ್ರಾರ್ ಶ್ರೀ ಬಿ. ಮಂಜುನಾಥ ಆರಾಧ್ಯ ಹಾಗೂ ಅಕಾಡೆಮಿಯ ಎಲ್ಲ ಸಿಬ್ಬಂದಿ ವರ್ಗದವರಿಗೂ ಕೃತಜ್ಞತೆಗಳು.

**ಎಲ್.ಬಿ.ಶೇಖ (ಮಾಸ್ತರ)**
ಅಧ್ಯಕ್ಷರು
ಕರ್ನಾಟಕ ನಾಟಕ ಅಕಾಡೆಮಿ

# ಇದು ಆರಂಭ

ಒಂದೊಂದು ಜಿಲ್ಲೆಗಳ ರಂಗಮಾಹಿತಿ ಪ್ರತ್ಯೇಕವಾಗಿ ಪುಸ್ತಕ ರೂಪದಲ್ಲಿ ಲಭ್ಯವಿರಬೇಕು ಎನ್ನುವುದು ನಾಟಕ ಅಕಾಡೆಮಿಯ ಬಹುದಿನದ ಕನಸು. ಇದು ಗುರುತರ ಕೆಲಸ. ಬಿ.ವಿ. ರಾಜಾರಾಂ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಇದಕ್ಕೆ ಚಾಲನೆ ನೀಡಲಾಯಿತು. ಅಕಾಡೆಮಿ ಸದಸ್ಯರಿಗೆ ಇದರ ಹೊಣೆ ಹೊರಿಸಿ ಜಿಲ್ಲೆಯ ಮಟ್ಟದಲ್ಲಿ ಮಾಹಿತಿ ಸಂಗ್ರಹಿಸುವ ಹತ್ತಾರು ರಂಗಕರ್ಮಿಗಳ ಸಂಪಾದಕೀಯ ಸಮಿತಿ ರಚಿಸಲಾಯಿತು. ಹಾಗೂ ಹೀಗೂ 5-6 ಜಿಲ್ಲೆಗಳ ರಂಗಮಾಹಿತಿಯೂ ಸಿದ್ಧಗೊಂಡಿತು. ಆದರೆ ಪುಸ್ತಕಗಳು ಹೊರಬರಲಿಲ್ಲ. ಜಿಲ್ಲೆಯ ಮಟ್ಟದಲ್ಲಿ ಹೆಚ್ಚಿನ ಜನರನ್ನು ಈ ಕೆಲಸಕ್ಕಾಗಿ ತೊಡಗಿಸುವುದು ಕಷ್ಟಕರ. ನಮ್ಮ ಮಿತಿಯಲ್ಲಿ ಅಪ್ರಾಯೋಗಿಕ ಎನಿಸಿತು. ಅಂತೆಯೇ ಒಂದು ಜಿಲ್ಲೆಯ ರಂಗಮಾಹಿತಿ ಸಂಗ್ರಹಿಸಿ ಬರೆಯುವ ಕೆಲಸವನ್ನು ಒಬ್ಬರಿಗೇ ವಹಿಸಿ ಕಾರ್ಯಪ್ರವೃತ್ತರಾದೆವು. ಅದಕ್ಕಾಗಿ 'ಜಿಲ್ಲಾರಂಗಮಾಹಿತಿ' ಮಾಲಿಕೆ ಯೋಜನೆ ರೂಪಿಸಲಾಯಿತು. ಅದು ಫಲ ನೀಡಿತು. ಇಪ್ಪತ್ತಕ್ಕೂ ಅಧಿಕ ಜಿಲ್ಲೆಗಳ ರಂಗಮಾಹಿತಿ ಪುಸ್ತಕಗಳು ಈಗ ಹೊರಬಂದವು.

ಜಿಲ್ಲೆಯ ರಂಗಭೂಮಿ ಸಂಕ್ಷಿಪ್ತ ಇತಿಹಾಸ; ಹವ್ಯಾಸಿ, ವೃತ್ತಿತಂಡಗಳು, ನಟ ನಟಿ, ನಿರ್ದೇಶಕ, ನೇಪಥ್ಯ ಕಲಾವಿದರ ಸಂಕ್ಷಿಪ್ತ ಪರಿಚಯ; ರಂಗಮಂದಿರ – ಹೀಗೆ 13 ವಿಷಯಗಳ ಪಟ್ಟಿಮಾಡಿ ಲೇಖಕರಿಗೆ ಕಳಿಸಿಕೊಟ್ಟಿದ್ದೆವು. ರಂಗಲೇಖಕರು ವಿರಳವಾಗಿರುವುದರಿಂದ ಕೆಲವು ಜಿಲ್ಲೆಗಳಲ್ಲಿ ಕಲಾವಿದರಿಗೇ ಬರಹದ ಕೆಲಸ ನೀಡಲಾಗಿತ್ತು. ಒಬ್ಬರು ಕಲಾವಿದರ ಮೂಲಕ, ಮತ್ತೊಬ್ಬರು ನಾಟಕಕಾರರ ಮೂಲಕ, ಮತ್ತೆ ಕೆಲವರು ರಂಗತಂಡಗಳ ಕ್ರಿಯಾಶೀಲತೆ ಮೂಲಕ ಜಿಲ್ಲೆಯ ರಂಗಮಾಹಿತಿ ಹಿಡಿದಿಡುವ ಪ್ರಯತ್ನ ಮಾಡಿದ್ದಾರೆ. ದಾಖಲೆಗಳು ಸರಿಯಾಗಿ ಲಭ್ಯವಿಲ್ಲದ ಕಾರಣ ಲೇಖಕರು ತಮ್ಮ ಶಕ್ತ್ಯಾನುಸಾರ ಸಂಗ್ರಹಿಸಿ ಬರೆದಿದ್ದಾರೆ. ಆದ್ದರಿಂದ ಇದನ್ನು ಯಾರೂ ಸಮಗ್ರ ಎಂದು ಭಾವಿಸಬಾರದು. ಜಿಲ್ಲೆಯ ಕುರಿತು ಒಂದು ಪಕ್ಷಿನೋಟ ಇದು. ಒಂದು ಜಿಲ್ಲೆಯ ಕೆಲವಷ್ಟು ಮಾಹಿತಿಯನ್ನು ಈ ಪುಸ್ತಕಗಳು ಒಳಗೊಂಡಿವೆ. ಇದೊಂದು ಆರಂಭ. ಇದನ್ನು ಮುಂದುವರಿಸಲು ಸಂಘ ಸಂಸ್ಥೆ, ವಿಶ್ವವಿದ್ಯಾಲಯಗಳಿಗೆ ಅವಕಾಶವಿದೆ.

**ಮಹಾನಗರದ ಬಗಲಲ್ಲಿ ಗ್ರಾಮೀಣ ಸೊಗಡು**

ಬೆಂಗಳೂರು ಮಹಾನಗರಕ್ಕೆ ಹೊಂದಿಕೊಂಡಿರುವ ರಾಮನಗರ ಜಿಲ್ಲೆಯ ರಂಗಚಟುವಟಿಕೆ ಬಹುತೇಕ ಗ್ರಾಮೀಣ ಸೊಗಡನ್ನು ಒಳಗೊಂಡಿದೆ. ಪೌರಾಣಿಕ, ಜಾನಪದ ಕಲಾಪ್ರಕಾರಗಳು ಇಲ್ಲಿ ಸಮೃದ್ಧಿ. ಆಧುನಿಕ ಪ್ರಯೋಗಶೀಲತೆಗೂ ಈ ಜಿಲ್ಲೆ ಒಗ್ಗಿಸಿಕೊಂಡಿದೆ. ಸಾಧಕರ ವಿವರಗಳೊಂದಿಗೆ ರಾಮನಗರ ಜಿಲ್ಲೆ ರಂಗವಿನ್ಯಾಸವನ್ನು ಗ್ರಹಿಸುವ ಪ್ರಯತ್ನವನ್ನು ಲೇಖಕ ಗೋವಿಂದಸ್ವಾಮಿ ಇಲ್ಲಿ ಮಾಡಿದ್ದಾರೆ.

ರಂಗತಜ್ಞ ಎ.ಆರ್. ಗೋವಿಂದಸ್ವಾಮಿ ಅವರು ಸಂಶೋಧಕನ ಶಿಸ್ತಿನಿಂದ ರಾಮನಗರ ಜಿಲ್ಲೆಯ ಕುರಿತು ಅಪಾರ ಮಾಹಿತಿಯನ್ನು ಇಲ್ಲಿ ಸಂಗ್ರಹಿಸಿ ಕೊಟ್ಟಿದ್ದಾರೆ. ಹೊಸ ಜಿಲ್ಲೆಯ ರಂಗ ಇತಿಹಾಸಕ್ಕೆ ಇದು ಮುನ್ನುಡಿಯಂತೆ ಇದೆ. ರಂಗಭೂಮಿಯ ಪ್ರಯೋಗಶೀಲತೆ ಹೆಚ್ಚಬಹುದಾದ ಈ ಜಿಲ್ಲೆಯ ವಿಶೇಷತೆಯನ್ನು ಅವರು ಗುರುತಿಸಿದ್ದಾರೆ.

**– ಗುಡಿಹಳ್ಳಿ ನಾಗರಾಜ**
ಪ್ರಕಟಣಾ ಸಮಿತಿ ಪರವಾಗಿ

**ಎಂ.ಎಸ್. ಗುಣಶೀಲನ್**
**ಎಸ್.ಕೆ. ಕೊನೆಸಾಗರ**
**ಮುದ್ದಣ್ಣ ರಟ್ಟೇಹಳ್ಳಿ**
ಪ್ರಕಟಣಾ ಸಮಿತಿ ಸದಸ್ಯರು

# ಕರ್ನಾಟಕ ನಾಟಕ ಅಕಾಡೆಮಿ


ಅಕಾಡೆಮಿ ಅಧ್ಯಕ್ಷರು ಮತ್ತು ಸದಸ್ಯರ ಪಟ್ಟಿ

**ಎಲ್.ಬಿ. ಶೇಖ (ಮಾಸ್ತರ)**
ಅಧ್ಯಕ್ಷರು, ಕರ್ನಾಟಕ ನಾಟಕ ಅಕಾಡೆಮಿ, ವಿಜಯಪುರ

ಸದಸ್ಯರು, ಕರ್ನಾಟಕ ನಾಟಕ ಅಕಾಡೆಮಿ

ಶ್ರೀ ಪಿ. ತಿಪ್ಪೇಸ್ವಾಮಿ, ಚಳ್ಳಕೆರೆ
ಶ್ರೀ ರಾಜಪ್ಪ ಕಿರಗಸೂರು, ಮೈಸೂರುಜಿಲ್ಲೆ
ಶ್ರೀ ಎಸ್.ಕೆ. ಕೊನೆಸಾಗರ, ಹುನಗುಂದ
ಶ್ರೀ ಎಂ.ಎಸ್. ಗುಣಶೀಲನ್, ಬೆಂಗಳೂರು
ಶ್ರೀಮತಿ ಕಲ್ಪನಾ ನಾಗನಾಥ್, ಬೆಂಗಳೂರು
ಶ್ರೀ ಮುದ್ದಣ್ಣ ರಟ್ಟೆಹಳ್ಳಿ, ಹಾವೇರಿ
ಶ್ರೀಮತಿ ಅನ್ನಪೂರ್ಣ ಸಾಗರ, ಶಿವಮೊಗ್ಗ ಜಿಲ್ಲೆ
ಶ್ರೀ ಎಚ್. ಷಡಾಕ್ಷರಪ್ಪ ಹೊಸಮನಿ, ಹರಪನಹಳ್ಳಿ
ಶ್ರೀ ಕೆ. ಜಗುಚಂದ್ರ, ಧಾರವಾಡ
ಶ್ರೀ ಉಮೇಶ ಸಾಲಿಯಾನ, ಕಾಸರಗೋಡು
ಶ್ರೀ ಹಾಲ್ಕುರಿಕೆ ಶಿವಶಂಕರ್, ಕೊಪ್ಪಳ
ಶ್ರೀ ವಿ.ಎನ್. ಅಕ್ಕಿ, ರಾಯಚೂರು
ಶ್ರೀ ಬಿ.ಎಂ. ರಾಮಚಂದ್ರ, ಮೈಸೂರು
ಶ್ರೀ ಎನ್.ಕೆ. ರಾಮಕೃಷ್ಣ, ಬೆಂಗಳೂರು
ಶ್ರೀಮತಿ ಎ.ವರಲಕ್ಷ್ಮಿ, ಬಳ್ಳಾರಿ

ಕೋಪ್ಟ್ ಆದ ಸಹಸದಸ್ಯರು
ಶ್ರೀ ಗುಡಿಹಳ್ಳಿ ನಾಗರಾಜ, ಬೆಂಗಳೂರು
ಡಾ. ಶ್ರೀಪಾದ ಭಟ್, ಶಿರಸಿ
ಶ್ರೀ ಎಲ್.ಎಚ್. ರಂಗನಾಥಪ್ಪ, ಶಿರಾ

ರಿಜಿಸ್ಟ್ರಾರ್:
ಬಿ. ಮಂಜುನಾಥ ಆರಾಧ್ಯ

ಯೋಜನಾ ಸಹಾಯಕರು:
ಕೆ. ರೇವಣ್ಣ

ಕಚೇರಿ ಸಿಬ್ಬಂದಿ:
ಸೌಭಾಗ್ಯಲಕ್ಷ್ಮೀ, ಎಂ. ಭೋಜಣ್ಣ, ಸುಶೀಲಮ್ಮ

# ಲೇಖಕರ ನುಡಿ

ಭಾರತದಲ್ಲಿ ಒಂದು ಇತಿಹಾಸ ಹಾಗೂ ಪರಂಪರೆಯನ್ನು ದಾಖಲಿಸುವುದನ್ನು ನಾವು ಇತ್ತೀಚೆಗಷ್ಟೇ ಕಲಿತಿದ್ದೇವೆ. ನಮ್ಮ ಪೂರ್ವಿಕರ ಬಗ್ಗೆ ನಮ್ಮಲ್ಲಿ ಸಾಕಷ್ಟು ಮಾಹಿತಿ ಸಿಗುವುದಿಲ್ಲ. ಕಾರಣ ದಾಖಲಾತಿಯ ಕೊರತೆ. ಈ ನಿಟ್ಟಿನಲ್ಲಿ 'ಕರ್ನಾಟಕ ನಾಟಕ ಅಕಾಡೆಮಿ' ಕಾಳಜಿ ಬಹುಮುಖ್ಯ. ಅವರು ರಂಗ ತಂಡಗಳು, ರಂಗ ಕಲಾವಿದರು, ತಂತ್ರಜ್ಞರು, ಸಂಪನ್ಮೂಲ ವ್ಯಕ್ತಿಗಳ ದಾಖಲಾತಿಗೆ ಮುಂದಾಗಿದೆ. ಆಧುನಿಕ ಯುಗದಲ್ಲಿ ಪಾಠಶಾಲೆಗಳು ಕಲಿಸುವ 'ಜ್ಞಾನ'ಕ್ಕೆ ಸಂಪೂರ್ಣವಾಗಿ ಒಂದು ಚಟುವಟಿಕೆಯ ರೂಪಕೊಟ್ಟು, ಸಮಾಜ ಪರಿವರ್ತನೆ, ಅದರ ಸ್ವಾಸ್ಥ್ಯತೆ ಕಾಪಾಡುವುದರ ಜೊತೆಗೆ ಸಂಪೂರ್ಣ ವ್ಯಕ್ತಿತ್ವ ವಿಕಾಸಗೊಳಿಸುವ ಮೂಲಕ, ವಿಶ್ವದಲ್ಲಿ ಶಾಂತಿ ಸ್ಥಾಪಿಸುವಷ್ಟು ಬೃಹತ್ ಪ್ರಭಾವಶಾಲಿ ಶಕ್ತಿಯಾಗಿ ರಂಗಭೂಮಿ ಕೆಲಸ ಮಾಡುತ್ತಿದೆ. ರಂಗ ಕಲಾವಿದರ ಬಗ್ಗೆ ದಾಖಲಾತಿ ಆಲೋಚನೆಯೇ ವಿಶಿಷ್ಟವಾದುದು. ಅಂದೇ ರಂಗದಲ್ಲಿ ಹುಟ್ಟಿ ಅಲ್ಲೇ ಅವಸಾನ ಹೊಂದುವ ಜಾಯಮಾನ ರಂಗಭೂಮಿಯದಾಗಿದೆ. ಹೀಗಿದ್ದೂ ಶ್ರಮಜೀವಿಗಳ ಬಗ್ಗೆ ದಾಖಲಾತಿ ಇರದಿದ್ದರೆ ಹೇಗೆ? ಇದನ್ನು ಸಾಕಾರಗೊಳಿಸುವ ಸಾರ್ಥಕ ಪ್ರಯತ್ನ ಮಾಡಿದ ನಾಟಕ ಅಕಾಡೆಮಿ ಹಿಂದಿನ ಅಧ್ಯಕ್ಷರಾದ ಡಾ.ಬಿ.ವಿ.ರಾಜಾರಾಂ, ಇಂದಿನ ಅಧ್ಯಕ್ಷರಾದ ಶ್ರೀ ಎಲ್.ಬಿ.ಶೇಖ್ ಮಾಸ್ತರ್, ನಾಟಕ ಅಕಾಡೆಮಿ ಯ ಎಲ್ಲಾ ಸದಸ್ಯರಿಗೆ ಅಭಿನಂದನೆ ಸಲ್ಲಬೇಕು. ಮತ್ತು ನನಗೆ 'ರಾಮನಗರ ಜಿಲ್ಲಾ ರಂಗಮಾಹಿತಿ ಕೈಪಿಡಿ' ಸಂಪಾದಿಸಿಕೊಡುವ ಜವಾಬ್ದಾರಿ ನೀಡಿದಕ್ಕಾಗಿ ನಾನು ಸಹ ಋಣಿಯಾಗಿದ್ದೇನೆ. ಮಾಹಿತಿ ನೀಡಿದ ರಾಮನಗರ ಜಿಲ್ಲೆಯ ರಂಗಬಳಗಕ್ಕೆ ವಿಶೇಷ ಧನ್ಯವಾದಗಳು. ಬಿ.ವಿ.ರಾಜಾರಾಂ ಅವರ ಅವಧಿಯಲ್ಲಿ ಮುದ್ರಣ ಕಾಣಬೇಕಾಗಿದ್ದ ಈ ಕೃತಿ ಮತ್ತೇ ಪ್ರಸ್ತುತ ನಾಟಕ ಅಕಾಡಮಿ ಅಧ್ಯಕ್ಷರಾದ ಶ್ರೀ ಎಲ್.ಬಿ. ಶೇಖ್ ಮಾಸ್ತರ್, ಇಂದಿನ ರಿಜಿಸ್ಟ್ರಾರ್ ಶ್ರೀ ಮಂಜುನಾಥ ಆರಾಧ್ಯ ಮತ್ತು ಸದಸ್ಯರಾದ ಗುಡಿಹಳ್ಳಿ ನಾಗರಾಜ ಹಾಗೂ ಎಲ್ಲಾ ಸದಸ್ಯರ ಕಾಳಜಿಯಿಂದ ರಂಗ ಮಾಹಿತಿ ಮುದ್ರಣ ಕಂಡಿತು. ಸಾಧ್ಯವಾದಷ್ಟು ಇತ್ತೀಚಿನ ಕೆಲವೊಂದು ಮಾಹಿತಿಯನ್ನು ಸೇರ್ಪಡೆ ಮಾಡಲಾಗಿದೆ.

ರಾಮನಗರ ಜಿಲ್ಲಾ ರಂಗ ಮಾಹಿತಿ ಕೈಪಿಡಿ ಸಂಗ್ರಹಿಸುವಾಗ ನನಗೆ ತಿಳಿದ ಸಂಗತಿ ಎಂದರೆ ಬಹುತೇಕ ತಾಲ್ಲೂಕುಗಳಲ್ಲಿ ಹಬ್ಬ, ಜಾತ್ರೆ ಹಾಗೂ ಯಾವುದಾದರೂ ಸಂದರ್ಭವನ್ನು ನೆಪಮಾಡಿಕೊಂಡು ಪೌರಾಣಿಕ ನಾಟಕಗಳನ್ನೇ ಹೆಚ್ಚಾಗಿ ಆಡುತ್ತಾರೆ. ಹವ್ಯಾಸಿ ನಾಟಕಗಳು ಹಾಗೂ ಕಲಾವಿದರು ಬೆರಳೆಣಿಕೆಯಷ್ಟು ಮಂದಿ ಮಾತ್ರ ಇದ್ದಾರೆ.

ರಂಗ ದಾಖಲಾತಿ ಕೆಲಸ ಸವಾಲಿನದೇ ಆಗಿದೆ. ನಾನು ಹಲವಾರು ಬಾರಿ ಪತ್ರಿಕೆಯಲ್ಲಿ ಹೇಳಿಕೆಕೊಟ್ಟು, ಖುದ್ದಾಗಿ ರಂಗ ಸಂಪನ್ಮೂಲ ವ್ಯಕ್ತಿಗಳನ್ನು, ಪತ್ರಕರ್ತರನ್ನು, ಸ್ವತಃ ಕಲಾವಿದರನ್ನು ಬೇಟಿಯಾಗಿ ವಿನಂತಿಸಿದರೂ ಸಾಕಷ್ಟು ಪ್ರಮಾಣದ ಮಾಹಿತಿ ಲಭ್ಯವಾಗಲಿಲ್ಲ. ಆದಾಗ್ಯೂ ಲಭ್ಯ ಮಾಹಿತಿಯಲ್ಲಿಯೇ ರಂಗ ದಾಖಲಾತಿಗೆ ಮುಂದಾಗಿದ್ದೇನೆ. ಇದೇ ಅಂತಿಮ ಅಲ್ಲ ಎಂಬ ಪ್ರಜ್ಞೆ ಸಹ ನನಗಿದೆ. ಈ ಕೆಲಸದಲ್ಲಿ ನನಗೆ ಸಹಕರಿಸಿದವರಲ್ಲಿ ನಾಟಕ ಅಕಾಡೆಮಿ ಹಿಂದಿನ ರಿಜಿಸ್ಟ್ರಾರ್ ಶ್ರೀ ಟಿ.ಜಿ.ನರಸಿಂಹಮೂರ್ತಿ, ರಂಗಕರ್ಮಿ ಜಿ.ವಿ. ಪ್ರಸನ್ನಕುಮಾರ್, ರಂಗಮಾಹಿತಿ ನೀಡಿದ ಕನಕಪುರದ ಕೂ.ಗಿ. ಗಿರಿಯಪ್ಪ, ರಾಮನಗರದ ಶ್ರೀಮತಿ ಶಾಂತಮ್ಮ, ರಾ.ಬಿ. ನಾಗರಾಜ, ದಿ. ಮರಿದೇವರು, ಶ್ರೀಮತಿ ವರಲಕ್ಷ್ಮಿ, ಎನ್, ಬೈರೇಗೌಡ, ಆರ್. ಮೂರ್ತಿನಾಯಕ್, ಶೇಷಪ್ಪ, ಚನ್ನಪಟ್ಟಣದ ಜಯರಾಮು. ಎಸ್.ಕೆ., ಎಂ.ಆರ್. ರಾಮಸ್ವಾಮಿ, ಮಾಗಡಿಯ ಖಂಡಪರಶು, ಬಿ.ವಿ. ಗುರುಮೂರ್ತಪ್ಪ ಅವರ ಮೊಮ್ಮಗ ಪ್ರಭಾಕರ್ ಮುಂತಾದ ಪ್ರಮುಖರು ಹಾಗೂ ರಂಗ ಗೆಳೆಯರಿಗೆ ಹಾಗೂ ಸ್ಥಳೀಯ ಎಲ್ಲಾ ಪತ್ರಕರ್ತ ಮಿತ್ರರಿಗೆ ಚಿರಋಣಿಯಾಗಿದ್ದೇನೆ.

**– ಡಾ. ಎ.ಆರ್. ಗೋವಿಂದಸ್ವಾಮಿ**

# ರಾಮನಗರ ಜಿಲ್ಲಾ ರಂಗಭೂಮಿ ಕಲಾವಿದರ ಕೈಪಿಡಿ

## ರಾಮನಗರ ಜಿಲ್ಲಾ ನಕಾಸೆ



ಕೆಂಪು ವರ್ಣ ರಾಮನಗರ ಜಿಲ್ಲೆಯನ್ನು ಸೂಚಿಸುತ್ತದೆ

# ರಾಮನಗರ
# ಸಾಂಸ್ಕೃತಿಕ/ಪ್ರೇಕ್ಷಣೀಯ ಸ್ಥಳಗಳು



**ಸಾಂಸ್ಕೃತಿಕ/ಪ್ರೇಕ್ಷಣೀಯ ತಾಣ:**


'ಜಾನಪದ ಲೋಕ' ರಾಮನಗರ

**ವನ್ಯಜೀವಿ ತಾಣ:**

1. 'ಜಿಂಕೆ ವನ' ಸಾವನದುರ್ಗ ಬೆಟ್ಟ, ಮಾಗಡಿ.

**ಐತಿಹಾಸಿಕ ತಾಣಗಳು:**

1. ಶ್ರೀ ರೇವಣ ಸಿದ್ದೇಶ್ವರ ಬೆಟ್ಟ, ಅಮ್ಮನಪುರ, ಶ್ರೀ ರಾಮದೇವರಬೆಟ್ಟ (ರಾಮಗಿರಿ), ರಾಮನಗರ, ಮಣಕನಲ್ ಬೆಟ್ಟ, ಸಾವನದುರ್ಗ ಬೆಟ್ಟ, ಮಾಗಡಿ ರಂಗನಾಥಸ್ವಾಮಿ ದೇವಸ್ಥಾನ, ಮುತ್ತತ್ತಿ, ಕಬ್ಬಾಳು ದೇವಸ್ಥಾನ ಮುಂತಾದವು



ಶ್ರೀ ರೇವಣ ಸಿದ್ದೇಶ್ವರ ಬೆಟ್ಟದ ಒಂದು ನೋಟ

**ಶಿಲಾರೋಹಣ ಸ್ಥಳಗಳು:**

1. ಶ್ರೀ ರಾಮದೇವರ ಬೆಟ್ಟ, 2. ಶ್ರೀ ರೇವಣಸಿದ್ದೇಶ್ವರ ಬೆಟ್ಟ, 3. ಸಾವನ ದುರ್ಗ ಬೆಟ್ಟ ಮುಂತಾದವು

**ಜಲಾಶಯಗಳು/ಜಲಪಾತಗಳು:**

ಕಣ್ವ ಜಲಾಶಯ, ತಿಪ್ಪಗೊಂಡನಹಳ್ಳಿ ಜಲಾಶಯ, ಮಂಚನಬೆಲೆ ಜಲಾಶಯ, ಮೇಕೆದಾಟು, ಚುಂಚಿ ಜಲಪಾತ

## ರಾಮನಗರ ಜಿಲ್ಲೆಯ ಪಕ್ಷಿನೋಟ

ರಾಜ್ಯದ ಜಿಲ್ಲೆಗಳಲ್ಲಿ ಒಂದಾದ 'ರಾಮನಗರ ಜಿಲ್ಲೆ'ಯು ಶ್ರೀಮಂತ ಇತಿಹಾಸ ಹಾಗೂ ಐತಿಹ್ಯ ಹೊಂದಿರುವ ಸಮೃದ್ಧ ಜಿಲ್ಲೆಯಾಗಿದೆ. ಬೆಂಗಳೂರು ಮೈಸೂರು ಹೆದ್ದಾರಿಯಲ್ಲಿರುವ ರಾಮನಗರವು ಕರ್ನಾಟಕದ ರಾಜಧಾನಿ ಬೆಂಗಳೂರಿನಿಂದ 50 ಕಿ.ಮೀ. ದೂರದಲ್ಲಿದೆ. 2007 ಆಗಸ್ಟ್ 23 ರಂದು ಇದನ್ನೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯಿಂದ ಪ್ರತ್ಯೇಕಗೊಳಿಸಿ ರಾಜ್ಯದ ಇಪ್ಪತ್ತೆಂಟನೇ ಜಿಲ್ಲೆಯಾಗಿ ರಾಮನಗರ, ಚನ್ನಪಟ್ಟಣ, ಕನಕಪುರ ಹಾಗೂ ಮಾಗಡಿ ವ್ಯಾಪ್ತಿಯ ಪ್ರದೇಶಗಳನ್ನು ಒಳಗೊಂಡಂತೆ ನೂತನ ರಾಮನಗರ ಜಿಲ್ಲೆ ಅಸ್ತಿತ್ವಕ್ಕೆ ಬಂದಿತು.

## ಜಿಲ್ಲೆಯ ಜಾನಪದ ಸಂಪತ್ತು

ರಾಮನಗರ ಜಿಲ್ಲೆ ಜನಪದ ವೈವಿಧ್ಯದ ಗಣಿ. ಇಲ್ಲಿ ಎಲ್ಲಾ ಬಗೆಯ ಜಾನಪದ ಪ್ರಕಾರಗಳೂ ಲಭ್ಯ. ಗಾದೆ, ಕಥೆ, ಒಗಟು, ಗೀತೆ, ಕಥನಗೀತೆ, ಲಾವಣಿ, ಕಥನಕಾವ್ಯ, ಮಹಾಕಾವ್ಯ, ತತ್ವಪದಗಳು, ಬೈಗುಳಗಳು, ಜನಪದ, ಕಣಿವೆ ಮಾದೇಶ್ವರ ಇತ್ಯಾದಿ ದೈವದಂಬಂಧಿ ಹಬ್ಬಗಳು, ಶಿವನಹಳ್ಳಿ, ಕನಕಪುರ, ಹಾರೋಹಳ್ಳಿ, ಕಲ್ಲಹಳ್ಳಿ ಮುಂತಾದ ದನಗಳ ವ್ಯಾಪಾರದ ಜಾತ್ರೆ ಪರಿಷೆಗಳು ತಾಲ್ಲೂಕಿನಾದ್ಯಂತ ಆಚರಣೆಯಲ್ಲಿವೆ.

## ಜಿಲ್ಲೆಯ ಜನಪದ ಕಲೆಗಳು

ಜನಪದ ಕಲೆಗಳು ಜನಜೀವನದ ಅವಿಭಾಜ್ಯ ಅಂಗ. ಜಾನಪದರ ಬದುಕಿನ ನಾಡಿಮಿಡಿತ. ಜೀವನ ಮೌಲ್ಯವೇ ಈ ಕಲೆಗಳ ನೆಲೆಗಟ್ಟು, ಸಾವಿರಾರು

ವರ್ಷಗಳಿಂದ ಉಳಿದುಬಂದಿರುವ ಇವು ಕೇವಲ ಮನರಂಜನೆ, ಪುರಾಣ ಪುಣ್ಯಕಥೆಗಳ ಅಭಿವ್ಯಕ್ತಿಗಳಿಗಷ್ಟೇ ಮೀಸಲಾಗಿರದೆ ಜನಪದರ ನೋವು ನಲಿವುಗಳೊಂದಿಗೆ, ಆಸರಿಕೆ ಬೇಸರಿಕೆಗಳೊಂದಿಗೆ ಬದುಕಿನುದ್ದಕ್ಕೂ ಸ್ಪಂದಿಸುತ್ತಾ ಬಂದಿವೆ. ಜಾನಪದರ ಬದುಕಿನ ಪದರ ಪದರಗಳಲ್ಲೂ ಹರಡಿಕೊಂಡು ಪ್ರತಿಕ್ಷಣವೂ ಜೀವನೋತ್ಸಾಹವನ್ನು ಉಕ್ಕಿಸುತ್ತವೆ. ಮೈಸೋತ, ಮನಸೋತ ಬರಡು ಬದುಕಿನಲ್ಲಿಯೂ ಸಹ ತಮ್ಮ ಸರಳವಾದ, ನೇರವಾದ ಆಕರ್ಷಕ ಗುಣಗಳಿಂದ ಜನಸಮುದಾಯದ ಮನಸ್ಸನ್ನು ತಮ್ಮೆಡೆಗೆ ಸೆಳೆಯುತ್ತವೆ. ಕಲೆ, ಧರ್ಮ ಮತ್ತು ವಿಜ್ಞಾನ ಇವು ಮೂರೂ ಮನುಷ್ಯ ಸಂಸ್ಕೃತಿಯ ಮುಖ್ಯಾಂಶಗಳಾಗಿದ್ದು, ಎಂದೂ ಹುಟ್ಟಿದವೆಂಬುದನ್ನು ಹೇಳಬರುವುದಿಲ್ಲ.

ಕ್ರಿ.ಪೂ. 4000 ವರ್ಷಗಳಷ್ಟು ಹಿಂದೆಯೇ ಬೆಂಗಳೂರು ಜಿಲ್ಲೆಯ ಉನ್ನತ ಸಂಸ್ಕೃತಿಯೊಂದರ ನೆಲೆವೀಡಾಗಿತ್ತು ಹಾಗೂ ಹೊರ ನಾಡುಗಳೊಡನೆ ವ್ಯಾಪಾರೀ ಸಂಬಂಧವನ್ನು ಹೊಂದಿತ್ತು ಎಂಬುದರ ಬಗ್ಗೆ ನಿಖರ ಮಾಹಿತಿಗಳು ಲಭ್ಯವಿರುತ್ತವೆ. ಹಲವಾರು ಜನಪದ ಕಲೆಗಳು ಕಂಡುಬರುತ್ತವೆ. ಪೂಜಾಕುಣಿತ, ಲಂಬಾಣಿ ಕುಣಿತ, ಪಟಾಕುಣಿತ, ವಿವಿಧ ಮಾರಮ್ಮಗಳ ಕರಗದ ಕುಣಿತ, ಶಿವನಹಳ್ಳಿಯ ನಂದಿಧ್ವಜದ ಕುಣಿತ, ವೀರಗಾಸೆ ಕುಣಿತ, ಕೊಳಗೊಂಡನಹಳ್ಳಿಯ ನಾಗರಾಜು ಮತ್ತು ತಂಡ, ದೊಡ್ಡಕಬ್ಬಳ್ಳಿಯ ಚಾಮಯ್ಯ ಇವರುಗಳ ಬೀಸುಕಂಸಾಲೆ, ಹಲಗೆ ಮೇಳ, ಒನಕೆ ಕುಣಿತ, ಕೋಲಾಟ, ಭಜನೆ, ಪಂಡರಿಭಜನೆ, ಗೊರವರ ಕುಣಿತ, ಹುಲಿವೇಷ, ಕತ್ತಿವರಸೆ, ದೊಣ್ಣೆವರಸೆ, ಬಿಜಲಿವರಸೆ, ಕರಡಿಕುಣಿತ, ತಮಟೆ, ಪಾರ್ಸಿ, ಮಹಿಳಾಕಂಸಾಳೆ ಕಲೆಯೂ ಕೂಡ ಇಲ್ಲಿದೆ. ಇವುಗಳ ಜೊತೆಗೆ ಬಯಲು ಅಟ್ಟದ ಮೇಲೆ ಪ್ರದರ್ಶಿಸುವ ಅನೇಕ ನಾಟಕ ಕಲೆಗಳು ತಾಲ್ಲೂಕಿನಾದ್ಯಂತ ಕಂಡುಬರುತ್ತವೆ.

# ಜಿಲ್ಲೆಯ ಜಾನಪದ/ರಂಗಭೂಮಿ ಹಾಗೂ ಇತರೆ ಕ್ಷೇತ್ರದ ಸಾಧಕರು

ವೈವಿಧ್ಯಮಯವಾದ ಜಾನಪದ ಸಂಪತ್ತನ್ನು ಹೊಂದಿರುವ ಜಿಲ್ಲೆಯಲ್ಲಿ, ಈ ಜಾನಪದವನ್ನು ಸೃಷ್ಟಿಸುವ, ಕಟ್ಟುವ, ಹಾಡುವ, ಅನೇಕ ಜಾನಪದ ಕಲಾವಿದರುಗಳನ್ನು ಕಾಣಬಹುದು. ಅಂತಹವರಲ್ಲಿ ಕೆಲವರನ್ನು ಮಾತ್ರ ಇಲ್ಲಿ ಪರಿಚಯಿಸಲಾಗಿದೆ.

ಕಂಚಿನ ಕಂಠದ ಕಾರಯ್ಯ, ಕೂತಗೊಂಡನಹಳ್ಳಿ ಚಿಕ್ಕೋಳಮ್ಮ, ಮಡಿವಾಳದ ಮದ್ದೂರಮ್ಮ, ಬುಂಡಂಗಯ್ಯನದೊಡ್ಡಿಯ ಬೈಯಂಡಯ್ಯ, ಅಣಕಡಬೂರಿನ ಗುಡ್ಡಯ್ಯ, ಉರುಗನದೊಡ್ಡಿಯ ಹೊನ್ನಮ್ಮ, ಸಾಕಯ್ಯ, ಅರಳಾಳು ದೇವಸ್ಥಾನದ ಕಾಳಮ್ಮ, ರಂಗಶ್ರೇಷ್ಠ ಬನ್ನಿಕುಪ್ಪೆ ಗುರುಮೂರ್ತಪ್ಪ ಅವರನ್ನು ಬೆಳಕಿಗೆ ತಂದ ಶ್ರೀ ರೇವಣಸಿದ್ದೇಶ್ವರ ಬೆಟ್ಟದ ಅರ್ಚಕರು, ರಂಗ ಪ್ರೋತ್ಸಾಹಕರಾದ ಶ್ರೀ ಹಟೀರುದ್ರಪ್ಪ, 'ಭಾರತ ಜನ ಮನೋಲಾಸಿನಿ' ಕಂಪನಿಯ ಗುರಿಕಾರರು ಹಾಗೂ ಚನ್ನಪಟ್ಟಣ ತ್ರಿಯೆಂಬಕಶಾಸ್ತ್ರಿಗಳು, ಕನಕಪುರದ ಕಾದಂಬರಿಕಾರ್ತಿ ದಿ// ಎಂ.ಕೆ.ಜಯಲಕ್ಷ್ಮಿ, ಚನ್ನಪಟ್ಟಣದ ಕವಯತ್ರಿ ಸರಸ್ವತಿ ಗೌಡ, ಮಕ್ಕಳ ಸಾಹಿತ್ಯದ ಸಿ.ಕೆ.ವೆಂಕಟರಾಮಣ್ಣ, ಮಾಗಡಿಯ ಮಕ್ಕಳ ಸಾಹಿತ್ಯದ ಎಚ್.ಎಸ್. ದೊರೆಸ್ವಾಮಿ, ಪ್ರಾಣೇಶ್‌ರಾವ್, ಹಲ್ಲಿನಿಂದ ತೆಂಗಿನಕಾಯಿಯನ್ನು ಸುಲಿದು ಗಿನ್ನೀಸ್ ದಾಖಲೆ ಮಾಡಿದ ಮಾಗಡಿಯ ಎಸ್.ಸಿದ್ದರಾಜು, ರಂಗಬೆಳಕಿನ ವಿನ್ಯಾಸದಲ್ಲಿ ಲಿಮ್ಕಾ ಗಿನ್ನೀಸ್ ಪ್ರಶಸ್ತಿ ಪತ್ರ ಪಡೆದ ಟಿ.ಎಂ. ನಾಗರಾಜು, ಮುಂತಾದವರು..

ರಾಮನಗರ ತಾಲ್ಲೂಕು ಕೈಲಾಂಚ ಹೋಬಳಿ ಲಕ್ಕಪ್ಪನ ಹಳ್ಳಿಯಲ್ಲಿ 1952ರಲ್ಲಿ ಜನಿಸಿದ 'ಕೆಂಗಲ್ ಹನುಮಂತಯ್ಯ' (ವಿಶ್ವ ವಿಖ್ಯಾತ ಬೆಂಗಳೂರು ವಿಧಾನಸೌಧ ನಿರ್ಮಾತೃ) ನವರು ರಾಮನಗರ ವಿಧಾನಸಭಾ ಕ್ಷೇತ್ರದಿಂದ ಆಯ್ಕೆಯಾಗಿ 'ಎಚ್.ಡಿ. ದೇವೆಗೌಡ'ರು ಮುಖ್ಯಮಂತ್ರಿಗಳಾಗಿ, ಭಾರತದ ಪ್ರಧಾನ ಮಂತ್ರಿಯಾದರು. ಇವರ ಪುತ್ರರಾದ 'ಎಚ್.ಡಿ.ಕುಮಾರಸ್ವಾಮಿ' ಅವರು ಸಹ ಮುಖ್ಯಮಂತ್ರಿಗಳಾಗಿದ್ದರು. ಇನ್ನೂ ಶೈಕ್ಷಣಿಕ ಕ್ಷೇತ್ರದಲ್ಲಿ 'ಪ್ರೊ.ಸಿ.ಡಿ.ನರಸಿಂಹಯ್ಯ', 'ಕನಕಪುರ ರೂರಲ್ ಕಾಲೇಜು ಕರಿಯಪ್ಪ', 'ಮೊರಳೇಗವಿ ಮಠದ ಶಿಕ್ಷಣ ಕೇಂದ್ರ' ಹಾಗೂ ದಾಸೋಹ, ರಾಮನಗರ ಅಗ್ರಹಾರದಲ್ಲಿ ಹುಟ್ಟಿದ ಕವಿ 'ಜಿ.ಪಿ.

ರಾಜರತ್ನಂ', ಚಲನಚಿತ್ರ ಸಂಭಾಷಣಕಾರ 'ಸುಗ್ಗನಹಳ್ಳಿಯ ಸು.ರುದ್ರಮೂರ್ತಿ', ಜಾನಪದ ಗಾಯಕರಾದ 'ಚಾನಂದೂರು ಕೆಂಪಯ್ಯ', 'ಅಪ್ಪಗೆರೆ ತಿಮ್ಮರಾಜು', 'ಆಲೂರು ನಾಗಪ್ಪ', ಹೆಸರಾಂತ ಗುಬ್ಬಿ ಕಂಪನಿ ಹೆಸರಾಂತ ನಟ 'ಬನ್ನಿಕುಪ್ಪೆ ಬಿ.ವಿ.ಗುರುಮೂರ್ತಪ್ಪ', ಕನಕಪುರದ ಗುರ್ಖಾರ್, ಗುಬ್ಬಿ ಶಾಂತಮ್ಮ, ಸಂಗೀತ ವಿದ್ವಾನ್ 'ವಿ.ಎಂ. ಮುನಿವೆಂಕಟಪ್ಪ', ಕಲ್ಲದೇವನಹಳ್ಳಿಯ ಬೆಳ್ಳಿಕಿರೀಟದ ವೆಂಕಟಪ್ಪ, ಕರ್ಲಮಂಗಲ ಶ್ರೀಕಂಠಯ್ಯ, 'ಸಿ.ವಿ.ಎಲ್.ಶಾಸ್ತ್ರಿ', ಕನ್ನಡದ ಪ್ರಥಮ ಐಎಎಸ್ 'ಉರಗಳ್ಳಿ ಶಿವರಾಂ', ನ್ಯಾಯದೀಶರಾದ 'ಅಂಕನಹಳ್ಳಿ ಹೊನ್ನಯ್ಯ' ಜಾನಪದ ಲೋಕದ ಬೈರ್ನಳ್ಳಿ ಶಿವರಾಮ್, ಕೃಷ್ಣಪುರದದೊಡ್ಡಿಯ ಮುದ್ದಪ್ಪ ಸ್ಮಾರಕ ಟ್ರಸ್ಟ್‌ನ ಡಾ.ಎಂ.ಬೈರೇಗೌಡ, ರಂಗವಿಮರ್ಶಕ, ಸಂಪನ್ಮೂಲ ವ್ಯಕ್ತಿ ಅಮ್ಮನಪುರದ ಡಾ.ಎ.ಆರ್.ಗೋವಿಂದಸ್ವಾಮಿ, ರಾಮನಗರದ ಎಚ್.ವಿ.ಹನುಮಂತು, ಕನಕಪುರದ ಡಾ.ಕಾಂತರಾಜ್, ಕಾನಕಾನಹಳ್ಳಿ ಗೋಪಿ, ನಾಟಕಕಾರರಾದ ಎಲ್.ಸಿ.ರಾಜು, ಚನ್ನಪಟ್ಟಣದ ಡಾ.ಕೋ.ವೆಂ.ರಾಮಕೃಷ್ಣೇಗೌಡ ಹೀಗೆ ಇಂದಿನವರೆಗೆ ನೂರಾರು ಜನರ ಪಟ್ಟಿ ಬೆಳೆಯುತ್ತದೆ.

## ಕಲೆ

ಇತಿಹಾಸ ಒಂದು ಜನಾಂಗದ 'ಜೀವನ ಚರಿತ್ರೆ'ಯಾದರೆ, ಕಲೆ ಆಯಾ ದೇಶದ 'ಆತ್ಮ ಚರಿತ್ರೆ' ಎನ್ನಲಾಗುತ್ತದೆ. ಜಿಲ್ಲೆಯಲ್ಲಿ ನಾಟಕ, ಪೂಜಾ ಕುಣಿತ, ನಂದಿ ಕುಣಿತ, ಪಟದ ಕುಣಿತ, ಭಾಗವಂತಿಕೆ, ಡೊಳ್ಳು ಕುಣಿತ, ನಾದಸ್ವರ, ಸೋಮನ ಕುಣಿತ, ಮಹಿಳಾ ಕೋಲಾಟ, ವೀರಗಾಸೆ, ಗಾರುಡಿಗೊಂಬೆ, ಕಂಸಾಳೆ, ಸಿಡೀರಣ್ಣನ ಕುಣಿತ, ಬಂಜಾರ ಹಾಡುಗಾರರು, ಪಂಡರೀ ಭಜನೆ, ಬೀಸು ಕಂಸಾಳೆ, ಸೋಗು, ಮೋಡಿ, ಕುಸ್ತಿ, ಕೋಲೆಬಸವ, ಕೋತಿ ಕುಣಿತ, ಹಾವಾಡಿಗರ ಆಟ, ಒನಕೆ ಕುಣಿತ, ಕರಗ, ಹಲಗೆ ಕುಣಿತ, ಮರಗಾಲು ಕುಣಿತ, ಬೊಂಬೆ ಆಟಗಳು, ಚೌಡಿಕೆ, ನೀಲಗಾರರು, ದೊಂಬಿದಾಸರ, ಹೇಳವರ ಕಲೆ, ಕೂರವರ ಕಲೆ, ಕೊರವರ ಕುಣಿತ, ಬುಡಬುಡಿಕೆ ಕಲೆ, ಭರತ ನಾಟ್ಯ, ಟಮಟೆ ವಾದ್ಯ, ನಾದಸ್ವರ, ಬಂಜಾರ ನೃತ್ಯ, ಹರಿಕಥೆ, ಆಶುಕಥೆ ಹೇಳುವ ಪರಿಣತರು, ಕಿಳ್ಳೆಖ್ಯಾತರು, ಬೊಂಬೆಯಾಟದವರು ಕಾಣಸಿಗುತ್ತಾರೆ.

# ರಾಮನಗರದ ಜಾನಪದ ಲೋಕ

**ಸಂಸ್ಥಾಪಕರು:**

**ಡಾ. ಎಚ್.ಎಲ್.ನಾಗೇಗೌಡ**

**ಸಂಪರ್ಕ: 080–2720113 / 080–23605033**





ಜಾನಪದ ಸಂಶೋಧಕ ಡಾ.ಎಚ್.ಎಲ್.ನಾಗೇಗೌಡ ಅವರ ಪರಿಶ್ರಮದ ಫಲವೇ ರಾಮನಗರದ ಜಾನಪದ ಲೋಕ. ರಾಮನಗರದಿಂದ ಮೈಸೂರಿಗೆ ತೆರಳುವ ಮಾರ್ಗದಲ್ಲಿ 5 ಕಿ.ಮೀ. ಅಂತರದಲ್ಲಿದೆ. ಕರ್ನಾಟಕ ಜಾನಪದ ಪರಿಷತ್ತಿನ ಒಂದು ಅಂಗವಾಗಿ ಕೆಲಸ ಮಾಡುತ್ತಿರುವ ಈ ಲೋಕ ಜಾನಪದ ಕ್ಷೇತ್ರದ ಅನೇಕ ಜಾನಪದ ಪರಿಕರಗಳ/ಸಾಮಾಗ್ರಿಗಳ ಬಹುದೊಡ್ಡ ಸಂಗ್ರಹ ಮತ್ತು ಕಲಾ ಪ್ರದರ್ಶನ, ನಾಟಕ ಉತ್ಸವಗಳಿಂದಾಗಿ ಭಾರತದಲ್ಲಿಯೇ ಒಂದು ಉತ್ತಮ ಸಾಂಸ್ಕೃತಿಕ ಹಾಗೂ ಪ್ರೇಕ್ಷಣೀಯ ಕೇಂದ್ರ ಎನಿಸಿದೆ.

ನಾಗೇಗೌಡ ಅವರು ಅಪಾರ ಪ್ರಮಾಣದಲ್ಲಿ ಜಾನಪದದ ಧ್ವನಿ ಮುದ್ರಿಕೆಗಳು ಹಾಗೂ ದೃಶ್ಯಗಳ ವಿಡಿಯೋ ಸಂಗ್ರಹ ಇಲ್ಲಿ ಇಟ್ಟಿದ್ದಾರೆ. ಇಲ್ಲೊಂದು ಸಣ್ಣ ಮ್ಯೂಸಿಯಂ, ಜಾನಪದ ಶೈಲಿಯ ಕಟ್ಟಡಗಳು, ಕೊಳ, ಬಯಲು ರಂಗಮಂದಿರ, ಮುಂತಾದ ವಿಭಾಗಗಳಿವೆ. ಇಲ್ಲಿ ಒಂದು ವರ್ಷದ ಜಾನಪದ ಡಿಪ್ಲೋಮ ಸಹ ನಡೆಸಲಾಗುವುದು. ಇಲ್ಲಿ ನಿರ್ವಾಹಕರಾಗಿ, ನಿರ್ದೇಶಕರಾಗಿ, ಜಾನಪದ ತಜ್ಞರಾದ ಕುರುವ ಬಸವರಾಜ್, ಬೈರ್ನಳ್ಳಿ ಶಿವರಾಮ್ (ರಂಗ ನಿರ್ದೇಶಕರಾಗಿ), ಚಕ್ಕೆರೆ ಶಿವಶಂಕರ್, ಮುಂತಾದವರು ಶ್ರಮಿಸುತ್ತಿದ್ದಾರೆ. ಸಿ.ಎಂ.ಲಿಂಗಪ್ಪ ಅವರ ಮುಂದಾಳತ್ವದಲ್ಲಿ ಜಾನಪದ ಲೋಕದಲ್ಲಿ ಪೌರಾಣಿಕ ನಾಟಕಗಳ ಉತ್ಸವವನ್ನು ನಡೆಸಿಕೊಂಡು ಬರಲಾಗಿದೆ. ಅಲ್ಲದೆ ಜಾನಪದ ಹಾಗೂ ಆಧುನಿಕ ಪೌರಾಣಿಕ, ಹವ್ಯಾಸಿ ನಾಟಕ ಪ್ರದರ್ಶನಗಳು ಸಹ ನಡೆಯುತ್ತವೆ.

## ರಾಮನಗರ ಜಿಲ್ಲಾ ರಂಗಭೂಮಿ ಕ್ಷೇತ್ರದ ಸಾಧಕರು

**ಹೆಸರಾಂತ ನಟರು: ವೃತ್ತಿರಂಗ**

ಗುಬ್ಬಿ ಕಂಪನಿಯ ದಿ// ಬಿ.ವಿ.ಗುರುಮೂರ್ತಪ್ಪ. , ದಿ// ಬೆಳ್ಳಿಕಿರೀಟ ವೆಂಕಟಪ್ಪ, ಶಾಂತಮ್ಮ, ಗುರ್ಖಾರ್ ಮುಂತಾದವರು

**ರಂಗಸಂಪನ್ಮೂಲ ವ್ಯಕ್ತಿಗಳು:**

ಡಾ. ಎ.ಆರ್.ಗೋವಿಂದಸ್ವಾಮಿ, ಡಾ. ಎಂ.ಬೈರೇಗೌಡ, ಬೈರ್ನಳ್ಳಿ ಶಿವರಾಮ್.

**ಹೆಸರಾಂತ ನಿರ್ದೇಶಕರು: ಹವ್ಯಾಸಿ/ ಸಾಮಾಜಿಕ/ ಆಧುನಿಕ**

ಡಾ. ಎ.ಆರ್. ಗೋವಿಂದಸ್ವಾಮಿ, ಡಾ.ಎಂ.ಬೈರೇಗೌಡ, ಬೈರ್ನಳ್ಳಿ ಶಿವರಾಮ್ ಎಂ.ಸಿ.ನಾಗರಾಜು, ನರೇಶ್‌ಮಯ್ಯ ಮುಂತಾದವರು.

## ಹೆಸರಾಂತ ನಾಟಕಕಾರರು ಮತ್ತು ಕೃತಿಗಳು: ಹವ್ಯಾಸಿ/ ಆಧುನಿಕ/ ಸಾಮಾಜಿಕ

### ಡಾ.ಎಂ.ಬೈರೇಗೌಡ: ರಚಿಸಿದ ನಾಟಕಗಳು

ಬುಡಬೆಳ್ಳಿ, ನಡುಪಚ್ಚೆ ಗೊನೆ ಮುತ್ತು, ಗಡಗದಲೆ ಗಂಗಾಧರ ಶಾಸ್ತ್ರಿ, ಸೋರೇ ಬುರುಡೆ, ಹಂದೀ ಪುರಾಣ, ಎಲೆನಕ್ಕು ಅಡಿಕೆ ಮಾತಾಡಿ ಸುಣ್ಣ ಕುಣಿದಾಗ, ಕಿಲಾಡಿ ದಾಸಯ್ಯ, ಪಂಚವರ್ಣದ ಗಿಣಿ, ಜಾಲ–ಮಾರ್ಜಾಲ,ಮಹಾ ಭಾರತ ಕಥಾ ಪ್ರಸಂಗ, ದೇವನಾಂಪ್ರೀಯ ಅಶೋಕ,ಉರುಗವ್ವ ಮುಂತಾದವು.

### ಡಾ.ಎ.ಆರ್.ಗೋವಿಂದಸ್ವಾಮಿ ರಚಿಸಿದ ನಾಟಕಗಳು

'ಬೆವರಲ್ಲೇ ಬೆಳಕು', 'ವಿದ್ಯುದ್ದಾಲಿಂಗನ (ರೇಡಿಯೋ ನಾಟಕ)', 'ಮಕ್ಕಳ ನ್ಯಾಯ' (ಕನ್ನಡ ಮತ್ತು ಸಂಸ್ಕೃತಿ ಇಲಾಖೆ– ನಾಟಕ ರಚನಾ ಕಮ್ಮಟದಲ್ಲಿ ಅತ್ಯುತ್ತಮ ನಾಟಕ ಕೃತಿ ಆಯ್ಕೆಯಾಗಿ ಪ್ರಯೋಗಗೊಂಡಿದೆ), ಗುರುಶಿಷ್ಯರು (ರೇಡಿಯೋ ಸ್ಕಿಟ್), ಹೆಣ್ಣುಮಗು (ಪ್ರಚಾರ ನಾಟಕ), ಏಡ್ಸ್ (ಪ್ರಚಾರ ನಾಟಕ). ಮುಂತಾದವು

**ಕೃತಿಗಳು:** ಬಂಜಾರ ಪ್ರದರ್ಶನ ಕಲೆ, ಬಿ.ವಿ.ಕಾರಂತರ ರಂಗಭೂಮಿ, ಬಂಜಾರ ಜಾನಪದ, ಕಾದಂಬರಿ, ರಾಮುರಾಭೋ, ಕನ್ನಡ ಪದಕೋಶ, ರಂಗವಿಮರ್ಶೆ ಕೃತಿ(ಮುದ್ರಣದಲ್ಲಿ), ಗೋವಿಂದಸ್ವಾಮಿ ಬರಹ–ಭಾಷಣಗಳು, ಮುಂತಾದವು.

**ಎಲ್.ಸಿ. ರಾಜು:** ರಂಗ ಕೃತಿಗಳು: ಕೊರಳ ಕೊಯ್ದವರು,ಉದರಿಯಾವೇ ಕನಸು ಉಡಿ ತುಂಬ,ಬರಡಾದ ಬದುಕು, ನ್ಯಾಯಕ್ಕೆ ನೇಣು,ಪ್ಯಾಟೆ ಮರಾಣಿ, ಕಥೆಗಾರ, ಅಜ್ಜನೆಟ್ಟ ಆಲದ ಮರ ಮುಂತಾದವು.

**ಖಂಡಪರಶು:** ಪ್ರಸವ ಪ್ರಸಂಗ

**ಎಂ.ಸಿ. ನಾಗರಾಜು:** ರಂಗ ಕೃತಿಗಳು: ನಮ್ಮ ಟಿಪ್ಪು, ದಿಕ್ಕೆಟ್ಟ ದೇವರುಗಳ ಸಭೆ,ಹಾಗೂ ಮಕ್ಕಳ ಸ್ಕಿಟ್ ಗಳು, ಶಂಭು: ಎಚ್ಚರ, ಎಚ್.ವಿ.ಹನುಮಂತು: ಕುಡಿತದ ಸಹವಾಸ,ಸಂಸಾರ ಸ್ವರ,ಮರಳಿ ಬಂದ ಭಾಗ್ಯ,ಕಿತಾಪತಿ ಶಾಮಣ್ಣ,ಹಳ್ಳಿಯ ಭೂತ,ರಂಗಾದ ಮುನಿಯ.

**ಡಾ.ಕೋ.ವೆಂ.ರಾಮಕೃಷ್ಣೇಗೌಡ:** ದುಂಬಿಕಾಯಕ(ನಾಟಕ)

**ಹೆಸರಾಂತ ರಂಗ ವಿಮರ್ಶಕರು:**

ಡಾ.ಎ.ಆರ್.ಗೋವಿಂದಸ್ವಾಮಿ, ಅಮ್ಮನಪುರ

**ಹೆಸರಾಂತ ರಂಗ ಕೃತಿಕಾರರು:**

1. ಕರ್ಲಮಂಗಲ ಶ್ರೀಕಂಠಯ್ಯ, 2. ಕೂ.ಗಿ.ಗಿರಿಯಪ್ಪ , 3. ಡಾ.ಎ.ಆರ್. ಗೋವಿಂದಸ್ವಾಮಿ, 4. ಡಾ.ಎಂ.ಬೈರೇಗೌಡ, 5. ಡಾ. ಅಂಕನಹಳ್ಳಿ ಪಾರ್ಥ 6. ಡಾ. ಪಾರ್ಥಸಾರಥಿ, 7. ಡಾ.ಕೋ.ವೆಂ. ರಾಮಕೃಷ್ಣೇಗೌಡ, 8. ಎಲ್.ಸಿ. ರಾಜು ಮುಂತಾದವರು

**ರಂಗಭೂಮಿ ವಿಷಯದಲ್ಲಿ ಪದವಿ (ಬಿ.ಎ. ನಾಟಕ) ಪಡೆದವರು**

1. ಡಾ.ಎ.ಆರ್.ಗೋವಿಂದಸ್ವಾಮಿ, ಅಮ್ಮನಪುರ

ಬಿ.ಎ. ನಾಟಕ: ಪ್ರಥಮ ರ್‍ಯಾಂಕ್ ಹಾಗೂ ನಾಲ್ಕು ಚಿನ್ನದ ಪದಕಗಳು, ಬೆಂಗಳೂರು ವಿಶ್ವವಿದ್ಯಾಲಯ, ಪ್ರದರ್ಶನ ಕಲಾ ವಿಭಾಗ.

**ರಂಗಭೂಮಿ ವಿಷಯದಲ್ಲಿ ಸ್ನಾತಕೋತ್ತರ (ಎಂ.ಎ. ನಾಟಕ) ಪದವಿ ಪಡೆದವರು**

1. ಡಾ. ಎ.ಆರ್.ಗೋವಿಂದಸ್ವಾಮಿ, ಎಂ.ಎ(ನಾಟಕ) ದ್ವಿತೀಯ ರ್‍ಯಾಂಕ್, ಬೆಂಗಳೂರು ವಿಶ್ವವಿದ್ಯಾಲಯ
2. ಎ.ಜಿ. ಶಿವಶಂಕರನಾಯ್ಕ ಎಂ.ಎ.(ನಾಟಕ), ಅಮ್ಮನಪುರ–9916800451/ 9620916327 ಬೆಂ.ವಿ.ವಿ.
3. ತ್ಯಾಗರಾಜ, ರಾಮನಗರ – 9900218006

**ರಂಗಭೂಮಿ ವಿಷಯದಲ್ಲಿ ಪಿಎಚ್.ಡಿ. ಪದವಿ ಪಡೆದವರು**

**ಡಾ. ಎ.ಆರ್. ಗೋವಿಂದಸ್ವಾಮಿ, ಅಮ್ಮನಪುರ, ವಿಷಯ: 'ಬಿ.ವಿ.ಕಾರಂತರ ರಂಗಭೂಮಿ'** 1944, **ಬೆಂಗಳೂರು** ವಿಶ್ವವಿದ್ಯಾಲಯ, ಪ್ರದರ್ಶನ ಕಲಾ ವಿಭಾಗ. ಬೆಂಗಳೂರು

**ಮಾರ್ಗದರ್ಶಕರು:** ಡಾ. ಜೆ. ಶ್ರೀನಿವಾಸಮೂರ್ತಿ, ಎಮ್.ಇ.ಎಸ್. ಕಾಲೇಜು, ಬೆಂಗಳೂರು. ಮೊ – 9448462620

**ರಂಗಶಿಕ್ಷಣ/ ರಂಗಭೂಮಿ ಡಿಪ್ಲೋಮ:**

1. ಶ್ರೀಮತಿ ಎನ್.ವರಲಕ್ಷ್ಮಿ ಗೋವಿಂದಸ್ವಾಮಿ (ಎಂ.ಇ.ಎಸ್. ರಂಗಶಾಲೆ), ಅಮ್ಮನಪುರ ಮೊ:9448462620/9900242685
2. ಎ.ಜಿ. ಶಿವಶಂಕರ ನಾಯ್ಕ (ಅಭಿನಯ ತರಂಗ), ಅಮ್ಮನಪುರ, 9620916327
3. ನರೇಶ್‌ಮಯ್ಯ (ನೀ.ನಾ.ಸಂ.), ಕನಕಪುರ, 9663970250
4. ಎಂ.ಸಿ. ನಾಗರಾಜು (ನೀನಾಸಂ), ಕನಕಪುರ, ಮೊ: 9916350712
5. ಶಂಭು (ರಂಗ ಅಧ್ಯಯನ ಕೇಂದ್ರ, ಕುಂದಾಪುರ), ಕನಕಪುರ, 9008169952
6. ಸಿ.ಬಿ.ಅಶೋಕ, (ಅಭಿನಯ ತರಂಗ), ಮಾಗಡಿ
7. ಚಿಕ್ಕವೀರಯ್ಯ (ಎನ್‌ಎಸ್‌ಡಿಆರ್‌ಆರ್‌ಸಿ – ತಿಂಗಳ ರಂಗ ತರಬೇತಿ), ಮಾಗಡಿ

8. ಮಂಜುಳ ನರೇಶಮಯ್ಯ (ನೀ.ನಾ.ಸಂ.) ಮೊ: 9663970250

**ಸಂಗೀತ ಸಂಯೋಜನೆ/ ರಂಗಸಜ್ಜಿಕೆ ಪರಿಣಿತರು (ಹವ್ಯಾಸಿ)**

ನರೇಶ್‌ಮಯ್ಯ (ನೀನಾಸಂ), ಮೊ: 9663970250

**ಬೆಳಕು ವಿನ್ಯಾಸ ಹವ್ಯಾಸಿ**

ಟಿ.ಎಂ.ನಾಗರಾಜು, ಮಾಗಡಿ,9845398006

## ಪ್ರಮುಖ ರಂಗ ಮಂದಿರಗಳು



1. ಡಾ. ಬಾಬಸಾಹೇಬ್ ಅಂಬೇಡ್ಕರ್ ಭವನ, ರಾಮನಗರ



2. ಜಾನಪದ ಲೋಕ: ಬಯಲು ರಂಗಮಂದಿರ (1000ಜನಕ್ಕೆ) ಹಾಗೂ ಬಯಲು ರಂಗ ವೇದಿಕೆ (1250 ಜನಕ್ಕೆ), ಬೆಂಗಳೂರು-ಮೈಸೂರು ರಸ್ತೆ, ರಾಮನಗರ, ದೂ.ಸಂಖ್ಯೆ: 080-27201143,

ಮುದ್ದುಶ್ರೀ ದಿಬ್ಬ(ಬಯಲು ರಂಗ)9448102158, ಕೆರೆಮೇಗಳ ದೊಡ್ಡಿ,

ರಾಮನಗರ ತಾಲ್ಲೋಕು.

3. ಆರ್.ಇ.ಎಸ್. ಶಿಕ್ಷಣ ಸಂಸ್ಥೆಗಳಲ್ಲಿನ ಶಾಲಾ ರಂಗಮಂದಿರಗಳು ಮತ್ತು ರೂರಲ್ ಕಾಲೇಜಿನ ರಂಗಮಂದಿರ, ಕನಕಪುರ ಟೌನ್.

4. ಡಾ.ರಾಜ್‌ಕುಮಾರ್ ಬಯಲು ರಂಗ ಮಂದಿರ, ತಾಲ್ಲೂಕು ಕಚೇರಿ ಮುಂಭಾಗ, ಕನಕಪುರ ಟೌನ್.

**ಪ್ರಕಾಶನ ಸಂಸ್ಥೆಗಳು:** ಮುದ್ದುಶ್ರೀ ಗ್ರಂಥಮಾಲೆ, ಪ್ರಗತಿ ಗ್ರಾಫಿಕ್ಸ್, ಕೃಷ್ಣಾಪುರ ದೊಡ್ಡಿ,ರಾಮನಗರ ತಾಲ್ಲೋಕು.

## ರಾಮನಗರ ತಾಲ್ಲೂಕಿನ ರಂಗ ಕಲಾವಿದರು

(ಹವ್ಯಾಸಿ /ಪೌರಾಣಿಕ)

## ಗುಬ್ಬಿ ಕಂಪನಿ ಎಲೆಮರೆ ಕಲಾವಿದರು
## ವೃತ್ತಿ ರಂಗದ ಮೇರು ಪ್ರತಿಭೆ ಬನ್ನಿಕುಪ್ಪೆಯ
## ಶ್ರೀ ಬಿ.ವಿ.ಗುರುಮೂರ್ತಪ್ಪ





ರಾಮನಗರ ತಾಲ್ಲೂಕಿನ ಬನ್ನಿಕುಪ್ಪೆಯ ಶ್ರೀ ಬಿ.ವಿ. ಗುರುಮೂರ್ತಪ್ಪ ಅವರು ಒಂದು ಕಾಲು ಶತಮಾನಕ್ಕೂ ಹಿಂದಿನ ರಂಗ ಪರಂಪರೆಯುಳ್ಳ ಗುಬ್ಬಿ ಕಂಪನಿ ಹಾಗೂ ಅಂದಿನ ಇತರೆ ಪ್ರಮುಖ ನಾಟಕ ಕಂಪನಿಗಳಲ್ಲಿ ರಾಮನಗರದ

ಕಲಾವಿದರಾಗಿ ಜೀವಿತದ ಹೆಚ್ಚಿನ ಅವಧಿಗೆ ಮಾಡಿರುವ ರಂಗ ಸೇವೆ ವಿಶಿಷ್ಟ ಅನನ್ಯ ಹಾಗೂ ದಾಖಲಾರ್ಹವಾದುದಾಗಿದೆ.

ಸ್ವತಃ ಗುಬ್ಬಿ ಕಂಪನಿಯ ಮಾಲೀಕರಾದ ವೀರಣ್ಣ ಅವರು ಟಾಂಗಾಗಾಡಿಯಲ್ಲಿ ಗುರುಮೂರ್ತಪ್ಪ ಅವರ ಬನ್ನಿಕುಪ್ಪೆಯ ಮನೆಗೆ ಬಂದು ಅವರು ಕೇಳಿದಷ್ಟು ಸಂಭಾವನೆ ಕೊಟ್ಟು ಅವರಷ್ಟೇ ಶ್ರೇಷ್ಠ ಕಲಾವಿದರಾಗಿದ್ದ ಇವರನ್ನು ನಾಟಕ ಕಂಪನಿಗೆ ಕರೆದುಕೊಂಡು ಹೋಗಿದ್ದು ಗುರುಮೂರ್ತಪ್ಪ ಅವರ ಪ್ರತಿಭೆಗೆ ಕನ್ನಡಿ ಹಿಡಿಯುತ್ತದೆ. ಗುರುಮೂರ್ತಪ್ಪ ಅವರು ಗುಬ್ಬಿ ಕಂಪನಿಯ ಬಹುತೇಕ ನಾಟಕಗಳಲ್ಲಿ ನಾಯಕ ಪಾತ್ರಗಳನ್ನೇ ಅಭಿನಯಿಸಿದ ಕಲಾವಿದರು ಎಂಬುದು ರಾಮನಗರ ಜಿಲ್ಲೆಗೆ ಹೆಮ್ಮೆತರುವ ಸಂಗತಿಯಾಗಿದೆ. 01.09.1977 ರಂದು ತಮ್ಮ 90ನೇ ವಯಸ್ಸಿನಲ್ಲಿ ಬನ್ನಿಕುಪ್ಪೆಯಲ್ಲಿ ಗುರುಮೂರ್ತಪ್ಪ ಅವರು ಇಹಲೋಕದ ಪಾತ್ರದ ಬಣ್ಣ ಕಳಚಿದರು.

1937 ರಲ್ಲಿ ಗುಬ್ಬಿ ಕಂಪನಿ ಆಂಧ್ರದ ರಾಜಮಹೇಂದ್ರಪುರಂ ನಲ್ಲಿ ಬಿಡಾರ ಹಾಕಿದ್ದಾಗ, ಅದ್ದೂರಿ ರಂಗಸಜ್ಜಿಕೆ, ಜೀವಂತ ಆನೆ-ಕುದುರೆಗಳೊಂದಿಗೆ ಅಭಿನಯಿಸುತ್ತಿದ್ದ 'ಕುರುಕ್ಷೇತ್ರ' ನಾಟಕವನ್ನು ಮಾತೃಭಾಷೆ ತೆಲಗು ಆಗಿದ್ದ ಗುರುಮೂರ್ತಪ್ಪ ಅವರು ಒಂದೇ ರಾತ್ರಿಯಲ್ಲಿ ಕನ್ನಡದ ಈ ನಾಟಕವನ್ನು ತೆಲುಗಿಗೆ ಬದಲಾಯಿಸಿಕೊಂಡಿದ್ದರು, ಇವರಿಗೆ ಚಿಕ್ಕಬಳ್ಳಾಪುರದ ಕೇಶಪ್ಪಯ್ಯ ಅವರು ತೆಲುಗಿನ ಹಾಡು, ಸಂಭಾಷಣೆಗೆ ಸಹಾಯ ಮಾಡಿದ್ದರು. ನಾಟಕದ ಆರಂಭದ ಶ್ರೀಕೃಷ್ಣ ವೈಭವದ ಮಹಡಿಯ ಶಯ್ಯಾಗೃಹದಿಂದ ಸಖಿಯರೊಂದಿಗೆ 'ಕೃಷ್ಣ' ಪಾತ್ರಧಾರಿಯಾಗಿ ನಟ ಸರ್ವೋತ್ತಮ ಗುರುಮೂರ್ತಪ್ಪ ಅವರು ತನ್ಮಯತೆಯೊಂದಿಗೆ ಅಭಿನಯಿಸುತ್ತಿದ್ದ ಪರಿ, ವಾಕ್ಸರಣೆ, ಮಧುರ ಸಂಗೀತದ ಸೊಗಸು, ಅವರ ರಂಗದ ಪ್ರವೇಶ ಮತ್ತು ನಿರ್ಗಮನದ ಮೋಡಿಗೆ ಪ್ರೇಕ್ಷಕರು ಮಂತ್ರ ಮುಗ್ಧರಾಗಿ ನೋಡುತ್ತಿದ್ದರಂತೆ. ಇಲ್ಲಿ "ಭಯವೀದೇಕೆ ಕಾಂತೆ-ಶಾಂತೆ ಪ್ರೇಮ ಪೂಜಿತೆ..." ಹಾಡನ್ನು ತೆಲುಗಿನಲ್ಲಿ "ಭಯಮೀದೇಲಾ ಚಾಲಬಾಲ ನಿತ್ಯನಿರ್ಮಲ..." ಎಂದು ಹಾಡುತ್ತಿದ್ದರಂತೆ. ಇವರೊಂದಿಗೆ ನಟ ಭಯಂಕರ ಗಂಗಾಧರರಾಯರು ಭೀಮನಾಗಿ, ಎಂ.ಸುಬ್ಬರಾಯರು ಅರ್ಜುನ, ಬೇಲೂರು ರಾಘವೇಂದ್ರ ರಾಯರು ದುರ್ಯೋಧನ, ಬಿ.ಜಯಮ್ಮ ಸುಭದ್ರೆ, ದ್ರೌಪದಿಯಾಗಿ, ಜಿ.ವಿ.ಸ್ವರ್ಣಮ್ಮ- ಉತ್ತರೆಯಾಗಿ, ಕೃಷ್ಣನಾದ ಗುರುಮೂರ್ತಪ್ಪ ಅವರ ಜೊತೆ

ಅಭಿನಯಿಸುತ್ತಿದ್ದರೆ ಇಡೀ ಆಂಧ್ರದ ಪ್ರೇಕ್ಷಕರು ಬೆರಗಾಗುತ್ತಿದ್ದದ್ದು ಮತ್ತು ಇವರು ಅಂದು ಎಲ್ಲರ ಮನೆ ಮಾತಾಗಿದ್ದುದು ಈಗ ಇತಿಹಾಸ.

ರಂಗ ಗೀತೆಗಳ ಖ್ಯಾತಿಯಲ್ಲಿ ಗುರುಮೂರ್ತಪ್ಪ ಅವರದು ಎದ್ದುಕಾಣುವ ಪ್ರತಿಭೆ. ಗುಬ್ಬಿ ಕಂಪನಿಯ ಅಂದಿನ ನಾಟಕಗಳಲ್ಲಿ ಮೂವತ್ತರಿಂದ ನಲವತ್ತು ರಂಗಗೀತೆಗಳು ಇರುತ್ತಿದ್ದವು. ನಾಟಕ ರಾತ್ರಿ ಆರಂಭವಾಗಿ ಮುಂಜಾನೆಯವರೆಗೂ ಕಡ್ಡಾಯವಾಗಿ ನಡೆಯುತ್ತಿತ್ತು. ಅಲ್ಲಿನ ಭಕ್ತ ಕಬೀರ ನಾಟಕದ ಕಬೀರನಾಗಿ ಹಾಡುತ್ತಿದ್ದ ಬೇಹಾಗ್ ರಾಗದ "ರಾಮಭಜನಾನಂದ ಸುಖ ಸಾರವು..." ಎಂಬ ರಂಗಗೀತೆ, "ಮನ್ಮರೇ ಮಾಯಾಮರೇ ಮರ್‌ಮರ್‌ಗಯೇ ಶರೀರ್" ಎಂಬ ಪೀಲುರಾಗದ ರಂಗಗೀತೆ ಹಾಗೂ "ಆಶಾತೃಷ್ಣ ನಾಮರೆ ಖೇಹತೆ ಗಯೇ ಕಬೀರ್..." ಗೀತೆಗೆ Once more ಬೀಳುತ್ತಿತ್ತು. "ಪರಿಪಾಹಿ ರಾಮ ಪರಬಲಭೀಮ ಪಾಹಿ ಶ್ರೀರಾಮ..." ಎಂಬ ರಂಗಗೀತೆಗಳು ಪ್ರೇಕ್ಷಕರನ್ನು ಭಕ್ತಿರಸದಲ್ಲಿ ಈಜಾಡುವಂತೆ ಮಾಡುತ್ತಿದ್ದವು. 'ಸುಭದ್ರಾ ಕಲ್ಯಾಣ' ನಾಟಕದಲ್ಲಿ ಸುಭದ್ರೆ ಪೂಜೆ ಮಾಡುವ ದೃಶ್ಯದಲ್ಲಿ ಬಿ.ವಿ.ಗುರುಮೂರ್ತಪ್ಪನವರು ಅರ್ಜುನನಾಗಿ ಹಾಡುವ ಪರಿ "ವಂದಿಸುವೆ ಮೌನೀಂದ್ರ ನಿಮ್ಮ ಚರಣ ಕಮಲಕೆ..." ಎಂಬ ಜಂಜೂಟಿ ರಾಗದಗೀತೆ ಇಡೀ ಪ್ರೇಕ್ಷಾಗೃಹ ತಲೆತೂಗುವಂತೆ ಮಾಡುತ್ತಿದ್ದ ಆಗಾಧ ಪ್ರತಿಭೆ ಗುರುಮೂರ್ತಪ್ಪ ನವರದಾಗಿತ್ತು.

ಇವರು ಇದೇ ರೀತಿ 'ಗುಲೇಬಕಾವಲಿ'ಯ ರಾಣಿ ಪಾತ್ರ, 'ಸಂತತುಕಾರಾಂ'ನ ತುಕಾರಾಮ, 'ಸತ್ಯಹರಿಶ್ಚಂದ್ರ'ದ ಹರಿಶ್ಚಂದ್ರ ಪಾತ್ರದಂತಹ ನಾಯಕ ಪಾತ್ರಗಳನ್ನೇ 15 ಕ್ಕೂ ಹೆಚ್ಚಿನ ನಾಟಕಗಳಲ್ಲಿ ಅಭಿನಯಿಸಿ, ಅಂದು ತಿಂಗಳಿಗೆ ರೂ. 300/– ಸಂಭಾವನೆ, ತುಪ್ಪದ ಊಟ, ಮೈಗೆ ಬಾದಾಮಿ ಎಣ್ಣೆ ಮತ್ತು ಬಿಸಿನೀರಿನ ಸ್ನಾನದ ವಿಶೇಷ ಸವಲತ್ತು ಪಡೆದಿದ್ದ ಶ್ರೇಷ್ಠನಟರಾಗಿದ್ದರು.

ಇವರಿಗೆ ಪಳನಿಮೂರ್ತಿ ಎಂಬ ಸಂಗೀತ ಕಲಿಯುವ ಒಬ್ಬ ಶಿಷ್ಯನಿದ್ದು, ಇವರ ಸಕಲ ಸೇವೆಗೆ ನಿಯೋಜಿತರಾಗಿದ್ದರು. ಗುರುಮೂರ್ತಪ್ಪ ಬನ್ನಿಕುಪ್ಪೆಯಲ್ಲಿದ್ದಾಗ, ಬಾಲ್ಯದಲ್ಲಿ ವಿದ್ಯೆಯನ್ನು ಮರಳಿನಲ್ಲಿ ಬರೆಯುವ ಮೂಲಕ ಕಲಿತವರು. ಹೆಚ್ಚೇನೂ ಓದಿರದ ಇವರು ವೈದಿಕ ಬ್ರಾಹ್ಮಣ ಗುರುಗಳೊಬ್ಬರಿಂದ ಸಂಸ್ಕೃತ ಅಭ್ಯಾಸ ಮಾಡಿ, ಪಿಟೀಲು, ಹಾರ್ಮೋನಿಯಂ ಪಾಂಡಿತ್ಯದ ಜೊತೆಗೆ ರಾಮಾಯಣ, ಮಹಾಭಾರತದ ವೀರಾಟಪರ್ವ ಅಭ್ಯಾಸಮಾಡಿ ವ್ಯಾಖ್ಯಾನ ಸಹ ನೀಡುತ್ತಿದ್ದರು.

ನಾಲ್ವಡಿ ಕೃಷ್ಣರಾಜ ಒಡೆಯರ್ ಎದುರಿಗೆ ಅರಮನೆಯಲ್ಲಿ ಅಭಿನಯಿಸಿದಾಗ ಅವರಿಂದ ಮೆಚ್ಚುಗೆ ವ್ಯಕ್ತವಾಗಿ ಅವರ ಕೈಯಲ್ಲಿದ್ದ ವಜ್ರದ ಉಂಗುರವನ್ನೇ ಬಹುಮಾನವಾಗಿ ನೀಡಿದ್ದರು. ಜೊತೆಗೆ ಇವರಿಗೆ ಬಂಗಾರದ ಕಡಗ ಸಹ ಬಹುಮಾನವಾಗಿ ಬಂದಿತ್ತು. ಗುರುಮೂರ್ತಪ್ಪ ಇಲ್ಲದೆ ಕಂಪನಿ ಇಲ್ಲ ಎನ್ನುವಂತಾಗಿದ್ದ ಸಂದರ್ಭವಿತ್ತು. ಗುರುಮೂರ್ತಪ್ಪ ಅವರು ಮೂಲತಃ ಒಂದು ಅಲ್ಪಸಂಖ್ಯಾತ ಅಲೆಮಾರಿ ಸಮುದಾಯವಾದ ವೈಷ್ಣವದಾಸ (ದೊಂಬಿದಾಸ) ಸಮುದಾಯದಿಂದ ಬಂದು ರಂಗಕಲೆಯಲ್ಲಿ ಅಘಾಧವಾದ ಎತ್ತರಕ್ಕೆ ಬೆಳೆದ ಪರಿ ಅನನ್ಯವಾದುದು. ಹೀಗಾಗಲು ಬಹುಶಃ ಬಸವಣ್ಣನ ಪ್ರತಿರೂಪದಂತಿದ್ದ ಗುಬ್ಬಿ ವೀರಣ್ಣ ಅವರ ಉದಾರತೆಯೇ ಕಾರಣ ಇರಬೇಕು. ಕಂಪನಿಯಲ್ಲಿ ಇಂತಹ ಹಲವು ಸಮುದಾಯದ ಪ್ರತಿಭೆಗಳು ಗುಬ್ಬಿ ಕಂಪನಿಯಲ್ಲಿ ಪಾಕಗೊಂಡಿವೆ. ಡಾ.ರಾಜ್‌ಕುಮಾರ್ (ಮುತ್ತುರಾಜ್), ನರಸಿಂಹರಾಜು, ಬಾಲಕೃಷ್ಣ ಅವರಂತಹ ನೂರಾರು ಪ್ರತಿಭೆಗಳು, ಆದರೆ ದುರಾದೃಷ್ಟವಶಾತ್ ಗುರುಮೂರ್ತಪ್ಪ ಇಂದಿನವರೆವಿಗೂ ಎಲೆಮರೆಕಾಯಿ ಆಗಿ ಉಳಿದದ್ದು ಅಚ್ಚರಿ ಮತ್ತು ಶಾಪ.

ಇಂತಹ ಗುರುಮೂರ್ತಪ್ಪ ಅವರ ಪ್ರತಿಭೆಗೆ ಮತ್ತೊಂದು ಉದಾಹರಣೆ ಎಂದರೆ, ಇವರ 'ಕುರುಕ್ಷೇತ್ರ'ನಾಟಕದ 'ಕೃಷ್ಣ' ಪಾತ್ರ ನೋಡಿದ ಆಂಧ್ರ ಸಾಹಿತ್ಯ ರಂಗದ "ಅಭಿನವ ವ್ಯಾಸಮುನಿ" ಬಿರುದಾಂಕಿತರಾಗಿದ್ದ ಮಹಾಮಹೋಪಾಧ್ಯಾಯ ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿಗಳು ರಂಗದ ಮೇಲೆ ಬಂದು ಭಾವುಕರಾಗಿ ಆಲಂಗಿಸಿ ಅಭಿನಂದಿಸಿದ್ದರು. ಹಾಗೆಯೇ 1927 ರಲ್ಲಿ ಗುಬ್ಬಿ ಕಂಪನಿ ದಾವಣಗೆರೆಯಲ್ಲಿ ಮೊಕ್ಕಾಂ ಹಾಕಿದಾಗ, ಇವರು ಕಬೀರ ಪಾತ್ರಕ್ಕೆ ಬೇಹಾಗ್ ರಾಗದಲ್ಲಿ– "ರಾಮ ಭಜನಾನಂದವು ಸುಖಸಾರವು..." ಗೀತೆ ಹಾಡಿ ನಂತರ ಪೀಲುರಾಗದ "ಮನ್ಮರೇ ಮಾಯಾಮರೇ ಮರ್‌ಮರ್‌ಗಯೇ ಶರೀರ್..." ರಂಗಗೀತೆ ಹಾಡಿ ಕೊನೆಗೆ "ಪರಿವಾಹಿ ರಾಮ ಪರಬಲ ಭೀಮ ಸಾಹಿ ಶ್ರೀರಾಮ..." ಗೀತೆ ಹಾಡಿದಾಗ ಕಿಕ್ಕಿರಿದು ತುಂಬಿರುತ್ತಿದ್ದ ಪ್ರೇಕ್ಷಕರೆಲ್ಲರೂ Once more ಕೂಗುತ್ತಿದ್ದರು. ಇದೇ ರೀತಿ ಮೂರು ಬಾರಿ ಹಾಡಿದಾಗ, ಪ್ರೇಕ್ಷಕರಲ್ಲಿದ್ದ ಅಲ್ಲಿನ ಆಗರ್ಭ ಶ್ರೀಮಂತ ಧರ್ಮಪ್ರವರ್ತನೆ ರಾಜನಹಳ್ಳಿ ಹನುಮಂತಪ್ಪ ಚಿನ್ನದ ಪದಕ ಪ್ರದಾನ ಮಾಡಿ ಮೆಚ್ಚುಗೆ ವ್ಯಕ್ತಪಡಿಸಿದರು.

ಗುರುಮೂರ್ತಪ್ಪ ಅವರ ಜೊತೆ ಸಹ ಕಲಾವಿದರಾಗಿ ಎಂ.ವಿ.ಸುಬ್ಬಯ್ಯ ನಾಯ್ಡು, ಸೋಮಾಜಿರಾವ್, ಗೋವಿಂದಶೆಟ್ಟಿ, ಎಂ.ಸುಬ್ಬರಾವ್,

ಜಿ.ನಾಗೇಶರಾಯರು, ಕಬೀರ ಪತ್ನಿ ಪಾತ್ರದ ನಾರಾಯಣ ನಾಯ್ಡು, ಮುಂತಾದ ರಂಗ ದಿಗ್ಗಜರು ಇದ್ದರು ಎಂಬುದು ಬಹುಮುಖ್ಯ. 1920–21 ರಲ್ಲಿ 'ಸಾಮ್ರಾಜ್ಯ ನಾಟಕ ಮಂಡಳಿ' (ಮಳವಳ್ಳಿ ಸುಬ್ಬಣ್ಣನವರ ಮಗ ದೊಡ್ಡಮಲ್ಲಯ್ಯ ನವರ ಕಂಪನಿ) ಯಲ್ಲಿ ಗುರುಮೂರ್ತಪ್ಪ ಅವರು ಮಳವಳ್ಳಿ ಸುಂದರಮ್ಮ, ಮಳವಳ್ಳಿ ಪಾರ್ವತಮ್ಮ, ಇವರ ಜೊತೆಗೆ ಕೃಷ್ಣ, ಕಾಳಿದಾಸ, ಅರ್ಜುನ, ರಾಜಕಿರೀಟಿ, ರಾಮ, ಚಂದ್ರಭಾನು, ಹರಿಶ್ಚಂದ್ರ, ಜಯವೀರ, ಕನಕಸುಂದರ, ಮೊದಲಾದ ರಾಜಪಾರ್ಟುಗಳನ್ನು ಹಾಕುತ್ತಿದ್ದರು.

**"ನಿಮ್ಮ ಧ್ವನಿ ಸಂಗೀತಕ್ಕಾಗಿಯೇ ಮಾಡಿದ ಧ್ವನಿ, ನಿಮ್ಮ ಹಾಡಿಕೆಯಲ್ಲಿ ಭಾವ–ರಾಗ–ತಾಳ ಈ ಮೂರು ಅಂಶಗಳು ಪೂರ್ಣವಾಗಿವೆ'" ಎಂದು ಪ್ರಭು ನಾಲ್ವಡಿ ಕೃಷ್ಣರಾಜ ಒಡೆಯರ್ (ಚಪ್ಪಾಳೆ ತಟ್ಟುತ್ತಾ) ಹೇಳಿದ್ದರು. ಶ್ರೀಮನ್ ಒಡೆಯರ್ ಅವರಿಂದ ಇಂತಹ ಮಾತುಗಳನ್ನು ಹೇಳಿಸಿಕೊಳ್ಳುವ ಭಾಗ್ಯ ಗುರುಮೂರ್ತಪ್ಪ ನವರಿಗೆ ಮಾತ್ರದಕ್ಕಿತ್ತು, ಅದು ನಾಟಕ 'ಸುಭದ್ರ ಕಲ್ಯಾಣ' ಪಾತ್ರ–ಅರ್ಜುನ, ಮೈಸೂರು ಕ್ಯಾಂಪು, ಹಾಡಿದ ಗೀತೆ ಜಂಜೂಟಿರಾಗದ "ವಂದಿಸುವೆ ಮೌನಿಂದ್ರ ನಿಮ್ಮ ಚರಣ ಕಮಲಕೆ..." ಹಾಗೂ ಖರಹರ ಪ್ರೇಮರಾಗದಲ್ಲಿ 'ಚಿತ್ತೇವಶಶ್ರೀ..."** ಎಂದು ಸುಭದ್ರೆ ಅರ್ಜುನನ ಹಾಡಿಗೆ ನಾಲ್ಕಾರು ಬಾರಿ Once more ಬೇಡಿಕೆ ಬಂದಿತ್ತು.

## ಶ್ರೀ ರೇವಣಸಿದ್ದೇಶ್ವರ ಬೆಟ್ಟದಲ್ಲಿ ರಂಗಪ್ರವೇಶ

ಬಿ.ವಿ. ಗುರುಮೂರ್ತಪ್ಪ ಅವರ ತಂದೆ ವೆಂಕಟರಮಣಪ್ಪ ಅವರು ಸಹ ಮೂಲತಃ ಸಂಗೀತ, ಸಾಹಿತ್ಯ, ನಾಟಕಗಳಲ್ಲಿ ಅಭಿರುಚಿ ಉಳ್ಳವರಾಗಿದ್ದರು. ಇವರು ಬೆಂಗಳೂರು ಜಿಲ್ಲೆಯ ಹೊಸಕೋಟೆಯ ನಂದಗುಡಿ ಹೋಬಳಿಯ ಖಾಯಂಗುತ್ತಾ ಶಿವನಾಪುರದಲ್ಲಿ ಗುರುಮೂರ್ತಪ್ಪ ಅವರಿಗೆ ಜನ್ಮ ನೀಡಿದರು. ಇಲ್ಲಿಂದ ಅನೇಕಲ್ಲಿನ 'ಅದೂರಿ'ಗೆ ವಲಸೆ ಹೋಗಿ ಅಲ್ಲಿ ನೆಲೆಕಾಣದೆ ರಾಮನಗರದ 'ಬನ್ನಿಕುಪ್ಪೆ'ಗೆ ಬಂದು ನೆಲೆಸಿದರು. ಇವರ ಅಣ್ಣಂದಿರು ಸಹ ಪಿಟೀಲು ನುಡಿಸುತ್ತಿದ್ದರು. ಇವರಿಂದ ಸಂಗೀತದ ಗೀಳು ಗುರುಮೂರ್ತಪ್ಪ ಅವರಿಗೂ ಹತ್ತಿತು.

ಮುಂದೆ ಮಳವಳ್ಳಿಯ ಹಣಕೊಳ್ಳದ ಸಂಗೀತ ವಿದ್ವಾಂಸಕರಾದ ಶ್ರೀ ಶೇಷಭಟ್ಟ ಅವರಲ್ಲಿ ವಿದ್ಯಾಭ್ಯಾಸ ಮಾಡಿ ಸಂಗೀತ, ಸಾಹಿತ್ಯದ ಕೃಪೆ ಪಡೆದರು. ಮುಂದೆ ಹೆಚ್ಚಿನ ಸಂಗೀತ ಅಭ್ಯಾಸಕ್ಕಾಗಿ 'ಕುಡಿಕೆ ಬೇವೂರಿ'ನ ಪಟು ಕರೂರು

ಅಚ್ಚಣ್ಣ ಅವರಿಂದ ತಮ್ಮ 22ನೇ ವಯಸ್ಸಿನಲ್ಲಿ ಸಂಗೀತ ಅಭ್ಯಾಸ ಮುಗಿಸಿ ಬನ್ನಿಕುಪ್ಪೆ ಸೇರಿದರು.

ಬಿ.ವಿ. ಗುರುಮೂರ್ತಪ್ಪ ಅವರ ಕಲಾ ಪ್ರತಿಭೆಯನ್ನು ಪ್ರಚೋದಿಸುವಂತಹ ಒಂದು ಸಂದರ್ಭ ಒದಗಿ ಬಂತು. ಬನ್ನಿಕುಪ್ಪೆ ಪಕ್ಕದ ಮೂರು ಮೈಲು ಅಂತರದ ಅಮ್ಮನಪುರದೊಡ್ಡಿ ಹತ್ತಿರದ ಪುಣ್ಯಕ್ಷೇತ್ರವಾದ 'ಶ್ರೀ ರೇವಣಸಿದ್ದೇಶ್ವರ ಬೆಟ್ಟ'ದ ಅರ್ಚಕರಾಗಿದ್ದ 'ಹಟೀರುದ್ರಪ್ಪ' ಅವರಿಗೆ ಒಮ್ಮೆ ನಾಟಕ ಆಡಬೇಕೆಂಬ ಬಯಕೆ ಬಂತು, ಆಗಲೇ ರಂಗಪರಿಕರಗಳನ್ನು ಸಿದ್ದಪಡಿಸಿಕೊಂಡಿದ್ದರು. ಅವರಿಗೆ ಗುರುಮೂರ್ತಪ್ಪ ಅವರ ನೆನಪಾಗಿ ಅವರನ್ನು ತಮ್ಮೊಡನೆ ಕರೆತಂದು ತರಬೇತಿ ನೀಡಿದರು. ನಾಟಕ 'ಪಾಂಡವ ವಿಜಯ', 'ದ್ರೌಪದಿ' ಪಾತ್ರ, ನಾಟಕ ಯಶಸ್ವಿಯಾಯಿತು. 'ಸತ್ಯಹರಿಶ್ಚಂದ್ರ', 'ಸಾರಂಗಧರ' ನಾಟಕಗಳು ಏರ್ಪಾಟಾಯಿತು. ಚಂದ್ರಮತಿ, ಚಿತ್ರಾಂಗಿ ಪಾತ್ರಗಳನ್ನು ಗುರುಮೂರ್ತಪ್ಪನವರು ಯಶಸ್ವಿಯಾಗಿ ನಿಭಾಯಿಸಿದರು. ಅಂದು ಚಂದ್ರಮತಿ ಪಾತ್ರದಲ್ಲಿ ಅವರು ಹಾಡಿದ "ಸಾಕು ನಡೆ ಶಶಿಮುಖಿಯೇ... ಈ ಬಡವಿ ಏಕೆತಂದೆ..." ಹಾಗೂ 'ಚಿತ್ರಾಂಗಿ' ಪಾತ್ರದಲ್ಲಿ "ವರಸುಮ ಶರಸುಮ..." ಹಾಡು ಪ್ರೇಕ್ಷಕರ ಮನಸ್ಸಿನ ಮೇಲೆ ಅಪಾರ ಪರಿಣಾಮ ಬೀರಿತು. ಈ ನಾಟಕದಿಂದಲೇ ಗುರುಮೂರ್ತಪ್ಪ ಅವರ ನಿಜವಾದ ರಂಗಜೀವನ ಆರಂಭವಾದುದು.

ನಾಟಕ ಶಿರೋಮಣಿ ಎ.ವಿ.ವರದಾಚಾರ್ಯ ಅವರು ಬೆಂಗಳೂರಿನ ಸ್ಟೇಟ್ ಚಿತ್ರಮಂದಿರ ಇರುವಲ್ಲಿದ್ದ 'ಕಿಚ್ಚೆಟಿ ಛತ್ರ' ಎಂಬ ಕಟ್ಟಡ ಆವರಣದಲ್ಲಿ ತಮ್ಮ 'ರತ್ನಾವಳಿ ಥಿಯೇಟರ್' ಕಟ್ಟಿದ್ದರು. ರಂಗನಾಥ ಮೊದಲಿಯಾರ್ ಎಂಬುವರು 'ಶ್ರೀ ಶಾರದಾ ವಿಲಾಸ ನಾಟಕ ಸಭಾ' ಎಂಬ ಹೆಸರಿನಲ್ಲಿ ತಾವು ಆರಂಭಿಸಿದ ವೃತ್ತಿ ನಾಟಕ ಮಂಡಳಿಯಲ್ಲಿ ನಾಟಕಗಳನ್ನು ಆಡಿಸುತ್ತಿದ್ದರು. ಆದಾಗಲೇ ಇವರ ನಾಟಕಗಳನ್ನು ನೋಡಿದ್ದ ಗುರುಮೂರ್ತಪ್ಪ ಅವರಿಗೆ ತಾವು ಸಹ ವೃತ್ತಿ ನಾಟಕ ಮಂಡಳಿ ಸೇರಿ ಪ್ರಸಿದ್ಧ ನಟರಾಗಬೇಕೆಂಬ ಆಸೆ ಹುಟ್ಟಿತು. ಆಗ ಕಲಾವಿದ ಲಕ್ಷ್ಮೀ ನಾರಯಣಪ್ಪ ಎಂಬುವವರು ಇವರ ಪ್ರತಿಭೆ ಗುರುತಿಸಿ ಅವರ ತಂದೆಯವರ ಅನುಮತಿಯಂತೆ ಶ್ರೀ ಶಾರದಾ ವಿಲಾಸ ನಾಟಕ ಸಭಾಕ್ಕೆ ಕರೆತಂದರು. ಇಲ್ಲಿ ಸ್ತ್ರೀ ಪಾತ್ರ ನಿರ್ವಹಣೆಯೊಂದಿಗೆ 1916 ರ ವೇಳೆಗೆ 'ಸುಭದ್ರ ಚೂಡಾಮಣಿ', 'ಮಂದಾರವಲ್ಲಿ', 'ಚಂದ್ರಮತಿ', 'ಚಿತ್ರಾಂಗಿ', ಮೊದಲಾದ ಪ್ರಮುಖ ಸ್ತ್ರೀ ಪಾತ್ರಗಳನ್ನೆಲ್ಲಾ ನಿಭಾಯಿಸುತ್ತಿದ್ದರು. ಇಲ್ಲಿ ಆರು

ತಿಂಗಳಷ್ಟೇ ಇದ್ದೂ, ಮತ್ತೆ ಬನ್ನಿಕುಪ್ಪೆಯಲ್ಲಿ ನೆಲೆಸಿದರು. ಅಲ್ಲೂ ಈ ಬಣ್ಣದ ರಂಗಲೋಕದ್ದೇ ಚಿಂತೆ ಕಾಡುತ್ತಿತ್ತು. ಅಗ 'ಆಲ್ದೂರು ಕಂಪನಿ' ಮೂಲಕ ಬೆಳ್ಗಾವಿ ಪೆಯಿಂಟರ್ ಪೀರ್ ಸಾಹೇಬರ ಆಹ್ವಾನದ ಮೇರೆಗೆ ಆಲ್ದೂರು ಸೇರಿದರು. ಅಲ್ಲೂ ಸ್ತ್ರೀ ಪಾತ್ರ ನಿರ್ವಹಣೆ, 'ಪ್ರಭಾವತಿ ದರ್ಬಾರ್'ನ 'ವಂದನಾಗಿ'ಯಾಗಿ "ಅರ್ಧ ತಾವರೆಯಂತೆ ಹೊಳೆವ ನಿನ್ನಾಸ್ಯದ..." ಬೇಗಡೆರಾಗದ ಗೀತೆ 'ಬಕಾವಲಿ'ಯ ಗಜಲ್‌ಗಳಲ್ಲಿ ಪರಣತಿ, ಇಲ್ಲಿ ಕಂಪನಿ ಮುಚ್ಚಿ ಮುಂದೆ ಅನೇಕಲ್‌ನ ಮತ್ತೊಂದು ಕಂಪನಿ ಸೇರಿದರು. 1917ರ ವೇಳೆಗೆ ರಂಗನಾಥ ಮೊದಲಿಯಾರರ ವಿಶೇಷ ಆಹ್ವಾನದ ಮೇರೆಗೆ 'ಮನರುದಾರಗೊಂಡ ಶಾರದಾ ವಿಲಾಸ ನಾಟಕ ಮಂಡಳಿ' ಸೇರಿದರು. ಆರ್ಥಿಕ ಪರಿಸ್ಥಿತಿ ಕೆಟ್ಟು ಇಲ್ಲೂ ಕಂಪನಿ ಕೈಕೊಟ್ಟಿತ್ತು. ಮತ್ತೇ 'ಸಾಮ್ರಾಜ್ಯ ನಾಟಕ ಮಂಡಳಿ' ಸೇರಿ ಸ್ತ್ರೀ ಪಾತ್ರ, ರಾಜ ಪಾರ್ಟು ಹಾಕುತ್ತಿದ್ದರು. ರಂಗಗುರು ಮಳವಳ್ಳಿಯ ಪಿಟೀಲು ಸುಬ್ಬಣ್ಣ ಅವರಿಂದ ವಿಶೇಷ ತರಬೇತಿ ಪಡೆದು ಕಾಳಿದಾಸ, ಅರ್ಜುನ, ರಾಜಕಿರೀಟಿ, ರಾಮ, ಚಂದ್ರಭಾನು, ಹರಿಶ್ಚಂದ್ರ, ಜಯವೀರ, ಕನಕಸುಂದರ, ಮುಂತಾದ ಪಾರ್ಟುಗಳು ಪ್ರಸಿದ್ಧಿ ಪಡೆದವು. ಕಂಪನಿಯೂ ಅಲ್ಪಾಯುಷಿ ಆಯಿತು.

1920ಕ್ಕೆ ತುಮಕೂರು 'ಸೀತಾ ಮನೋಹರ ನಾಟಕ ಮಂಡಳಿ'ಗೆ ಬಂದು 'ಲಂಕಾದಹನ'ದ ಆಂಜನೇಯ, ಮುಂತಾದ ನಾಟಕ ಅಭಿನಯಿಸಿ ಇಲ್ಲಿಂದಲೂ ಕಾಲು ಕೀಳಬೇಕಾಯಿತು. ಚನ್ನಪಟ್ಟಣದ ತ್ರಿಯೆಂಬಕ್‌ಶಾಸ್ತ್ರಿಗಳು ಮತ್ತು ಗುರಿಕಾರರು ನಡೆಸುತ್ತಿದ್ದ "ಭಾರತ ಜನ ಮನೋಲಾಸಿನಿ" ಕಂಪನಿ ಸೇರಿದರು. ಇದೇ ಕಂಪನಿ ಗಂಗಾಧರರಯರ ನೇತೃತ್ವದಲ್ಲಿ ಮುಂದುವರೆಯಿತು. ಗುರುಮೂರ್ತಪ್ಪನವರು ತಮ್ಮ ರಂಗಕಲಾ ಸೇವೆಯನ್ನು ಇಲ್ಲಿಯೂ ಮುಂದುವರೆಸಿದರು. ಇಲ್ಲಿ 'ಕಂಸವಧ', 'ಯಮಗರ್ವಭಂಗ', 'ಶ್ರೀಕೃಷ್ಣ ಲೀಲೆ', 'ಕಬೀರ್', 'ಪ್ರಹ್ಲಾದ', 'ವೀರಸಿಂಹ', 'ನಿರೂಪಮ', 'ಕಾಳಿದಾಸ', 'ಪ್ರಭಾಮಣಿ', 'ವಿಜಯಸುಭದ್ರಾ ಪರಿಣಯ', 'ತುಕಾರಾಂ', 'ಸದಾರಮೆ', 'ವೀರಾಟಪರ್ವ', 'ರಾಮಾಂಜನೇಯಯುದ್ಧ', 'ಲಂಕಾದಹನ', 'ರಾಮಾಯಣ', 'ಚೋರಕಥೆ', 'ಗುಲೇಬ ಕಾವಲಿ', ಮೊದಲಾದ ನಾಟಕಗಳಲ್ಲಿ ಪ್ರಮುಖ ಪಾತ್ರಗಳ ನಿರ್ವಹಣೆ ಶ್ರೀಯುತರನ್ನು ಉತ್ತುಂಗಕ್ಕೆ ಕೊಂಡೋಯ್ದಿತ್ತು.

## ಗುಬ್ಬಿ ಕಂಪನಿ ಪ್ರವೇಶ

1927ರ ಅವಧಿಯಲ್ಲಿ ಇವರ ಖ್ಯಾತಿ ಗುಬ್ಬಿ ವೀರಣ್ಣ ಅವರಿಗೆ ತಿಳಿದು ಸ್ವತಃ ವೀರಣ್ಣ ಅವರು ಬನ್ನಿಕುಪ್ಪೆಗೆ ಬಂದು ಈ ಕಲಾ ಶ್ರೇಷ್ಠರನ್ನು ಕಂಪನಿಗೆ ಕರೆದುಕೊಂಡು ಹೋದರು. ಅಲ್ಲೂ ಅಮೋಘವಾಗಿ ಬಹುತೇಕ ಎಲ್ಲಾ ಪ್ರಮುಖ ನಾಟಕಗಳಲ್ಲಿ ನಾಯಕರಾಗಿ ಮೆರೆದರು. "1942ರ ಸಮಯದಲ್ಲಿ ಗುಬ್ಬಿ ಕಂಪನಿಯ ಮುಖ್ಯ ನಟರಾಗಿದ್ದ ಬಿ.ವಿ.ಗುರುಮೂರ್ತಪ್ಪ, ಗಂಗಾಧರರಾಯರು, ಸುಬ್ಬರಾಯರು, ಕೇಶವಮೂರ್ತಿಗಳು, ಮ್ಯಾನೇಜರ್ ನರಸಿಂಹಮೂರ್ತಿ ಹಾಗೂ ಮುರಾರಾಚಾರ್ ಮುಂತಾದವರು ತಮ್ಮನ್ನು ಚಲನಚಿತ್ರಕ್ಕೆ ತೆಗೆದುಕೊಳ್ಳಲಿಲ್ಲ ಎಂಬ ಕಾರಣಕ್ಕೆ 51 ವಯಸ್ಸಿಗೆ ಅಸಮಾಧಾನಗೊಂಡು ಕಂಪನಿ ಬಿಟ್ಟರೆಂಬ ಮಾತನ್ನು 'ಕಲೆಯೇ ಕಾಯಕ' ಸಂ:ಜಿ.ಎಚ್.ವೀರಣ್ಣ– ಕನ್ನಡ ಸಾಹಿತ್ಯ ಪರಿಷತ್ ಪ್ರಕಟಣಾ ಕೃತಿಯಲ್ಲಿ ದಾಖಲಿಸಲಾಗಿದೆ. ಆದರೆ ಅವರ ಮೊಮ್ಮಗ ಬಿ.ಎಸ್.ಪ್ರಭಾಕರ್ ಅವರು ಹೇಳುವಂತೆ, "ಗುರುಮೂರ್ತಪ್ಪ ಬನ್ನಿಕುಪ್ಪೆಗೆ ಬಂದಿದ್ದರು, ಅದೇ ಸಮಯದಲ್ಲಿ ಕಂಪನಿಯ ಮುಖ್ಯ ನಟರನ್ನು ಕೆಲಸದಿಂದ ತೆಗೆದು ಹಾಕುತ್ತಿದ್ದಾರೆ ಎಂಬ ವಿಷಯ ತಿಳಿದು, ಮತ್ತೆ ಆಹ್ವಾನ ಬಂದರು ಕಂಪನಿಗೆ ಹೋಗದೆ ಇಲ್ಲಿಯೇ ಇದ್ದು ಸಂಸ್ಕೃತ ಅಭ್ಯಾಸ ಮಾಡುತ್ತಾ, ಸ್ವಂತದ "ದತ್ತಾತ್ರೇಯ ಕೃಪಾ ಪೋಷಿತ ನಾಟಕ ಮಂಡಳಿ" ಅರಂಭಿಸಿದ್ದರು. ಅದು ಅವರನ್ನು ನಷ್ಟಕ್ಕೆ ದೂಡಿತ್ತು. ನಂತರ 11.06.1941 ರಲ್ಲಿ ನಟ ಗಂಗಾಧರ ರಾಯರ ಒತ್ತಾಯದ ಕರೆಗೆ ಮನ್ನಿಸಿ 'ಶ್ರೀ ವಿಘ್ನೇಶ್ವರ ನಾಟಕ ಮಂಡಳಿ'ಗೆ ಭಾಗಸ್ಥರಾದರೂ ಅದೂ ಸಹ ಹಲವು ವರ್ಷ ಸಾಗಿ ನಿಂತಿತು. ಕೊನೆಗಾಲದಲ್ಲಿ ರಂಗಭೂಮಿ ಸಹವಾಸವೇ ಬೇಡ ಎಂದು ತಮಗೆ ಬರುತ್ತಿದ್ದ ಮಾಸಾಸನ ' 150/– ರಲ್ಲಿ ಮೊಮ್ಮಕ್ಕಳಾದ ಬಿ.ಎಸ್.ಪ್ರಭಾಕರ್, ಗುರುದತ್, ಇಂದ್ರ ಅವರನ್ನು ಓದಿಸಿದರು. ಪ್ರಭಾಕರ್ ಹಾಗೂ ಗುರುದತ್ ಪ್ರಸ್ತುತ ಇಂಡಸ್ಟ್ರೀಯಲ್ ಕಾಮರ್ಸ್‌ನಲ್ಲಿ ಉದ್ಯೋಗಿಗಳಾಗಿದ್ದು, ಪ್ರಭಾಕರ್ ನಿವೃತ್ತಿ ಹೊಂದಿದ್ದಾರೆ. ಇಂದ್ರ ಗೃಹಿಣಿಯಾಗಿದ್ದು ಎಲ್ಲರೂ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಜಮೀನು ಬನ್ನಿಕುಪ್ಪೆಯಲ್ಲಿದ್ದು ವಾರಕೊಮ್ಮೆ ಪ್ರಭಾಕರ್ ಊರಿಗೆ ಹೋಗಿ ಅಲ್ಲಿ ಗದ್ದೆ, ಜಮೀನು ಕೆಲಸ ಮಾಡುತ್ತಿದ್ದಾರೆ. ಕೊನೆಗಾಲದಲ್ಲಿ ಬೇಸತ್ತು ಸನ್ಯಾಸ ಸ್ವೀಕರಿಸಿದ ಗುರುಮೂರ್ತಪ್ಪ ಅವರು ಕನಸಿನಲ್ಲಿ ಬಂದು ಹೇಳಿದ ದಾರ್ಶನಿಕರ ಮಾತಿನಂತೆ ಎಲ್ಲಾ ಭೋಗ ತ್ಯಜಿಸಿ ಆಧ್ಯಾತ್ಮಕ್ಕೆ ತೊಡಗಿ ಬನ್ನಿಕುಪ್ಪೆಯಲ್ಲಿ ದತ್ತಾತ್ರೇಯ

ದೇವಸ್ಥಾನ ಕಟ್ಟಿಸಿದರು ಎಂಬುದು ಈಗ ಇತಿಹಾಸ. ಎಲ್ಲಾ ರಂಗ ಕಲಾವಿದರಿಗೂ ಭವಿಷ್ಯದ ಪ್ರಶ್ನೆ ಕಾಡಿಸುವುದಕ್ಕೆ ಇವರ ಪ್ರಸಂಗ ಒಂದು ಉದಾಹರಣೆ ಎನಿಸುತ್ತದೆ.

ಇಷ್ಟೆಲ್ಲಾ ಪ್ರತಿಭೆ ಸಾಧನೆ ಇದ್ದರೂ ಎಲೆಮರೆಕಾಯಿಯಂತೆ ಹಳ್ಳಿಯಲ್ಲಿಯೇ ಇದ್ದಾಗ, ಕೊನೆಗಾಲದಲ್ಲಿ ವೀರಣ್ಣ ಅವರು ಒಂದು ಮಾತು ಹೇಳಿದ್ದರಂತೆ, "ಗುರುಮೂರ್ತಪ್ಪ ನೀನು ದೊಂಬಿದಾಸ ಜಾತಿಯಲ್ಲಿ ಹುಟ್ಟಿಟ್ಟೇ ಅನ್ನೋ ಕಾರಣಕ್ಕೆ ಹೆಸರಾಗಲಿಲ್ಲ, ಬೇರೆ ಜಾತಿಯಲ್ಲಿ ಹುಟ್ಟಬೇಕಾಗಿತ್ತು". ವೀರಣ್ಣನವರ ಅಂತರಾಳದ ಈ ನೋವಿನ ಮಾತು ಇಂತಹ ನೂರಾರು ಎಲೆಮರೆ ಪ್ರತಿಭೆಗಳಿಗೂ ಅನ್ವಯಿಸುವ ಮಾತಾಗಿದೆ. ಅಲ್ಲದೆ, ಮೋಸ ಮಾಡುವ, ಪ್ರತಿಭೆ ಹರಣ ಮಾಡುವ, ತಾರತಮ್ಯ ಮಾಡುವ ಇತಿಹಾಸಕ್ಕೆ ಕೇಳಿದ ಪ್ರಶ್ನೆಯಂತೆ ಇದೆ ಈ ಮಾತು. ಗುರುಮೂರ್ತಪ್ಪ ಅವರು ಕೊನೆಗಾಲದಲ್ಲಿ ತಮ್ಮಲ್ಲಿದ್ದ ಚಿನ್ನದ ಕಡಗವನ್ನು ಮನೆ ಕಟ್ಟಿದ ಮುನಿಯ ಕೇಳಿಪಡೆದುಕೊಳ್ಳುತ್ತಾನೆ. ಪಿಟೀಲನ್ನು ಎಂಪೈರ್ ಸ್ಟೋಡಿಯೋದ ಮುನಿಯಪ್ಪನವರು ಪಡೆದುಕೊಳ್ಳುತ್ತಾರೆ. ಇವರು ಅನೇಕ ಕಲಾ ದಿಗ್ಗಜರಿಗೆ ಗುರುವೂ ಆಗಿದ್ದರು. ತಮ್ಮ ಅನುಭವದ ಮೂಸೆಯಿಂದ ಅನೇಕರಿಗೆ ತಮ್ಮ ರಂಗ ಪಾಂಡಿತ್ಯವನ್ನು ಧಾರೆ ಎರೆದಿದ್ದಾರೆ. ಕೆಂಗಲ್ ಹನುಮಂತಯ್ಯನವರು ಬಾಲ್ಯದಿಂದಲೂ ಇವರಿಗೆ ನಿಕಟರಾಗಿದ್ದರು. ಅವರು ವಾರನ್ನದಲ್ಲಿ, ಬೀದಿ ದೀಪದ ಕೆಳಗೆ ಓದುವ ದಿನಗಳಿಂದಲೂ ಇವರಿಗೆ ಚಿರಪರಿಚಿತರಾಗಿ ಅಭಿಮಾನ ಉಳ್ಳವರಾಗಿದ್ದರು.

ಇಂತಹ ಕಲಾತಪಸ್ವಿ ರಾಮನಗರ ಜಿಲ್ಲೆಯವರು ಎಂಬುವುದೇ ಇಂದಿನ ರಂಗಕರ್ಮಿಗಳಾದ ನಮಗೆ ಹೆಮ್ಮೆ.

ಸಂಪರ್ಕ: ಶ್ರೀ ಬಿ.ಎಸ್.ಪ್ರಭಾಕರ್

(ಮೊಮ್ಮಗ)

ಮೊ: 9448610598

****

## ಗುಬ್ಬಿ ಕಂಪನಿ ಕಲಾವಿದೆ



**ಎನ್.ಶಾಂತಮ್ಮ**

ಮೊ: 9845643106

ರಾಮನಗರದ ಅರ್ಚಕರಹಳ್ಳಿ ಲೇ.ಪುಟ್ಟಮ್ಮ ಅರೋಗ್ಯ ಇಲಾಖೆಯಲ್ಲಿ ಆಯವಾಗಿದ್ದುಕೊಂಡು, ಮಗಳು ಎನ್.ಶಾಂತಮ್ಮ ಅವರಿಗೆ 1951 ಸೆಪ್ಟೆಂಬರ್ 29 ರಂದು ಜನ್ಮ ನೀಡುತ್ತಾರೆ. ಮತ್ತು ಮಗಳನ್ನು ಹೈಸ್ಕೂಲ್ ಸೆಕೆಂಡರಿವರೆಗೆ ಓದಿಸುತ್ತಾರೆ. ಈ ಅವಧಿಯಲ್ಲಿ ಕಲಾರಂಗದ ಕಡೆ ಮಗಳಿಗೆ ಆಸಕ್ತಿ ಮೂಡಿ ನೃತ್ಯ ಅಭ್ಯಾಸಕ್ಕೆ ಸೇರಿಕೊಳ್ಳುತ್ತಾಳೆ. ಜೊತೆಗೆ ಸಂಗೀತದ ತಾಲೀಮು ನಡೆಯುತ್ತದೆ. ತಂದೆ ಮಂಡ್ಯದ ಚಿಕ್ಕಬಳ್ಳಿಯ ಲಿಂಗಯ್ಯ ಇವರು ಮಗಳು 3 ತಿಂಗಳಿನವರಿದ್ದಾಗಲೇ ಇಹಲೋಕ ತ್ಯಜಿಸುತ್ತಾರೆ. ತಂದೆಗೆ ಇಬ್ಬರು ಹೆಂಡತಿಯರು. ತಾಯಿ ದೊಡ್ಡವರು ಇವರಿಗೆ ಆಸ್ತಿ ಪಾಲು ಸಿಗದೆ ಅಕ್ಷರಸಹ ಬೀದಿಪಾಲಾಗುತ್ತಾರೆ. ಜೀವನೋಪಾಯಕ್ಕಾಗಿ 1964ರ ಡಿಸಂಬರ್ 25 ರಂದು ಹೆಸರಾಂತ 'ಗುಬ್ಬಿಕಂಪನಿ'ಗೆ ಹರೆಯದ ಸುಂದರವಧನೆಯಾಗಿ ಶಾಂತಮ್ಮ ನಾಟಕ ಕಂಪನಿ ಪ್ರವೇಶ ಮಾಡುತ್ತಾರೆ. ಕಂಪನಿಯಲ್ಲಿ ಮೊದಲಿಗೆ 'ಯಡಿಯೂರು ಸಿದ್ದಲಿಂಗೇಶ್ವರ ಮಹಾತ್ಮೆ' ನಾಟಕದ ಸ್ತ್ರೀ ಪಾತ್ರದೊಂದಿಗೆ ರಂಗಜೀವನ ಆರಂಭವಾಗಿ ಲವಕುಶ, ಶ್ರೀ ಕೃಷ್ಣಲೀಲಾ, ಕಲ್ಬುರ್ಗಿ ಶರಣ ಬಸವೇಶ್ವರ ಮಹಾತ್ಮೆ, ಸದಾರಮೆ, ಅಣ್ಣ–ತಮ್ಮ, ಮುದುಕನ ಮದುವೆ, ಸಾಹುಕಾರ, ತಾಯಿ ಕರುಳು, ಕೊಂಡುತಂದ ಗಂಡ, ಟಿಪ್ಪುಸುಲ್ತಾನ್, ಮಾವನಮನೆ, ವರನೋಡಿ ಹೆಣ್ಣು ಕೊಡು, ಗೋಮುಖ ವ್ಯಾಘ್ರ ಅಥವಾ ಬದುಕು ಜಟಕಬಂಡಿ ಮುಂತಾದ ನಾಟಕಗಳಲ್ಲಿ ಪ್ರಮುಖ ಪಾತ್ರಗಳಲ್ಲಿ ಶಾಂತಮ್ಮ ಅಭಿನಯವನ್ನು ದಾಖಲಿಸಿದ್ದಾರೆ. ಸುಮಾರು 32 ವರ್ಷಗಳ ಸುದೀರ್ಘ ರಂಗಯಾನದಲ್ಲಿ ಸ್ವತಃ ಗುಬ್ಬಿ ವೀರಣ್ಣ ಮತ್ತು ಪ್ರೇಕ್ಷಕರಿಂದ ಇವರಿಗೆ ಮೆಚ್ಚುಗೆ ಸಿಕ್ಕಿದೆ. ಇವರು ಡಾ.ರಾಜ್‌ಕುಮಾರ್, ನರಸಿಂಹರಾಜು, ಬಾಲಕೃಷ್ಣರಂತಹ ನಟರ ಜೊತೆಗೂ ಅಭಿನಯಿಸಿರುವ ಹೆಗ್ಗಳಿಕೆ ಹೊಂದಿದ್ದಾರೆ.

ಮುಂದೆ ತಾಯಿಯ ಆರೋಗ್ಯ ಕೆಟ್ಟಾಗ ತೌರುಮನೆಗೆ ಬಂದ ಶಾಂತಮ್ಮ ಕಂಪನಿ ಕಡೆಗೆ ಮುಖಮಾಡಲು ಸಾಧ್ಯವಾಗದೆ ಕಂಪನಿಯ ಸಹ ಕಲಾವಿದರು ಮುಂತಾದವರು ಮನೆಗೆ ಬಂದು ಹೋಗುವುದು ಇತ್ತು. ನಂತರ ಅವರು ಬರುವುದು ನಿಂತಿತು. ತಾಯಿ ತೀರಿಕೊಂಡರು. 35 ವರ್ಷಗಳ ಹಿಂದೆ ಪೇಟೆಕ್ಯಾಂಪ್‌ನಲ್ಲಿ ಸೋಮವಾರದಂದು ಬಸವೇಶ್ವರ ದೇವರ ಸಾಕ್ಷಿಯಾಗಿ ದೇವಸ್ಥಾನದಲ್ಲಿ ತನಗೆ ತಾಳಿ ಕಟ್ಟಿದ್ದ (ಅಗ್ನಿ ಹೋತ್ರಣ್ಣನು ಗಳಿಗೆ, ಮುಹೂರ್ತ ಹೇಳಿದ್ದವರು) ಯಜಮಾನರು (ಜಿ.ವಿ.ಚೆನ್ನಬಸವೇಶ್ವರ) ಸಹ ಬರುವುದು ನಿಂತು ನಾನು ಅಕ್ಷರಸಹ ಅನಾಥೆಯಾದೆ ಎಂದು ಕಣ್ಣೀರಿಡುವ ಶಾಂತಮ್ಮ ಖಿನ್ನರಾಗಿ ಜೀವನ ಸಾಗಿಸುತ್ತಿದ್ದಾರೆ. ಈ ಇಳಿವಯಸ್ಸಿನಲ್ಲೂ ಕಿಂಚಿತ್ತು ಅಭಿನಯದ ಆ ಪಟ್ಟುಗಳು ಮರೆತಿಲ್ಲವಾದರೂ ಟೆಲಿವಿಷನ್, ಸಿನಿಮಾಗೆ ಹೋಗದ ಆಗಾಗ ರಂಗಸೇವೆಯಲ್ಲಿಯೇ ತೃಪ್ತಿ ಪಡುತ್ತಿದ್ದು, ಸರ್ಕಾರದ ಮಾಸಾಸನಕ್ಕಾಗಿ ಚಾತಕ ಪಕ್ಷಿಯಂತೆ ಕಾಯುತ್ತಿದ್ದರು,ಇತ್ತೀಚೆಗೆ ಇವರಿಗೆ ಮಾಸಾಸನ ಬರುತ್ತಿದ್ದು ಅದರಲ್ಲಿ ಜೀವನ ಸಾಗಿಸುತ್ತಿದ್ದಾರೆ. ಇವರ ಜೀವನ ಕಂಡಾಗ ನಮಗೆ ಕಲಾವಿದರ ಜೀವನ ಇಷ್ಟೇನಾ! ಎನಿಸದಿರದು. ಆದರೂ ಎದೆಗುಂದದೆ ಶಾಂತಮ್ಮ ಈಗಲೂ ರಂಗಸೇವೆ ಮುಂದುವರೆಸಿದ್ದಾರೆ.









**ಶಾಂತಮ್ಮ ಅಭಿನಯಿಸಿದ ಕೆಲವು ನಾಟಕಗಳ ದೃಶ್ಯ**

****



**ಶ್ರೀ ಸಿ.ಎಂ.ಲಿಂಗಪ್ಪ**
**ರಂಗ ಕಲಾವಿದ ಹಾಗೂ**
**ಮಾಜಿ ಶಾಸಕರು**
**ಸಂಕರ್ಪ: 9845006976**



ರಾಮನಗರ ಜಿಲ್ಲೆ ಕೈಗಾರಿಕಾ ಪ್ರದೇಶ ಬಿಡದಿಯ ಇಟ್ಟಮಡು ಗ್ರಾಮದ ಸಿ.ಎಂ.ಲಿಂಗಪ್ಪ ಅವರು ರಾಮನಗರ ತಾಲ್ಲೂಕಿನ ಮಾಜಿ ಶಾಸಕರು ಹಾಗೂ ರಂಗ ಕಲಾವಿದರು.

ಶ್ರೀಕೃಷ್ಣ, ಅರ್ಜುನ ಪಾತ್ರ ನಿರ್ವಹಣೆಯಿಂದ ರಾಜ್ಯದಲ್ಲಿಯೇ ಹೆಸರು ಗಳಿಸಿರುವ ಶಾಸಕರು. ಈಗಲೂ ರಂಗ ಕಾಳಜಿ ಹಾಗೂ ಬದ್ಧತೆ ಹೊಂದಿದ್ದಾರೆ. ಚುನಾವಣೆ ಸಂದರ್ಭದಲ್ಲಿ ಶ್ರೀಕೃಷ್ಣ ವೇಷಧಾರಿಯಾಗಿ ಕಾಣಿಸಿಕೊಂಡು ಪರೋಕ್ಷವಾಗಿ ರಂಗ ಕಲಾವಿದರಿಗೆ ಮನ್ನಣೆ ತರುವ ಜೊತೆಗೆ ರಂಗಕಲೆಯ ಮೂಲಕವೇ ರಾಜಕೀಯ ಯಶಸ್ಸಿಗೂ ಕಾರಣರಾದವರು. ಇವರ ಮಕ್ಕಳಾದ ಶಿವಪ್ರಸಾದ್ ಸಹ ರಂಗ ಕಲಾವಿದರು. ಚಂದ್ರಶೇಖರ್, ಸತೀಶಚಂದ್ರ ಅವರು

ಸಹ ಗಾಯಕರಾಗಿದ್ದಾರೆ. ಒಟ್ಟಾರೆ ಇವರ ಕುಟುಂಬವು ಸಾಂಸ್ಕೃತಿಕ ಹಾಗೂ ರಂಗ ಚಟುವಟಿಕೆಯಲ್ಲಿ ತೊಡಗಿ, ಜಿಲ್ಲೆಯಲ್ಲಿ ಸಾಂಸ್ಕೃತಿಕ ಮತ್ತು ರಂಗ ಚಟುವಟಿಕೆಗಳಿಗೆ ಸದಾ ಪ್ರೋತ್ಸಾಹಕರಾಗಿದ್ದಾರೆ.

ರಂಗಭೂಮಿಗೆ ಸಿ.ಎಂ.ಲಿಂಗಪ್ಪ ಅವರ ಬಹುಮುಖ್ಯ ಕೊಡುಗೆ ಎಂದರೆ, ತಾವು ಶಾಸಕರಾಗಿದ್ದ ಅವಧಿಯಲ್ಲಿ ನಿರಂತರವಾಗಿ ಎರಡು ವರ್ಷಗಳು 'ಪೌರಾಣಿಕ ರಂಗೋತ್ಸವ'ವನ್ನು ಜಾನಪದ ಲೋಕದಲ್ಲಿ ನಡೆಯಲು ಕಾರಣರಾಗಿದ್ದರು. ಪ್ರತಿವರ್ಷ 15ಕ್ಕೂ ಹೆಚ್ಚಿನ ನಾಟಕ ಪ್ರಯೋಗಗಳು ಎಲ್ಲಾ ಜಿಲ್ಲೆಗಳಿಂದ ಆಗುತ್ತಿತ್ತು.




**ಸಿ.ಎಂ.ಲಿಂಗಪ್ಪ ಅವರ ಪುತ್ರ**
**ಶ್ರೀ ಎಲ್.ಶಿವಪ್ರಸಾದ್,**
**ರಂಗ ಕಲಾವಿದ, ಇಟ್ಟಮಡು, ಬಿಡದಿ**

****

## ಶ್ರೀ ಮರಿದೇವರು

### ರಂಗ ಕಲಾವಿದ ಹಾಗೂ ರಂಗ ಸಂಘಟಕ



**ಸಂಪರ್ಕ: 9448473314 #1403, ಲಲಿತಾದ್ರಿ ನಿಲಯ, 2ನೇ ಅಡ್ಡರಸ್ತೆ, ವಿದ್ಯಾನಗರ, ಬಿ.ಎಂ.ರಸ್ತೆ, ರಾಮನಗರ**

ರಾಮನಗರ ಜಿಲ್ಲೆಯ ಕಸಬ ಹೋಬಳಿ ಕೆಂಪೇಗೌಡನದೊಡ್ಡಿಯ ಲೇ.ಸಿದ್ದಯ್ಯ ಹಾಗೂ ಶ್ರೀಮತಿ ಕೆಂಚಪ್ಪ ದಂಪತಿಗಳ ಪುತ್ರರಾಗಿ 25.06.1966 ರಲ್ಲಿ ಜನ್ಮ ಪಡೆದಿದ್ದಾರೆ. ಮರಿದೇವರು ಅವರು ರಾಮನಗರ ಜಿಲ್ಲೆ ಹಾಗೂ

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿ, ಸ್ವಯಂ ನಿವೃತ್ತಿ ಹೊಂದಿ ಪ್ರಮುಖ ರಾಜಕೀಯ ಪಕ್ಷವೊಂದರಲ್ಲಿ ಗುರುತಿಸಿಕೊಂಡಿದ್ದವರು.

ದಿ.ಮರಿದೇವರು ಅವರು ರೈತ ಕುಟುಂಬದಿಂದ ಬಂದು ಸಾಂಸ್ಕೃತಿಕವಾಗಿ ಅತ್ಯಂತ ಹೆಚ್ಚಿನ ಕಾಳಜಿ ಹೊಂದಿರುವ ವ್ಯಕ್ತಿ. ತನ್ನ ತಾಯಿ ಅವರ ಹೆಸರಿನಲ್ಲಿ ವಿವಿಧ ರಂಗ ಸಂಘಟನೆಗಳ ಆಶ್ರಯದಲ್ಲಿ ಪ್ರತಿವರ್ಷ ಜಿಲ್ಲೆಯಲ್ಲಿ ಸಾಂಸ್ಕೃತಿಕ ಚಟುವಟಿಕೆಗಳನ್ನು ನಿರಂತರ ನಡೆಸಿಕೊಂಡು ಬಂದಿರುತ್ತಾರೆ.

ಮೂಲತಃ ರಂಗಭೂಮಿ ಕಲಾವಿದರಾದ ಮರಿದೇವರು ಅವರು 1991 ರಿಂದ ಕುರುಕ್ಷೇತ್ರದಲ್ಲಿ ಧರ್ಮರಾಯ, ಶ್ರೀಕೃಷ್ಣನಾಗಿ, ಪಾಂಡುವಿಜಯದಲ್ಲಿ ದುಶ್ಯಾಸನ, ಕೌಂಡಲಿಕನವಧೆಯಲ್ಲಿ ಶ್ರೀಕೃಷ್ಣನಾಗಿ, ರಾಮಾಯಣದಲ್ಲಿ ಸೂತ್ರಧಾರನಾಗಿ, ಹೀಗೆ ಎಲ್ಲಾ ನಾಟಕಗಳ ಮರುಪ್ರದರ್ಶನದಲ್ಲಿ ಅಭಿನಯಿಸಿ ಇತರರನ್ನು ಪ್ರೋತ್ಸಾಹಿಸಿದ್ದಾರೆ. ರಾಮನಗರ ಜಿಲ್ಲೆಯಲ್ಲಿ ನಾಟಕ ಪ್ರಯೋಗಿಸುವ ಪ್ರತಿತಂಡಕ್ಕೆ ತಲಾ 5 ಸಾವಿರ ರೂಪಾಯಿಯಂತೆ ಪ್ರೋತ್ಸಾಹಧನ ನೀಡಿ ಜಿಲ್ಲೆಯಲ್ಲಿ ರಂಗಭೂಮಿ ಬೆಳವಣಿಗೆಗೆ ಕಾರಣರಾಗಿದ್ದಾರೆ. ಇದುವರೆಗೆ ಸುಮಾರು 155ಕ್ಕೂ ಹೆಚ್ಚಿನ ತಂಡಗಳಿಗೆ ಧನಸಹಾಯ ಮಾಡಿದ ಹೆಗ್ಗಳಿಕೆ ಮರಿದೇವರು ಅವರದು.

ರಂಗ ಕಲಾವಿದರು–ನಿರ್ದೇಶಕರು, ರಂಗ ಸಂಘಟಕರಿಗೆ ಸನ್ಮಾನ, ರಂಗಗೌರವ ನೀಡುತ್ತಾ ಪ್ರೋತ್ಸಾಹಿಸಿದ್ದಾರೆ. ದೆಹಲಿ ಹಾಗೂ ಇತರೆ ಪ್ರದೇಶಗಳಲ್ಲೂ ನಾಟಕ ಪ್ರಯೋಗಕ್ಕೆ ಕಾರಣರಾಗಿದ್ದಾರೆ. ಸರ್ಕಾರಿ ನೌಕರರ ಸಂಘದ ಕಲಾವಿದರಿಂದಲೂ ಕುರುಕ್ಷೇತ್ರ, ರತಿಕಲ್ಯಾಣ, ಮುಂತಾದ ನಾಟಕಗಳನ್ನು ಪ್ರಯೋಗಿಸಿದ್ದಾರೆ.




ಶ್ರೀ ಕೃಷ್ಣ ಪಾತ್ರದಲ್ಲಿ ಮರಿದೇವರು

ಸತತ ಏಳು ವರ್ಷಗಳು ನಿರಂತರವಾಗಿ ಜಿಲ್ಲೆಯಲ್ಲಿ ತಂದೆ-ತಾಯಿ ಅವರ ಹೆಸರಿನಲ್ಲಿ ಸೋಬಾನೆ ಪದಗಳ ಸ್ಪರ್ಧೆ ಏರ್ಪಡಿಸಿ ಪ್ರಶಸ್ತಿ ಹಾಗೂ ನಗದು ಬಹುಮಾನ, ಪ್ರಯಾಣ ವೆಚ್ಚ ನೀಡಿ ಜಾನಪದ ಕಲೆ ಉಳಿಸಲು ಸಹ ನಿರಂತರ ಪ್ರಯತ್ನ ಮಾಡಿದ ಕಲಾ ಪೋಷಕರು ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಧಾರ್ಮಿಕವಾಗಿ ಜಿಲ್ಲೆಯ ಬಹುತೇಕ ಹಳ್ಳಿ-ಪಟ್ಟಣಗಳಲ್ಲಿ ನಿರಂತರ ಭಾಗಿಯಾಗಿ ಇವುಗಳೆಲ್ಲದರ ಊರಣವನ್ನು ಸಾಂಸ್ಕೃತಿಕ ಸಂಘಟನೆಗೆ ಬಳಸಿಕೊಂಡು ಕೆಲಸ ಮಾಡಿದ್ದಾರೆ.

****

## ಶ್ರೀ ಎಂ.ಎಚ್.ಪ್ರಕಾಶ್
## (ಸ್ವರ ಮಾಧುರ್ಯ ಕಲಾ ಬಳಗ)



**ಸಂಪರ್ಕ: ಸುಪ್ರಿಯ ಟೆಕ್ಸ್‌ಟೈಲ್ಸ್, ಮಾರುತಿ ಬಿಲ್ಡಿಂಗ್, ನಮತ ಕಾಂಪ್ಲೆಕ್ಸ್, ಬಿ.ಎಂ.ರಸ್ತೆ, ಐಜೂರು, ರಾಮನಗರ**

ರಾಮನಗರ ತಾಲ್ಲೂಕಿನ ಕೂಟಗಲ್ಲು ಹೋಬಳಿಯ ಮೇಳೆಹಳ್ಳಿ ಗ್ರಾಮದ ರಂಗ ಕಲಾವಿದ ಶ್ರೀ ಹೊನ್ನಪ್ಪ ಶ್ರೀಮತಿ ಪುಟ್ಟಚೆನ್ನಮ್ಮ ಅವರ ಪುತ್ರರಾಗಿ, 07.07.1979 ರಲ್ಲಿ ಜನ್ಮ ಪಡೆದವರು. ರಾಮನಗರ ತಾಲ್ಲೂಕಿನಲ್ಲಿ 'ಸ್ವರ ಮಾಧುರ್ಯ ಕಲಾ ಬಳಗ' ಎಂಬ ರಂಗತಂಡ ಕಟ್ಟಿ ರಂಗಕಾಯಕ ಮಾಡುತ್ತಿದ್ದಾರೆ. ಸ್ವರ ಮಾಧುರ್ಯ ತಂಡದಿಂದ 'ಕುರುಕ್ಷೇತ್ರ' ಹಾಗೂ ರಾಮಾಂಜನೇಯ ಯುದ್ಧ ನಾಟಕಗಳನ್ನು, ಮರು ಪ್ರದರ್ಶನದೊಂದಿಗೆ ಪ್ರಯೋಗಿಸಿದ್ದಾರೆ. ಸ್ವತಃ ಪ್ರಕಾಶ್ ಅವರು ರಂಗ ನಟರಾಗಿ, ಅಭಿನಯಿಸುವ ಪ್ರಮುಖ ನಾಟಕಗಳೆಂದರೆ,

1. ಕುರುಕ್ಷೇತ್ರ- ಕೃಷ್ಣ,

2. ರಾವಣಾಂಜನೇಯ ಯುದ್ಧ- ರಾಮನಾಗಿ ಹಲವಾರು ಮರುಪ್ರದರ್ಶನದಲ್ಲಿ ಅಭಿನಯಿಸಿದ್ದಾರೆ



**ಕೃಷ್ಣ ಪಾತ್ರದಲ್ಲಿ ಎಂ.ಎಚ್.ಪ್ರಕಾಶ್**

**ಅಭಿನಯಿಸಿರುವ ಪ್ರದೇಶಗಳು:** ರಾಮನಗರ, ಚನ್ನಪಟ್ಟಣ, ಆದಿ ಚುಂಚನಗಿರಿ ಕ್ಷೇತ್ರ, ಕೆಂಗಲ್, ಮುಂತಾದವುಗಳು.

**ತಂಡದ ಸದಸ್ಯರುಗಳು,**

ಕೃಷ್ಣರಾಜು, ಕೆ.ಚಂದ್ರಯ್ಯ, ಕೆಂಪೇಗೌಡ, ಸಂಪತ್‌ಕುಮಾರ್, ಪುಟ್ಟಸ್ವಾಮಿ, ಲವಕುಮಾರ್ ಕೆ.ಪಿ., ಸಿದ್ದೇಗೌಡ, ಪ್ರಕಾಶ್, ಶಿವಣ್ಣ ದಾಸಾಪುರ, ನಾಗರಾಜ, ಆರ್.ಎಸ್.ನಾಗರಾಜು, ಮುಂತಾದವರು.


****

**ಪರಿಚಯ**

**ಡಾ.ಎ.ಆರ್.ಗೋವಿಂದಸ್ವಾಮಿ**

**ರಂಗ ತಜ್ಞ**

**ವಿಳಾಸ:** ಅಮ್ಮನಪುರ, ಅವೇರಹಳ್ಳಿ ಅಂಚೆ, ಕೈಲಾಂಚ ಹೋಬಳಿ, ರಾಮನಗರ ತಾಲ್ಲೂಕು, ರಾಮನಗರ ಜಿಲ್ಲೆ



ಅಂಚೆ ವಿಳಾಸ: 24, 1ನೇ ಮುಖ್ಯರಸ್ತೆ, 2ನೇ 'ಬಿ' ಅಡ್ಡರಸ್ತೆ,
ಶ್ರೀನಿಧಿ ಬಡಾವಣೆ, ಕೋಣನಕುಂಟೆ ಅಂಚೆ, ಬೆಂಗಳೂರು–560062
ಮೊ:944846262/9448617660/9900242685
Email: dr.govindaswamy@gmail.com

**ರಾಷ್ಟ್ರೀಯ ಮಾನವ ಸಂಪನ್ಮೂಲ ತಜ್ಞ, ರಂಗಭೂಮಿ, ಕಿರುತೆರೆ ಮತ್ತು ಸಿನಿಮಾ ನಟ, ನಿರ್ದೇಶಕ, ನಾಟಕಕಾರ, ಕವಿ, ವಿಮರ್ಶಕ, ವಿನ್ಯಾಸಕ, ಸುದ್ದಿ ವಾಚಕ, ಸಂಪಾದಕ, ಉಪನ್ಯಾಸಕ, ಸಂಶೋಧಕ, ಲೇಖಕ, ತರಬೇತುದಾರ, ರಂಗ ಸಂಘಟಕ, ಜಾನಪದ ವಿಶ್ಲೇಷಕ, ನಿರೂಪಕ, ಸಾಮಾಜಿಕ ಚಿಂತಕ ಡಾ.ಎ.ಆರ್.ಗೋವಿಂದಸ್ವಾಮಿ ಅವರು ಹೀಗೆ ಬಹು ಆಯಾಮಿಯಾಗಿದ್ದಾರೆ.**

ರಾಮನಗರ ಜಿಲ್ಲೆ, ಕೈಲಾಂಚ ಹೋಬಳಿ, ಅವೇರಹಳ್ಳಿ ಅಂಚೆಯ ಅಮ್ಮನಪುರದ ಲೇ. ರಾಮನಾಯ್ಕ ಅವರ ಪುತ್ರರು. ಇವರು ರಂಗಸಂಪನ್ಮೂಲ ವ್ಯಕ್ತಿಯಾಗಿ ರಂಗಭೂಮಿಯಲ್ಲಿಯೇ ತಮ್ಮನ್ನು ಶೈಕ್ಷಣಿಕವಾಗಿ, ಸಾಂಸ್ಕೃತಿಕವಾಗಿ, ಸಾಮಾಜಿಕವಾಗಿ ತೊಡಗಿಸಿಕೊಂಡು ದುಡಿಯುತ್ತಿರುವ ರಂಗ ಪ್ರತಿಭೆ.

**ವಿದ್ಯಾರ್ಹತೆ(ರಂಗಭೂಮಿ):**

**1) ಬಿ.ಎ.(ಸಂಗೀತ, ನೃತ್ಯ, ನಾಟಕ) –ಪ್ರಥಮ ರ್‍ಯಾಂಕ್ ಹಾಗೂ 4 ಚಿನ್ನದ ಪದಕಗಳು (1992)– ಬೆಂ.ವಿ.ವಿ.** 2) ಬಿ.ಎ.(ಕನ್ನಡ ಸಾಹಿತ್ಯ), – ದ್ವಿತೀಯ ದರ್ಜೆ –ಬೆಂ.ವಿ.ವಿ. (1992) 3) ಎಂ.ಎ. (ಸಂಗೀತ, ನೃತ್ಯ, ನಾಟಕ) **–ದ್ವಿತೀಯ ರ್‍ಯಾಂಕ್ –ಬೆಂ.ವಿ.ವಿ (1997)** 4) ಫ್ಯಾಷನ್ ಡಿಸೈನಿಂಗ್ ಡಿಪ್ಲೋಮೊ – ವೋಗ್ ಇನ್‌ಸ್ಟಿಟ್ಯೂಟ್, ಬೆಂಗಳೂರು. 5) ಎಂ.ಎ. (ಕನ್ನಡ ಸಾಹಿತ್ಯ), – ಬೆಂ.ವಿ.ವಿ. (1999) 6) ಎಂ.ಎ. (ಸಮೂಹ, ಸಂವಹನ ಮತ್ತು ಪತ್ರಿಕೋದ್ಯಮ), –ಮೈ.ವಿ.ವಿ. –ದ್ವಿತೀಯ ದರ್ಜೆ (2009) 7) **ಪಿಎಚ್.ಡಿ.** (ಬಿ.ವಿ.ಕಾರಂತರ **ರಂಗಭೂಮಿ), ಬೆಂ.ವಿ.ವಿ (2004)**

## ರಾಜ್ಯ, ರಾಷ್ಟ್ರೀಯಮಟ್ಟ ಮತ್ತು ಅಂತರಾಷ್ಟ್ರೀಯ ರಂಗ ಸಂಪನ್ಮೂಲ ವ್ಯಕ್ತಿಯಾಗಿ/ ಉಪನ್ಯಾಸಕನಾಗಿ/ ವಿಚಾರ ಸಂಕಿರಣಗಳಲ್ಲಿ

1. ವಿಶ್ವಕನ್ನಡ ಸಮ್ಮೇಳನ–2011 ಬೆಳಗಾವಿ (ಸಂಸ್ಕೃತಿ ಅನನ್ಯತೆ ವಿಚಾರ ಸಂಕಿರಣ), 2. ಸಂಗೀತ ಮತ್ತು ಪ್ರದರ್ಶನ ಕಲೆಗಳ ವಿಶ್ವವಿದ್ಯಾಲಯದ

ಡಿಪ್ಲೋಮ, ಬಿಎ., ಎಂಎ., ಎಂಫಿಲ್., ಪಿಎಚ್.ಡಿ. ಪದವಿ ಪಠ್ಯ ರಚನಾ ಸಮಿತಿ ಸದಸ್ಯ. 3. ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ಸಲಹಾ ಮಂಡಳಿ ಸದಸ್ಯ. 4. ಭಾರತ ಸರ್ಕಾರದ ಮಾನವ ಸಂಪನ್ಮೂಲ (ಸಂಸ್ಕೃತಿ) ಇಲಾಖೆಗಾಗಿ 'ಕರ್ನಾಟಕ ಸಾಂಪ್ರದಾಯಿಕ ಜಾನಪದ ಕಲಾ ಪ್ರಕಾರಗಳು ಹಾಗೂ ಅವುಗಳ ಸಾಮಾಜಿಕ ಕಳಕಳಿ' ಕುರಿತು ಪ್ರಬಂಧ ರಚನೆ. 5. 'ರಾಷ್ಟ್ರೀಯ ನಾಟಕ ಶಾಲೆ' (NSDRRC). 6. ಕೇಂದ್ರ ಸಂಗೀತ ಮತ್ತು ನಾಟಕ ವಿಭಾಗ. 7. ಪ್ರಸಾರ ಭಾರತೀಯ, ಆಕಾಶವಾಣಿ ನಾಟಕ ವಿಭಾಗ ಹಾಗೂ ದೂರದರ್ಶನ. 8. ಕರ್ನಾಟಕ ನಾಟಕ ಅಕಾಡೆಮಿ, ಕರ್ನಾಟಕ ಚಲನಚಿತ್ರ ಅಕಾಡೆಮಿ. 9. ಬೆಂಗಳೂರು ವಿಶ್ವವಿದ್ಯಾಲಯ, ಪ್ರದರ್ಶನಕಲಾ ವಿಭಾಗ, 10. ಉಸ್ಮಾನಿಯ ವಿಶ್ವವಿದ್ಯಾಲಯದ ಪ್ರದರ್ಶನ ಕಲಾವಿಭಾಗ, ಆಂದ್ರ ಪ್ರದೇಶ, 11. ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ 'ಮಾನವ ಸಂಪನ್ಮೂಲ ಕೇಂದ್ರ', ರಂಗಶಿಕ್ಷಣ ಕೇಂದ್ರಗಳು, ರಂಗ ಸಂಸ್ಥೆಗಳು, ಚಲನಚಿತ್ರ ತರಬೇತಿ ಕೇಂದ್ರಗಳಲ್ಲಿ ರಂಗ ತರಬೇತಿ ಕಳೆದ 20 ವರ್ಷಗಳಿಂದ ಮಾಡುತ್ತಿದ್ದಾರೆ. 12. **'ಕೇಂದ್ರ ಸಂಗೀತ ಮತ್ತು ನಾಟಕ ವಿಭಾಗ'**ದ ಧ್ವನಿ ಮತ್ತು ಬೆಳಕು ವಿಭಾಗದಲ್ಲಿ ರಂಗ ಕಲಾವಿದ, ನಿರ್ದೇಶಕ, ವಿನ್ಯಾಸಕನಾಗಿ 60ಕ್ಕೂ ಹೆಚ್ಚು ಪ್ರದರ್ಶನಗಳನ್ನು ನೀಡಿ, ಸುಮಾರು 10 ಲಕ್ಷ ಪ್ರೇಕ್ಷಕರನ್ನು, 5 ಲಕ್ಷಕ್ಕೂ ಹೆಚ್ಚು ಕಲಾವಿದರು/ ರಂಗತಂತ್ರಜ್ಞರನ್ನು 1999 ರಿಂದ 2003 ಅವಧಿಯಲ್ಲಿ ತರಬೇತಿ ನೀಡಿದ್ದಾರೆ. 13. ದಕ್ಷಿಣ ಭಾರತದ ಬಹುತೇಕ ಜಾನಪದ ಕಲಾತಂಡಗಳಿಗೆ ಸರ್ಕಾರದ ಯೋಜನೆ ಪ್ರಚಾರಕ್ಕೆ ತರಬೇತಿ ಹಾಗೂ ಕಾರ್ಯಕ್ರಮ ಮೇಲ್ವಿಚಾರಣೆ ಮಾಡಿದ್ದಾರೆ. 14. 38ಕ್ಕೂ ಹೆಚ್ಚಿನ ರಂಗಭೂಮಿ ಹಾಗೂ ಸಾಂಸ್ಕೃತಿಕವಾದ ವಿಚಾರ ಸಂಕಿರಣಗಳಲ್ಲಿ ಪ್ರಬಂಧ ಮಂಡಿಸಲಾಗಿದೆ. 15. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆಯೋಜಿತ 'ಬಹು ಭಾಷಾ ಅನನ್ಯತೆ' ವಿಚಾರ ಸಂಕಿರಣ. 16. ರಾಷ್ಟ್ರಮಟ್ಟದ ಸಾಹಿತ್ಯಿಕ, ಸಾಂಸ್ಕೃತಿಕ ಸಮ್ಮೇಳನಗಳನ್ನು ಆಯೋಜಿಸಿರುತ್ತಾರೆ. 17. ಕರ್ನಾಟಕ ಚಲನಚಿತ್ರ ಅಕಾಡೆಮಿ ರೂಪು-ರೇಕ್ಷೆ ರಚನಾ ಸಮಿತಿ ಸದಸ್ಯ ಹಾಗೂ ರಾಮನಗರ ಜಿಲ್ಲಾ ಸದಸ್ಯ.

## ಅಭಿನಯದ ನಾಟಕಗಳು (39ಕ್ಕೂ ಹೆಚ್ಚಿನ ನಾಟಕಗಳು)



ಅಳಿಯ ರಾಮರಾಯ ಪಾತ್ರದಲ್ಲಿ

ಪ್ರತ್ಯಕ್ಷ ಪ್ರಮಾಣ, ಆಲಿಬಾಬ ಮತ್ತು 40 ಕಳ್ಳರು, ಕನಸಿನವರು, ಜಲಗಾರ, ಜಾನರೆ, ಮುತ್ತುಚ್ಚೇರ, ಅಹಲ್ಯೆ (ನೃತ್ಯ ನಾಟಕ), ನೌಕಾಚರಿತಂ (ಬ್ಯಾಲೆ), ಕುಮಾರ ಸಂಭವ (ನೃತ್ಯ ನಾಟಕ ಕನ್ನಡ ಸಂಸ್ಕೃತಿ ಇಲಾಖೆ ಪ್ರಯೋಜಿತ), ಪಂಪಕಾವ್ಯ ವೈಭವ (ಮಿಶ್ರಕಲೆ) 'ಕನ್ನಡ ಸಂಸ್ಕೃತಿ ಇಲಾಖೆ' ಸಿಬ್ಬಂದಿಗಳೊಂದಿಗೆ, ಮಾದಾರ ಚೆನ್ನಯ್ಯ, ಸಿಂಗೀರಾಜ, ನೀರು (ಸಮುದಾಯ ತಂಡ), ಹೇರಾಮ್, ಜಾತೀ ಕಿ ಉಪಿರಿ ಸ್ವಾತಂತ್ರ್ಯಂ (ತೆಲಗು ಧ್ವನಿ ಬೆಳಕು), ಸ್ವಾತಂತ್ರ್ಯಂತನ್ನೆಜೀವತಂ (ಮಲೆಯಾಳಂ ಧ್ವನಿ ಬೆಳಕು), ಜಾತಿಕಿ ಉಪಿರಿ ಸ್ವಾತಂತ್ರ್ಯ (ತೆಲಗು ಧ್ವನಿ ಬೆಳಕು ಪ್ರಯೋಗ) ಮುಂತಾದ 39 ಕ್ಕೂ ಹೆಚ್ಚಿನ ನಾಟಕಗಳು, ಸ್ಕಿಟ್‌ಗಳು, ಮೂಕಾಭಿನಯಗಳಲ್ಲಿ ಅಭಿನಯ, ಅಲ್ಲದೆ, 60 ಕ್ಕೂ ಹೆಚ್ಚಿನ ಧಾರವಾಹಿಗಳು, 14ಕ್ಕೂ ಹೆಚ್ಚಿನ ಸಿನಿಮಾ (ಕನ್ನಡ, ಹಿಂದಿ, ತೆಲಗು, ಲಂಬಾಣಿ ಭಾಷೆಗಳ) ಅಭಿನಯ.



ಸಿಂಗಿರಾಜನಾಟಕದ ಬಿಜ್ಜಳನಾಗಿ



ಮುಖವರ್ಣಿಕೆ ಕಲಾವಿದನಾಗಿ

ಡಾ.ಎ.ಆರ್. ಗೋವಿಂದಸ್ವಾಮಿ:

ಪ್ರಯೋಗ ರಂಗತಂಡ



ಆಲಿಬಾಬನಾಗಿ: ಪ್ರಯೋಗ ರಂಗತಂಡ,
ನಿ: ಕೃಷ್ಣಮೂರ್ತಿ ಕವತಾರ್



ನಿರ್ದೇಶಕನಾಗಿ ಬೃಹತ್
ನಾಟಕ ಕಲಾಕೂಟದೊಂದಿಗೆ, ಶಿರಸಿ

1.



2.



1. ನಾಟಕ ಪದವಿಗಾಗಿ ರಾಜ್ಯಪಾಲರಿಂದ ನಾಲ್ಕು ಚಿನ್ನದ ಪದಕ ಸ್ವೀಕಾರ
2. ರಂಗ ಸಂಪನ್ಮೂಲ ವ್ಯಕ್ತಿಯಾಗಿ ಎಂ.ಇ.ಎಸ್. ರಂಗಶಾಲೆ, ಬೆಂಗಳೂರು



ಮಾಧಾರ ಚನ್ನಯ್ಯ ನಾಟಕದ ಮಂಚಣ್ಣ

ನಿರ್ದೇಶಕರಾಗಿ:

1. ಕನಸಿನವರು, ತುಕ್ಕೂಜಿ, ಆಲಿಬಾಬ ಮತ್ತು 40 ಕಳ್ಳರು ಸೇರಿದಂತೆ 29ಕ್ಕೂ ಹೆಚ್ಚು ನಾಟಕಗಳು, ಸ್ಕಿಟ್‌ಗಳು, ಮೂಕಾಭಿನಯ, ಪ್ರಚಾರ ನಾಟಕಗಳ ನಿರ್ದೇಶನ. 2. ಲಂಬಾಣಿ ಭಾಷೆಯ ಪ್ರಥಮ ನಾಟಕ (ಖಾಡೇರ್ ಬೋಟಿ ಭೋಡೋ) ನಿರ್ದೇಶನ ಮಾಡಿದ್ದಾರೆ. 3. ದಕ್ಷಿಣ ಭಾರತದ ಎಲ್ಲಾ ಭಾಷೆಗಳಲ್ಲಿ ಜರುಗಿದ (300ಕ್ಕೂ ಹೆಚ್ಚಿನ ಕಲಾವಿದರು, ತಂತ್ರಜ್ಞರು. 25,000ಕ್ಕೂ ಹೆಚ್ಚಿನ ಪ್ರೇಕ್ಷಕರು ಪ್ರತಿ ಪ್ರದರ್ಶನಕ್ಕೆ) ಕೇಂದ್ರ ಸರ್ಕಾರದ ಧ್ವನಿ ಮತ್ತು ಬೆಳಕು ಬೃಹತ್ ಪನೋರಮ ನಾಟಕಗಳು, 55ಕ್ಕೂ ಹೆಚ್ಚಿನ ಪ್ರದರ್ಶನಗಳು.



4. ಡಾ: ರಾಜ್ ಚಿತ್ರಜೀವನದ 35 ವರ್ಷಗಳ ನಂತರ ಅಭಿನಯಿಸಿದ ಮೊದಲ ನಾಟಕ (ಭಕ್ತ ಅಂಬರೀಷ)ಕ್ಕೆ ನಿರ್ದೇಶಕ ಸಹಾಯಕನಾಗಿ

ನಾಟಕ ಕಮ್ಮಟಗಳ ನಿರ್ದೇಶನ:

ಕರ್ನಾಟಕ ನಾಟಕ ಅಕಾಡೆಮಿ ವತಿಯಿಂದ ರಾಮನಗರ ಜಿಲ್ಲೆಯ ಅಮ್ಮನಪುರ ಗ್ರಾಮದಲ್ಲಿ ನಾಟಕ ಕಮ್ಮಟ ನಿರ್ದೇಶನ ಮಾಡಿ, "ಒಡಲಾಳ" ನಾಟಕ ಪ್ರಯೋಗಿಸಿದ್ದಾರೆ. ಅಲ್ಲದೆ ಇತರೆ ಕಮ್ಮಟಗಳನ್ನು ನಿರ್ದೇಶಿಸಿದ್ದಾರೆ.



**ಡಾ.ಗೋವಿಂದಸ್ವಾಮಿ ನಿರ್ದೇಶನದ ಕೇಂದ್ರ ಸರ್ಕಾರದ ಧ್ವನಿ ಮತ್ತು ಬೆಳಕಿನ ಬೃಹತ್ ನಾಟಕ 'ಜಾತಿಕಿ ಉಪಿರಿ ಸ್ವಾತಂತ್ರ್ಯಂ' (ಮಲೆಯಾಳಂ) ದೃಶ್ಯ, ಕೇರಳ**

## ನಾಟಕ ರಚನೆ ಹಾಗೂ ಇತರೆ ಕೃತಿಗಳು

1. ಮಕ್ಕಳ ಮಾರಾಟ ಕುರಿತ 'ಮಕ್ಕಳ ನ್ಯಾಯ' (ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆಯೋಜಿಸಿದ್ದ ನಾಟಕ ರಚನಾ ಮಕ್ಕಟದಲ್ಲಿ ಉತ್ತಮ ನಾಟಕಕೃತಿಯಾಗಿ ಆಯ್ಕೆಯಾಗಿ, ಸಂಸ್ಕೃತಿ ಇಲಾಖೆ ವತಿಯಿಂದ ಪ್ರಯೋಗವಾಗಿದೆ. 2. ವಿದ್ಯುದಾಲಿಂಗನ (ವಿದ್ಯುತ್ ಅಪಘಾತ ಕುರಿತ ರೇಡಿಯೋ ನಾಟಕ),

## ರಂಗ ಸಂಶೋಧನಾ ಲೇಖನಗಳು ಮತ್ತು ವಿಮರ್ಶೆಗಳು

ಪ್ರಜಾವಾಣಿ, ವಿಜಯ ಕರ್ನಾಟಕ, ಉದಯವಾಣಿ, ಸಂಯುಕ್ತ ಕರ್ನಾಟಕ, ಅಗ್ನಿ, ಲಂಕೇಶ್, ಕರ್ಮವೀರ, ಕನ್ನಡನುಡಿ, ಈ ಮಾಸ ನಾಟಕ, ಕನ್ನಡಸೇನೆ, ಜ್ಞಾನಭಾರತಿ ನ್ಯೂಸ್, ಜ್ಯೋತಿಬೆಳಗುತಿದೆ, ಕನ್ನಡಿಗರ ಕನ್ನಡಿ, ಬಂಜಾರ ಕೇಸರಿ/ ಬಂಜಾರ ವಾಣಿ, ಹಾಲ್ಕುರಿಕೆ ಥಿಯೇಟರ್ ಮಿರರ್, ರಂಗ ಜಂಗಮವಾಣಿ, ಸಂಸ ಮುಂಥಾದ ಪ್ರಮುಖ ಕನ್ನಡ ಪತ್ರಿಕೆಗಳು, ರಂಗಪತ್ರಿಕೆಗಳಲ್ಲಿ 259ಕ್ಕು ಹೆಚ್ಚು ರಂಗ ವಿಮರ್ಶೆ, ರಂಗ ಲೇಖನಗಳು, ಸಂಶೋಧನ ಲೇಖನಗಳು ಪ್ರಕಟಗೊಂಡಿವೆ. ಅಲ್ಲದೆ, ರಂಗ ಪತ್ರಿಕೆಗಳ ಸಲಹೆಗಾರನಾಗಿ ಸಹ ಕೆಲಸ.

**ಆಕಾಶವಾಣಿ ನಾಟಕ:** ಆಕಾಶವಾಣಿ 'ಬಿ-ಗ್ರೇಡ್ ಕಲಾವಿದ'ನಾಗಿ ನೂರಾರು

ಕಾರ್ಯಕ್ರಮಗಳಲ್ಲಿ ಹಾಗೂ ರಾಷ್ಟ್ರೀಯ ನಾಟಕಗಳಲ್ಲಿ ಅಭಿನಯ ಮತ್ತು ಬರಹಗಾರ. **ನಿರೂಪಕ/ ಸುದ್ದಿ ವಾಚಕ:** ದೂರದರ್ಶನದಲ್ಲಿ ಐದು ವರ್ಷ ಸುದ್ದಿ ವಾಚಕ, ಸಾವಿರಕ್ಕೂ ಹೆಚ್ಚು ರಂಗಭೂಮಿ ಹಾಗೂ ಸಾಂಸ್ಕೃತಿ ಕಾರ್ಯಕ್ರಮಗಳಲ್ಲಿ ನಿರೂಪಣೆ.

## ಅತಿಥಿ ರಂಗ ಉಪನ್ಯಾಸಕನಾಗಿ

ಬೆಂ.ವಿ.ವಿ. ಪ್ರದರ್ಶನ ಕಲಾ ವಿಭಾಗ– ಸ್ನಾತಕೋತ್ತರ ಪದವಿಗಳಿಗೆ, ರಂಗಾಭರಣ ಶಾಲೆ, ಚಿತ್ರತಂಡ, ಎಂ.ಇ.ಎಸ್. ರಂಗಶಾಲೆ, ಇಪ್ಟಾ ಕಲಾತಂಡ, ಸೃಷ್ಠಿ ಕಲಾತಂಡ, ಮುಂತಾದ 23ಕ್ಕೂ ಹೆಚ್ಚಿನ ಸಂಸ್ಥೆಗಳಿಗೆ. **ರಂಗ ತರಬೇತಿ:** ರಾಷ್ಟ್ರೀಯ ನಾಟಕ ಶಾಲೆ ಸೇರಿದಂತೆ 10ಕ್ಕೂ ಹೆಚ್ಚಿನ ರಂಗ ಸಂಸ್ಥೆಗಳಿಗೆ ಹಾಗೂ ಶಿಕ್ಷಣ ಕೇಂದ್ರಗಳಿಗೆ. ವಿಶ್ವವಿದ್ಯಾಲಯಗಳಿಗೆ **ರಂಗ ಕಲಾವಿದರ ಹಾಗೂ ಸಾಹಿತಿಗಳ ಸಾಕ್ಷ್ಯ ಚಿತ್ರಗಳು:** ವಿಶ್ವ ಕನ್ನಡ ಸಮ್ಮೇಳನಕ್ಕಾಗಿ ಶಂಕರೇಗೌಡ ಬೆಟ್ಟದೂರ, ಡಾ.ವಿ.ಜಿ.ಅಂದಾನಿ, ಬಿ.ವಿ.ಕಾರಂತ್ ಅಲ್ಲದೆ, ಆರ್.ನಾಗರತ್ನಮ್ಮ, ದೇವನೂರು ಮಹಾದೇವ, ಪೀಟರ್ ಲೂಯಿಸ್, ವಿಜಯ ಸಿಂಧೂರ ಸೇರಿದಂತೆ ಅನೇಕರ ಬಗ್ಗೆ ಸಾಕ್ಷ್ಯಚಿತ್ರಗಳಿಗೆ ಕಥೆ ಹಾಗೂ ಚಿತ್ರ ಸಾಹಿತ್ಯ ಒದಗಿಸಿದ್ದಾರೆ.

## ವಿವಿಧ ರಂಗ ಸಂಘಟನೆಗಳ ಪದಾಧಿಕಾರಿ/ ಸದಸ್ಯನಾಗಿ ಸೇವೆ

**ಸಂಚಾಲಕ:** ರಂಗಭೂಮಿ ಕ್ರಿಯಾ ಸಮಿತಿ, **ಸಂಚಾಲಕ:** ರಂಗಭೂಮಿ ಹಿತರಕ್ಷಣಾ ವೇದಿಕೆ (ರಾಜ್ಯ ರಂಗತಂಡಗಳ ಒಕ್ಕೂಟ), **ಸಂಚಾಲಕ:** ರಂಗ ಜಾಗೃತಿ ವೇದಿಕೆ **ಅಧ್ಯಕ್ಷರು:** ಬೆಂ.ವಿ.ವಿ.– ಪ್ರಗತಿ ಪ್ರದರ್ಶನ ಕಲಾ ವೇದಿಕೆ

**ಮೇಲ್ವಿಚಾರಕ:** ಅಂತರ ವಿಶ್ವವಿದ್ಯಾಲಯಗಳ ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ಅಂತರ ಕಾಲೇಜು ಕಲಾ ಸ್ಪರ್ಧೆಗಳು. ಬೆಂ.ವಿ.ವಿ. **ಅಧ್ಯಕ್ಷರು:** ಬೆಂಗಳೂರು ವಿಶ್ವವಿದ್ಯಾಲಯ ನಾಟಕ ಪದವಿಧರ ಕಲಾವಿದರ ಸಂಘ. **ಸಂಸ್ಥಾಪಕ ಅಧ್ಯಕ್ಷರು:** ಬಂಜಾರ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಕಾಡೆಮಿ. **ಅಧ್ಯಕ್ಷರು:** ಅಖಿಲ ಕರ್ನಾಟಕ ಜಾನಪದ ಕಲಾವಿದರ ಒಕ್ಕೂಟ (ಬೆಂಗಳೂರು ನಗರ) **ಸಂಸ್ಥಾಪಕ ಪ್ರ.ಕಾರ್ಯದರ್ಶಿ:** ಅಲೆಮಾರಿ ಬುಡಕಟ್ಟು ಮಹಾಸಭಾ (39 ಸಮುದಾಯಗಳ ಸಂಘಟನೆ) **ಸದಸ್ಯರು:** ಸಮುದಾಯ, ಪ್ರೇಕ್ಷಕ ಥಿಯೇಟರ್, ಕಲಾ ಗಂಗೋತ್ರಿ, ಪ್ರಯೋಗರಂಗ/ ದೇಸಿ ರಂಗತಂಡ, ಭಾರತಯಾತ್ರಾ ಕೇಂದ್ರ, ಮುಂತಾದವು.

## ಪ್ರಶಸ್ತಿ ಪುರಸ್ಕಾರಗಳು

1. ರಂಗ ಸಾಧನೆಗಾಗಿ ನಾಲ್ಕು ಚಿನ್ನದ ಪದಕಗಳು. 2. ರಂಗ ಪ್ರಪಂಚ ಪ್ರಶಸ್ತಿ–2009 (ಪ್ರಥಮ ವರ್ಷದ ಪ್ರಶಸ್ತಿ). 3. ಅಂತರ ವಿಶ್ವವಿದ್ಯಾಲಯ ದಕ್ಷಿಣ ವಲಯ ಸಾಂಸ್ಕೃತಿಕ ಪ್ರಶಸ್ತಿ–1993. 4. ಬೆಂ.ವಿ.ವಿ. ಸಾಂಸ್ಕೃತಿಕ ಚಾಂಪಿಯನ್ ಮೂರು ಅವಧಿ ಹಾಗೂ ಮಿಸ್ಟರ್ ಕ್ಯಾಂಪಸ್ 1994ರ ಸಾಂಸ್ಕೃತಿಕ ಪ್ರಶಸ್ತಿ. 5. ಚಿತ್ರದುರ್ಗ ಪತ್ರಿಕಾ ಬಳಗದಿಂದ, ಕಲಾಜ್ಯೋತಿ ಗೋವಿಂದಸ್ವಾಮಿ ಪ್ರಶಸ್ತಿ. 6. ಭಾರತ ಸರ್ಕಾರದ ಸಂಸ್ಕೃತಿ ಇಲಾಖೆ– ಜೂನಿಯರ್ ಫೆಲೋಷಿಪ್, ಮುಂತಾದವು. 7. ಮುಖ್ಯ ಅತಿಥಿಗಳಾಗಿ ಬೇರೆ ಬೇರೆ ರಾಜ್ಯಗಳ 14ಕ್ಕೂ ಹೆಚ್ಚಿನ ಸಾಂಸ್ಕೃತಿಕ ಕೇಂದ್ರಗಳಿಗೆ ಭೇಟಿ ಮತ್ತು ಉಪನ್ಯಾಸ, ಸಂದರ್ಶನಗಳು. 8. ಪ್ರದರ್ಶನ ಕಲೆ, ಸಾಹಿತ್ಯ ಅಭಿನಯಕ್ಕೆ ಸಂಬಂಧಿಸಿದಂತೆ ಮುಖ್ಯ ವಾಹಿನಿಯ ಬಹುತೇಕ ಟೆಲಿವಿಷನ್‌ಗಳಲ್ಲಿ, ಆಕಾಶವಾಣಿಯಲ್ಲಿ ಸಂದರ್ಶನಗಳು ಪ್ರಸಾರವಾಗಿವೆ.

**ಆಧ್ಯತೆಯ ಕ್ಷೇತ್ರ:** 'ಶಿಕ್ಷಣದಲ್ಲಿ ರಂಗಭೂಮಿ' ಜಾರಿಗೆ ತರುವುದು ಮತ್ತು ಪೂರಕ ಕೆಲಸ ಮಾಡುತ್ತಿರುವುದು.

**ಪರಿಚಯ ಲೇಖನ: ಶ್ರೀ ಜಿ.ವಿ.ಪ್ರಸನ್ನಕುಮಾರ್**
ಮಾಜಿ ಸದಸ್ಯರು, ನಾಟಕ ಅಕಾಡೆಮಿ, ಬೆಂಗಳೂರು

****

## ಡಾ. ಎಂ. ಬೈರೇಗೌಡ

**ಜಾನಪದ ಸಂಶೋಧಕ/ನಾಟಕಕಾರ/ ಜಾನಪದ ಹಾಡುಗಾರ**



ಸಂಪರ್ಕ: 9448102158 ಕೃಷ್ಣಪುರದದೊಡ್ಡಿ, ಕೈಲಾಂಚ ಹೋಬಳಿ, ರಾಮನಗರ

ವಾಸಸ್ಥಳ: #119, 3ನೇ ಅಡ್ಡರಸ್ತೆ, 8ನೇ ಮುಖ್ಯರಸ್ತೆ, ಹಂಪಿನಗರ, ಬೆಂಗಳೂರು– 560104

ಬೆಂಗಳೂರು ಗ್ರಾಮಾಂತರ ಜಿಲ್ಲೆ ರಾಮನಗರ ತಾಲ್ಲೂಕು ಕೃಷ್ಣಾಪುರದೊಡ್ಡಿಯ ಎಂ.ಬೈರೇಗೌಡ ಇರುಳಿಗರು ಒಂದು ಜಾನಪದ ಅಧ್ಯಯನ ಮಹಾಪ್ರಬಂಧಕ್ಕೆ ಬೆಂಗಳೂರು ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪದವಿ ಗಳಿಸಿದ್ದಾರೆ. ಜಾನಪದ ಕ್ಷೇತ್ರಕಾರ್ಯದಲ್ಲಿ ನಿರಂತರವಾಗಿ ತೊಡಗಿಸಿಕೊಳ್ಳುತ್ತಾ ಇತಿಹಾಸ-ಶಾಸನ ಸಂಶೋಧನೆಯಲ್ಲಿ ವಿಶೇಷ ಆಸಕ್ತಿ ತಳೆಯುತ್ತ ಜಾನಪದ ಪ್ರದರ್ಶಕ ಕಲೆಗಳ ಪುನರುಜ್ಜೀವನಕ್ಕೆ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಕಾರ್ಯೋನ್ಮುಖರಾಗಿರುವರಲ್ಲದೆ, ಅದಕ್ಕಾಗಿ ಕೆ.ಎಸ್.ಮುದ್ದಪ್ಪ ಸ್ಮಾರಕ ಟ್ರಸ್ಟ್ ಅನ್ನು ಸ್ಥಾಪಿಸಿದ್ದಾರೆ. ಈಗಾಗಲೇ ಟ್ರಸ್ಟ್ ಜಾನಪದ ಸಂಬಂಧೀ ನೂರಾರು ಕಾರ್ಯಕ್ರಮಗಳನ್ನು, ಶಾಲಾ ಕಾಲೇಜುಗಳಲ್ಲಿ ಹಲವಾರು ಉಪನ್ಯಾಸಗಳನ್ನು, ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ನಡೆಸುತ್ತಾ ಬಂದಿದೆ. ಇಲ್ಲಿ ಬೈರೇಗೌಡರ ಮನಸ್ಸು ಅತ್ಯಂತ ಸೃಜನಶೀಲವಾಗಿ ಯೋಚಿಸಿ ಕಾರ್ಯಕ್ರಮಗಳನ್ನು ರೂಪಿಸುತ್ತದೆ. ಬಹು ಉಪಯೋಗಿ ಮತ್ತು ಬಹುಜನ ಅಪೇಕ್ಷಿತ ಕಾರ್ಯಕ್ರಮಗಳು ಆಯೋಜನೆಗೊಳ್ಳುತ್ತಿರುವುದನ್ನು ಕಾಣಬಹುದು. ತಮ್ಮ ಕಾರ್ಯಭಾರವನ್ನು ವಿಸ್ತರಿಸಿಕೊಂಡಿರುವ ಡಾ. ಎಂ. ಬೈರೇಗೌಡರು ಪುಸ್ತಕ ಪ್ರಕಟಣೆಗೂ ಕೈ ಹಾಕಿದ್ದು ಅರವತ್ತಕ್ಕು ಮಿಕ್ಕ ಮೌಲಿಕ ಪುಸ್ತಕಗಳನ್ನು ಹೊರತಂದಿರುತ್ತಾರೆ. ಇವೆಲ್ಲ ಕೇವಲ ಬೈರೇಗೌಡರ ಜನಪದ ಆಸಕ್ತಿಯ ಫಲವಾಗಿ ನಡೆಯುತ್ತಿರುವ ಕೆಲಸಗಳು.

ಬೈರೇಗೌಡರು ಪ್ರಕಟಿಸಿದ ಲೇಖನ-ಕೃತಿಗಳು ಹಲವಾರು. ಧರ್ಮಪುರಿಯಿಂದ ತಿರುನಲ್ವೇಲಿಯವರೆಗೆ (ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬುಡಕಟ್ಟು ಅಧ್ಯಯನ ಮಾಲಿಕೆಗೆ ಬರೆದ ಕ್ಷೇತ್ರ ಕಾರ್ಯಾಧಾರಿತ ಕೃತಿ-1995), ಜಾನಪದ ವೈವಿಧ್ಯ (ಅಕ್ಕಮ್ಮ ಗಿರಿಗೌಡರ ರುದ್ರಪ್ಪ ದತ್ತಿ ಪ್ರಶಸ್ತಿ ಪುರಸ್ಕೃತ ಕೃತಿ – 2000), ಮೇರರು ಜಾನಪದೀಯ ಅಧ್ಯಯನ (ಅಕ್ಕಮ್ಮ ಗಿರಿಗೌಡರ ರುದ್ರಪ್ಪ ದತ್ತಿ ಪ್ರಶಸ್ತಿ ಪುರಸ್ಕೃತ ಕೃತಿ – 2001), ಹೋಗುವಾ... ನಮ್ಮ ದೇಸಕೆ, ಕಾಡು ಬಿಡಲೊಲ್ಲದವರು ಮುಂತಾದ ಸಂಶೋಧನಾ ಕೃತಿಗಳನ್ನು, ಸೋರೆ ಬುರುಡೆ(2000), ಕಿಲಾಡಿ ದಾಸಯ್ಯ(2002),ಬುಡಬೆಳ್ಳಿ ನಡುಪಚ್ಚೆ ಗೊನೆಮುತ್ತು(2003) ಗಡಗದಲೆ ಗಂಗಾಧರಶಾಸ್ತ್ರಿ(2004), ಹಂದಿಪುರಾಣ(2006), ಜಾಲಮಾರ್ಜಲ(2006),

ಪಂಚವರ್ಣದ ಗಿಣಿ(2006), ಎಲೆ ನಕ್ಕು ಅಡಿಕೆ ಮಾತಾಡಿ ಸುಣ್ಣ ಕುಣಿದಾಗ(2006) ಮೊದಲಾದ ಜಾನಪದ ಕತೆಗಳನ್ನಾಧರಿಸಿದ ಮಕ್ಕಳ ನಾಟಕಗಳನ್ನು, ಹಾಗು ನಾಟಕ ಕೃತಿಗಳಾದ ಕರ್ಣಹತ್ಯೆ, ಗಣೇಶನಿಗೆ ಸವಾಲು, ಸ್ವಪ್ನಸಿದ್ದಿ, ಕಿನ್ನುಡಿಯ ಬೆಳಕಲ್ಲಿ, ವೇಷದಹುಲಿ ಮುಂತಾದವು ಈಗಾಗಲೆ ಪ್ರಕಟಿಸಿದ್ದಾರೆ.

ಬುಡಕಟ್ಟು ಸಾಮಾಜಿಕ ಸಮಸ್ಯೆ, ಕ್ರೀಡೆ, ಇತಿಹಾಸ, ಪುರಾತತ್ವ, ಕೃಷಿ ಸಂಬಂಧವಾದ ನೂರಾರು ಸಂಶೋಧನ ಲೇಖನಗಳನ್ನು ಬರೆದು ಪ್ರಕಟಿಸುವ ಮೂಲಕ ಜಾನಪದ ಕ್ಷೇತ್ರದಲ್ಲಿ ಗಮನಾರ್ಹ ಪಾತ್ರವಹಿಸುತ್ತಿದ್ದಾರೆ. ತಮ್ಮ ಟ್ರಸ್ಟ್ ವತಿಯಿಂದ ಪ್ರತಿ ವರ್ಷ ನಡೆಸುವ ಬೇಸಿಗೆ ರಂಗಶಿಬಿರ ಚಿಣ್ಣರಲೋಕದಲ್ಲಿಯೂ ಜಾನಪದ ಸೊಗಡನ್ನು ಮಕ್ಕಳಿಗೆ ಪರಿಚಯಿಸುವ ಕೆಲಸ ಮಾಡುತ್ತಿದ್ದಾರೆ. ರಂಗ ತರಬೇತಿ ಶಿಬಿರ ಹಾಗೂ ಆಕಾಶವಾಣಿ, ದೂರದರ್ಶನ ಮಾಧ್ಯಮಗಳಲ್ಲಿ ಭಾಗವಹಿಸಿ ಜಾನಪದಕ್ಕೆ ಸಂಬಂಧಿಸಿದ ಅನೇಕ ಕಾರ್ಯಕ್ರಮಗಳನ್ನು ನೀಡಿರುವ ಬೈರೇಗೌಡರು ಉತ್ತಮ ಜಾನಪದ ಗಾಯಕರೂ ಆಗಿದ್ದಾರೆ.

ಯಾವುದರ ಶೋಧನೆಗೆ ತೊಡಗಿದರೂ ಅದನ್ನು ತಲಸ್ಪರ್ಶಿಯಾಗಿ ಸಂಗ್ರಹಿಸಿ ಅಧ್ಯಯನ ಮಾಡುವ ಉದ್ದೇಶ ಇವರದು. 11 ಲೇಖನಗಳನ್ನು ಒಳಗೊಂಡಿರುವ ಜಾನಪದ ವೈವಿಧ್ಯ ಈ ಮಾತಿಗೆ ಸಾಕ್ಷಿಯೆಂಬಂತಿದೆ.

ಕಳೆದ ಏಳೆಂಟು ವರ್ಷಗಳಿಂದ ಉತ್ತರ ಕನ್ನಡ, ದಕ್ಷಿಣ ಕನ್ನಡ, ತಮಿಳುನಾಡು, ಮೈಸೂರು, ಬೆಂಗಳೂರು ಜಿಲ್ಲೆಗಳಲ್ಲಿ ಕ್ಷೇತ್ರಕಾರ್ಯ ಕೈಗೊಂಡಿರುವ ಬೈರೇಗೌಡರು ಮೇರ, ಹಾಲಕ್ಕಿ, ಸಿದ್ದಿ, ಕಾಡುಕುರುಬ, ಜೇನುಕುರುಬ ಮುಂತಾದ ಆದಿವಾಸಿ ಸಂಸ್ಕೃತಿಗಳ ಬಗೆಗೆ ಅಧ್ಯಯನ ನಡೆಸಿ ಲೇಖನಗಳನ್ನು ಪ್ರಕಟಿಸಿದ್ದಾರೆ. ಇರುಳಿಗರು ಜಾನಪದ ಅಧ್ಯಯನ ಎಂಬ ಹೆಸರಿನ ಮಹಾಪ್ರಬಂಧವನನ್ನು ಸಿದ್ಧಪಡಿಸಿದ್ದಾರೆ. ಇದರ ಅಧ್ಯಯನದ ವ್ಯಾಪ್ತಿಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ರಾಮನಗರ, ಮಾಗಡಿ, ಕನಕಪುರ ತಾಲ್ಲೂಕುಗಳು ಹಾಗೂ ನಗರ ಜಿಲ್ಲೆಯ ಆನೇಕಲ್, ಬೆಂಗಳೂರು ದಕ್ಷಿಣ ತಾಲ್ಲೂಕುಗಳನ್ನು ಒಳಪಡಿಸಿಕೊಳ್ಳಲಾಗಿದೆ. ಇರುಳಿಗರು ನಾಗರಿಕತೆಯತ್ತ ಮುಖ ತಿರುಗಿಸಿದ್ದರೂ ಮೂಲ ಸಂಸ್ಕೃತಿಯನ್ನು ಉಳಿಸಿಕೊಂಡಿರುವ ರೀತಿಯನ್ನು ಬೈರೇಗೌಡರು ಗುರುತಿಸಿದ್ದಾರೆ. ಭಾಷೆ ಮತ್ತು ಜನಪದ ಸಾಹಿತ್ಯ ಭಾಗದಲ್ಲಿ ಈ ಬುಡಕಟ್ಟಿನ ಜನಪದ ಸಾಹಿತ್ಯ ಪ್ರಕಾರಗಳೆಲ್ಲ

ಲಭ್ಯವಿದ್ದರೂ ಅವೆಲ್ಲನ್ನು ಪೂರ್ಣ ಪ್ರಮಾಣದಲ್ಲಿ ಒದಗಿಸಲಾಗದಿದ್ದರೂ ಸ್ಥೂಲ ನೋಟವಿದೆ. ನಂತರದ ಅಧ್ಯಾಯಗಳಲ್ಲಿ ಇರುಳಿಗರ ಸಂಪ್ರದಾಯ ನಂಬಿಕೆ ಹಾಗೂ ಆಚರಣೆಗಳು ವೈದ್ಯವಿಧಾನಗಳು, ದೈವಿಕತೆ, ಕಣಿ ಹೇಳುವ ವಿಧಾನ ಇತ್ಯಾದಿಗಳನ್ನೆಲ್ಲಾ ದಾಖಲಿಸಲಾಗಿದೆ. ಮುಖ್ಯವಾಗಿ ಸೋಲಿಗ, ಕಾಡುಕುರುಬ, ಕಾಡುಗೊಲ್ಲ ಮತ್ತು ಹಾಲಕ್ಕಿಗಳೊಂದಿಗೆ ಇರುಳಿಗರ ಬದುಕನ್ನು ಹೋಲಿಸಿ ನೋಡುವ ತೌಲನಿಕ ಅಧ್ಯಯನಕ್ಕೂ ಇಲ್ಲಿ ಪ್ರಾತಿನಿಧ್ಯ ನೀಡಲಾಗಿದೆ. ಇರುಳಿಗರು ಕಣಿಗೆ ಹೆಸರಾದವರು. ಕಣಿ ಆ ಜನಾಂಗದ ಇಡೀ ಸಾಂಸ್ಕೃತಿಕ ಬದುಕನ್ನು ಪರಿಚಯಿಸುವ ಒಂದು ಪ್ರದರ್ಶಕ ಕಲೆಯೂ ಹೌದು. ಆಚರಣೆಯೂ ಹೌದು. ಭವಿಷ್ಯ ನುಡಿಯುವುದೇ ಕಣಿಯ ಉದ್ದೇಶ. ಸಾಮಾನ್ಯವಾಗಿ ಕಣಿ ಹೇಳುವ ಕಲೆ ಕೊರವಂಜಿಗಳಲ್ಲಿ ಇರುವಂಥದ್ದು. ಅಲ್ಲಿ ಹೆಂಗಸರು ಕಣಿ ಹೇಳಿದರೆ ಇರುಳಿಗರಲ್ಲಿ ಗಂಡಸರು ಕಣಿ ಹೇಳುತ್ತಾರೆ. ವಿಶಿಷ್ಟ ರೀತಿಯಲ್ಲಿ ಹೇಳುವ ಅವರ ಕಣಿಯಲ್ಲಿ ಸೃಷ್ಟಿಪುರಾಣದ ವಿವರಗಳು ಬರುತ್ತವೆ. ಪ್ರಳಯದ ಬಗೆಗಿನ ಆಲೋಚನೆಗಳು ಅದರಿಂದ ಪಾರಾಗುವ ಮತ್ತು ದೇವರನ್ನು ಮೀರಿಸುವ ಉಪಾಯಗಳು ಹಾಡಿನ ಆಕರ್ಷಕ ಭಾಗಗಳಾಗಿವೆ. ಹರನಿಗಿಂತಲೂ ನರನೇ ನಿಸ್ಸೀಮ ಎಂಬುದನ್ನು ಸಾರುವುದರ ಜೊತೆಗೆ ಹುಟ್ಟಿನಿಂದ ಜಾತಿಯಲ್ಲ, ಕಸುಬಿನಿಂದ ಜಾತಿ ಎಂಬುದನ್ನು ಇರುಳಿಗರ ಸೃಷ್ಟಿಪುರಾಣ ಸಾಬೀತು ಪಡಿಸಿರುವುದು ಮಹತ್ವದ ಸಂಗತಿ.

ಹೀಗೆ ಅಪೂರ್ವ ಸಾಮಗ್ರಿ ಸಂಗ್ರಹ, ವಿಶ್ಲೇಷಣೆ, ವರ್ಗೀಕರಣ ದೃಷ್ಟಿಯ ವಿವರಗಳ ದಟ್ಟತೆಯಲ್ಲಿ ಬೈರೇಗೌಡರು ಇರುಳಿಗ ಬುಡಕಟ್ಟಿನ ಚಿತ್ರ ನೀಡುವುದರ ಮೂಲಕ ಕಿರು ಸಮಾಜಗಳ ಇರುವಿಕೆಯನ್ನು ಸಮರ್ಥಿಸುವ ಅಧ್ಯಯನದಲ್ಲಿ ಗಂಭೀರವಾಗಿ ತೊಡಗುತ್ತಾರೆ. ನಾಗರಿಕ ಸಮಾಜಕ್ಕೆ ತೀರಾ ಅಪರಿಚಿತವಾದ ಬುಡಕಟ್ಟಿನ ಬದುಕನ್ನು ಸಾಂಸ್ಕೃತಿಕ ಹಿನ್ನೆಲೆಗಳನ್ನು ಸಂಯಮದಿಂದ ದಾಖಲೀಕರಣಗೊಳಿಸುವ ಪ್ರಕ್ರಿಯೆಯಲ್ಲಿ ಕನ್ನಡ ಜಾನಪದ ವಿದ್ವಾಂಸರು ಆಕರ್ಷಿತರಾಗಬೇಕೆಂಬ ಎಚ್ಚರವನ್ನು ಮೂಡಿಸುತ್ತಾರೆ. ಕ್ಷೇತ್ರಾಧ್ಯಯನದ ಫಲವಾಗಿ ಮೂಡಿ ಬಂದಿರುವ ಈ ನಿಬಂಧದಲ್ಲಿ ಸುಲಲಿತವಾದ ಗದ್ಯ ಶೈಲಿಯಿದ್ದು ಸಮಚಿತ್ತದ ಮನಸ್ಸು ಹರಿದಾಡುತ್ತಲೇ ಸಮಾಜ ಶಾಸ್ತ್ರೀಯ ಅಧ್ಯಯನಕ್ಕೆ ದಾರಿ ಮಾಡಿಕೊಟ್ಟಿದೆ.

'ಹಂದೀಪುರಾಣ' ನಾಟಕವೂ ಸಹ ಇರುಳಿಗರ ಮರುಸೃಷ್ಟಿ ಪುರಾಣದ ಕಥೆಯನ್ನು ಆಧಾರವಾಗಿಟ್ಟುಕೊಂಡು ಸಿದ್ಧವಾದದ್ದು. ವರಾಹನ ಅವತಾರದಿಂದ ಮುಳುಗುತ್ತಿದ್ದ ಭೂಮಿಯನ್ನು ಕೋರೆಗಳ ಮೇಲೆ ಎತ್ತಿ ಹಿಡಿದು ಜಗತ್ತನ್ನು ಪಾರು ಮಾಡಿದ ವರಾಹ ಪುರಾಣ ನಮಗೆ ಗೊತ್ತಿದೆ. ವರಾಹಪುರಾಣಕ್ಕೆ ಮೂಲ ನೀಡಿದವರು ಇರುಳಿಗರು. ಅವರ ಮರುಸೃಷ್ಟಿ ಪುರಾಣದ ನಾಯಕತ್ವ ವಹಿಸುವುದು ಹಂದಿ. ಈ ಕಾರಣಕ್ಕಾಗಿಯೇ ಈ ನಾಟಕ ಪುರಾಣಗಳ ಪುರಾಣವಾಗಿದೆ. ಪುರಾಣಗಳ ಕಥೆಗಳಿಗೆ ಆಧುನಿಕ ವಿಚಾರಗಳ ತಳಕು ಹಾಕುತ್ತಾ ಜಾನಪದೀಯ ಅಂಶಗಳನ್ನು ಬೈರೇಗೌಡರ ಎಲೆ ನಕ್ಕು ಅಡಿಕೆ ಮಾತಾಡಿ ಸುಣ್ಣ ಕುಣಿದಾಗ... ನಾಟಕ ಸಹಜ ಸುಂದರವಾಗಿ ಹಿಡಿದಿಟ್ಟಿದೆ. ತಮಗಿಷ್ಟವಾದ ಸಂಗತಿಗಳನ್ನು ಆಯ್ಕೆ ಮಾಡಿಕೊಂಡು ನಾಟಕವಾಗಿಸುವ ಕಲೆಯಲ್ಲಿ ಗೌಡರು ಪಳಗಿದವರು. ಅವರ ನಾಟಕಗಳು ಈ ಮಾತಿಗೆ ಸಾಕ್ಷಿಯಾಗಿವೆ. ಹೀಗೆ ಕೆರೆಯ ನೀರನು ಕೆರೆಗೆ ಚೆಲ್ಲುವ ಕಾಯಕ ಪ್ರತಿಭೆ ಗೌಡರದು. ಪಂಚವರ್ಣದ ಗಿಣಿ ಕೂಡ ಇದೇ ಹೆಸರಿನ ಜನಪದ ಕಥೆಯೊಂದನ್ನು ಆಧರಿಸಿ ಬರೆದ ನಾಟಕ. ಬುಡ ಬೆಳ್ಳಿ ನಡುಪಚ್ಚೆ ಗೊನೆಮುತ್ತು ನಾಟಕವೂ ಜಾನಪದ ಕಥೆಯನ್ನಾಧರಿಸಿ ರಚನೆಯಾಗಿದೆ. ಪಂಚವರ್ಣದ ಗಿಣಿ ಕೂಡಾ ಇದೇ ಹೆಸರಿನ ಜಾನಪದ ಕಥೆಯೊಂದನ್ನು ಆಧರಿಸಿ ಬರೆದ ನಾಟಕ. ಶಿವರಾಮಯ್ಯನವರು ಹೇಳುವಂತೆ ಜಾಗತೀಕರಣ ಇಂದಿನ ದಿನಗಳಲ್ಲಿ ಮನುಕುಲ ತನ್ನ ಹಿಂದಿನ ಬಣ್ಣ ರುಚಿ ವಾಸನೆಯನ್ನು ಗಗನಗಾಮಿ ಕಲ್ಪನೆಗಳನ್ನು ಕಳೆದುಕೊಂಡು ನೀರಸವಾಗಿ ವಿಸ್ಮೃತಿಗೆ ಬೀಳುತ್ತಿದೆ. ಇಂತಹ ಹೊತ್ತಿನಲ್ಲಿ ನಮ್ಮ ಸಮೂಹ ಸಂಸ್ಕೃತಿಗಳು ಮಾತ್ರ ಈ ಜಾಗತಿಕ ಅವಾಂತರಗಳ ಎದುರು ಮುಖಾಮುಖಿಯಾಗಬಲ್ಲವು. ಈ ಜಾಗತೀಕರಣ ಎಂಬ ಲಂಕಿಣಿಯ ಬಾಯಿಂದ ನಾವು ಬಚಾವಾಗಬೇಕೆಂದರೆ ಮತ್ತೆ ನಾವು ನಮ್ಮ ಗ್ರಾಮೀಣ ಕಲೆ ಸಾಹಿತ್ಯ ಸಂಸ್ಕೃತಿಗಳತ್ತ ಮರು ಪಯಣ ಬೆಳಸಬೇಕಾಗಿದೆ. ಆ ಮರುಪಯಣದ ಒಂದು ಹಕ್ಕಿನೋಟ ಬೈರೇಗೌಡರ ಪಂಚವರ್ಣದ ಗಿಣಿ ಎಂಬ ನಾಟಕದಲ್ಲಿ ಕಂಡು ಬರುತ್ತದೆ. ಒಗ್ಗಟ್ಟಿನಲ್ಲಿ ಬಲವಿದೆ ಎಂಬ ಗಾದೆ ಮಾತನ್ನು ಜಾಲ ಮಾರ್ಜಾಲ ಎಂಬ ಮಕ್ಕಳ ನಾಟಕ ಪ್ರತಿಬಿಂಬಿಸುತ್ತವೆ. ನೀತಿ ಪಾಠಗಳ ಮೂಲಕ ರಂಗಭೂಮಿಯನ್ನು ಮಕ್ಕಳ ಪ್ರಜ್ಞೆಯ ಭಾಗವಾಗಿಸುವ ಪ್ರಯತ್ನಗಳು ಅಷ್ಟೇನೂ ಯಶಸ್ಸು ಕಾಣದ ಈ ಹೊತ್ತಲ್ಲಿ ಅವರ ನಿತ್ಯ ಸಮಸ್ಯೆಗಳನ್ನು ಕುರಿತೇ ಕತೆ ಕಟ್ಟುವ ಹೊಸ ಪ್ರಯತ್ನಗಳು

ಈಗ ಅಗತ್ಯವಾಗಿದೆ. ಅಂಥ ಚರ್ಚೆಯನ್ನು ಬೈರೇಗೌಡರ ಜಾಲ ಮಾರ್ಜಾಲ ನಾಟಕದಲ್ಲಿ ಕಾಣುತ್ತೇವೆ.

ಬೈರೇಗೌಡರು ಸಾಂಸ್ಕೃತಿಕ ಅಧ್ಯಯನದಲ್ಲಿ ಪಳಗಿದವರು. ಸಂಬಂಧಿಸಿದ ಮಾಹಿತಿಯ ಅಖಂಡತೆಯನ್ನು ಮುಂದಿಡುತ್ತಲೇ ಅದರಲ್ಲಿನ ಪ್ರಮುಖ ಆಶಯಗಳಿಗೆ ಶಿಷ್ಟ ಸ್ವರೂಪ ಕೊಡುತ್ತಾ ಸೃಜನಶೀಲತೆಯ ಮಾರ್ಗವನ್ನು ಹಿಡಿಯುತ್ತಾ ಚಾರಣ ಸಾಹಿತ್ಯ ಶಿಷ್ಟ ಸಾಹಿತ್ಯ ಈ ಎರಡರಲ್ಲೂ ಖ್ಯಾತನಾಮರಾಗುತ್ತಿರುವ ಗಣ್ಯರಲ್ಲಿ ಬೈರೇಗೌಡ ಒಬ್ಬರಾಗಿದ್ದಾರೆ. ಕೆ.ಎಸ್.ಮುದ್ದಪ್ಪ ಸ್ಮಾರಕ ಟ್ರಸ್ಟ್ ವತಿಯಿಂದ ಯುವ ಬರಹಗಾರರಿಗೆ ಪ್ರೋತ್ಸಾಹ ಕೊಡುತ್ತಿರುವ ತನ್ಮೂಲಕ 30ಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸುವ ಸಾಹಸಕ್ಕೂ ಕೈ ಹಾಕಿರುವ ಗೌಡರ ಟ್ರಸ್ಟ್‌ನ ಧ್ಯೇಯ ವಾಕ್ಯವೇ ಜಗವೇ ಜನಪದ. ಪುರಾತತ್ವ ಇತಿಹಾಸ ಜಾನಪದ ಇವುಗಳ ನಡುವೆ ಅಂತರ್‌ಶಿಸ್ತೀಯ ಅಧ್ಯಯನದ ಬಗ್ಗೆ ಬೈರೇಗೌಡರು ಕಾಳಜಿ ಹೊಂದಿದ್ದಾರೆ. ರಾಮನಗರ ಸುತ್ತಮುತ್ತಲಿನ ನೂರಾರು ಬೆಟ್ಟಗುಡ್ಡಗಳನ್ನು ಹತ್ತಿ ಇಳಿದು, ಹಲವಾರು ಪುರಾತತ್ವ ನೆಲೆಗಳನ್ನು, ಸಾವಿರಾರು ಶಿಲಾಸಮಾದಿಗಳನ್ನು, ಹಲವು ಶಾಸನಗಳನ್ನು ಪತ್ತೆ ಹಚ್ಚುವ ಮೂಲಕ ಬಹುಮುಖ ವಿದ್ವಾಂಸರಾಗಿದ್ದಾರೆ. ಉಡುಪಿಯ ಇತಿಹಾಸ ಸಮ್ಮೇಳನದಲ್ಲಿ ಮಂಡಿಸಿದ ಪ್ರಬಂಧದಲ್ಲಿ ಜಾನಪದವೆಂದರೆ ಮೂಗುಮುರಿಯುತ್ತಿದ್ದ ವಿದ್ವಾಂಸರ ಕಣ್ತೆರೆಯುವಂತೆ, ಪುರಾತತ್ವ ಇತಿಹಾಸ, ಮೌಖಿಕ ಇತಿಹಾಸ, ಜಾನಪದ, ಐತಿಹ್ಯ ಇವುಗಳ ನಡುವಿನ ಅಂತರ್‌ಶಿಸ್ತೀಯ ಅಧ್ಯಯನಕ್ಕೆ ಒತ್ತಾಯ ಮಾಡಿದ್ದಾರೆ. ಸಂಗ್ರಹದ ಕೆಲಸವೇ ಮುಗಿದು ಹೋಗಿದೆ. ಉಳಿದಿದ್ದರೂ ಅದರ ಅಗತ್ಯ ಇಲ್ಲ ಎಂಬ ಮಾತುಗಳು ಕೇಳಿ ಬರುತ್ತಿರುವ ಈ ದಿನಗಳಲ್ಲಿ ಸಂಗ್ರಹಿಸಬೇಕಾದದ್ದು ಅಧ್ಯಯನ ಮಾಡಬಹುದಾದ ದೇಸಿ ಸಂಪತ್ತು ಅಗಾಧವಾಗಿದೆ ಎಂಬುದನ್ನು ಬೈರೇಗೌಡರು ಇಂತಹ ಕೃತಿಗಳ ಮೂಲಕ ಎತ್ತಿ ತೋರಿಸುತ್ತಿದ್ದಾರೆ. ಜೊತೆಗೆ ಜಾಗತೀಕರಣ ಖಾಸಗೀಕರಣದ ಬಗ್ಗೆ ಸದಾ ಮಾತನಾಡುತ್ತಿರುವವರಿಗೆ ದೇಸಿ ಸಂಪತ್ತನ್ನು ಒದಗಿಸುವ ಮೂಲಕ ಸರಿಯಾದ ಉತ್ತರವಾಗುತ್ತಿದ್ದಾರೆ.

ಪ್ರಸ್ತುತ ತಮ್ಮ ಖಜಾನೆಯ ಸರ್ಕಾರಿ ನೌಕರಿಗೆ ಗುಡ್‌ಬೈ ಹೇಳಿ ಕನ್ನಡ ಉಪನ್ಯಾಸಕರಾಗಿ ಅಧ್ಯಾಪನಾ ಕ್ಷೇತ್ರಕ್ಕೆ ಕಾಲಿರಿಸಿರುವ ಬೈರೇಗೌಡರು ಬಹುಮುಖ ಕಾರ್ಯತತ್ಪರತೆಯ, ಪ್ರತಿಭೆಯ ಸಂಗಮವಾಗಿ, ಜಾನಪದ ಜಂಗಮರಾಗಿ ಬೆಳೆಯುತ್ತಿದ್ದಾರೆ. ಇತ್ತೀಚೆಗೆ ರಾಮನಗರ ಜಿಲ್ಲೆಯ ಕೈಲಾಂಚ ಹೋಬಳಿಯ

ಕೆರೆಮೇಗಳ ದೊಡ್ಡಿ ಸಮೀಪ; "ಮುದ್ದುಶ್ರೀ ದಿಬ್ಬ" ಎಂಬ ರಂಗಭೂಮಿಗೆ ಸಂಬಂದಿಸಿದ ಸಾಂಸ್ಕೃತಿಕ ಕೇಂದ್ರ ಸ್ಥಾಪಿಸಿದ್ದಾರೆ.

**ಡಾ. ಎಲ್.ಸಿ.ರಾಜು**

**ಮೊ: 9449569478/9242604427**



ಡಾ.ಎಲ್.ಸಿ.ರಾಜು ಅವರು ದಿನಾಂಕ: 24–04–1969ರಂದು ಜನಿಸಿದರು. ತಾಯಿ ಕಮಲಮ್ಮ ಮತ್ತು ತಂದೆ ಲಕ್ಕಪ್ಪ. ಇವರ ಪ್ರಾಥಮಿಕ ಮತ್ತು ಮಾಧ್ಯಮಿಕ ತರಗತಿಗಳ ವ್ಯಾಸಂಗವು ರಾಮನಗರದ ಛತ್ರದ ಬೀದಿಯಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಯಲ್ಲಿಯೂ, ಪ್ರೌಢ ಮತ್ತು ಪದವಿಪೂರ್ವ ಶಿಕ್ಷಣವು ರಾಮನಗರದ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿಯೂ ಮತ್ತು ಪದವಿ ವ್ಯಾಸಂಗವು ರಾಮನಗರದ ಪುರಸಭಾ ಪ್ರಥಮ ದರ್ಜೆ ಕಾಲೇಜಿನಲ್ಲಿಯೂ ನಡೆಯಿತು. ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದ ಮೂಲಕ ಕನ್ನಡ ಎಂ.ಎ. ಪದವಿಯನ್ನು ಚಿನ್ನದ ಪದಕದೊಂದಿಗೆ ಪಡೆದಿರುವ ಇವರು **'ಡಾ. ಜಿ.ಪಿ. ರಾಜರತ್ನಂ ಅವರ ಸಾಹಿತ್ಯದಲ್ಲಿ ವೈಚಾರಿಕ ಪ್ರಜ್ಞೆಯ ನೆಲೆಗಳು'** ಎಂಬ ವಿಷಯವಾಗಿ ನಾಡಿನ ಸುಪ್ರಸಿದ್ಧ ಕವಿ ಡಾ. ಸಿದ್ಧಲಿಂಗಯ್ಯ ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ ಬೆಂಗಳೂರು ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪದವಿ ಪಡೆದಿದ್ದಾರೆ.

ವೃತ್ತಿಯಲ್ಲಿ ಪ್ರಾಧ್ಯಾಪಕರಾಗಿರುವ ಇವರು ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ, ರಾಮನಗರ, ಪಾವಗಡ ಮತ್ತು ನಾಗಮಂಗಲ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸೇವೆ ಸಲ್ಲಿಸಿ, ಪ್ರಸ್ತುತ ಬೆಂಗಳೂರಿನ ವಿಜಯನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಪ್ರವೃತ್ತಿಯಲ್ಲಿ ಬರಹಗಾರರಾಗಿರುವ ಇವರು ಕವಿತೆ ಮತ್ತು ನಾಟಕಗಳ

ರಚನೆಯಲ್ಲಿ ಗಮನಾರ್ಹ ಕೆಲಸ ಮಾಡಿದ್ದಾರೆ. ಅತ್ಯುತ್ತಮ ನಟರೂ ಆಗಿದ್ದ ಇವರು ಹಲವಾರು ನಾಟಕಗಳಲ್ಲಿ ನಾಯಕ ಪಾತ್ರಗಳಲ್ಲಿ ಅಭಿನಯಿಸಿ, ಪ್ರೇಕ್ಷಕರ ಮೆಚ್ಚುಗೆಗೂ ಪಾತ್ರರಾಗಿದ್ದರು. ಅಧ್ಯಾಪಕ ವೃತ್ತಿಗೆ ಬಂದ ನಂತರದಲ್ಲಿ ನಟನೆಯಿಂದ ದೂರ ಉಳಿದು ಅಧ್ಯಾಪನ ಮತ್ತು ಸಾಹಿತ್ಯ ರಚನಾ ಕಾರ್ಯದಲ್ಲಿ ಕ್ರಿಯಾಶೀಲರಾಗಿ ತೊಡಗಿಸಿಕೊಂಡಿದ್ದಾರೆ.

ಡಾ.ಸುಭಾಷ್ ಭರಣಿ ಯುವ ಬಳಗವು ಇವರಿಗೆ 'ಸಾಹಿತ್ಯ ರತ್ನ' ಪ್ರಶಸ್ತಿ ನೀಡಿ ಸನ್ಮಾನಿಸಿದೆ. ರಾಮನಗರದ ಜನಮುಖಿ ಟ್ರಸ್ಟ್ ಇವರಿಗೆ 'ಜನಮುಖಿ ಪ್ರಶಸ್ತಿ' ನೀಡಿ ಗೌರವಿಸಿದೆ. ರಾಮನಗರ ಜಿಲ್ಲಾಡಳಿತ, ರಾಮನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ರಾಮನಗರ–ಚನ್ನಪಟ್ಟಣ ನಗರಾಭಿವೃದ್ಧಿ ಪ್ರಾಧಿಕಾರ, ಸಂಸ್ಕೃತಿ ಸೌರಭ ಟ್ರಸ್ಟ್, ಬುದ್ಧ, ಬಸವ, ಗಾಂಧಿ ಸಾಂಸ್ಕೃತಿಕ ಟ್ರಸ್ಟ್ ಮೊದಲಾದ ಸಂಘ–ಸಂಸ್ಥೆಗಳು ಇವರ ಸಾಹಿತ್ಯ ಸೇವೆಯನ್ನು ಪರಿಗಣಿಸಿ ಅಭಿನಂದಿಸಿ ಗೌರವಿಸಿವೆ.

## ನಾಟಕ ಸಾಹಿತ್ಯ ರಚನೆ:

1. ಕಥೆಗಾರ, ಅಜ್ಜ ನೆಟ್ಟ ಆಲದ ಮರ (ಆಕಾಶವಾಣಿ ಪ್ರಸಾರಿತ ನಾಟಕಗಳು)
2. ಕೊರಳು ಕೊಯ್ದವರು, ಪ್ಯಾಟೆ ಪುರಾಣ, ನ್ಯಾಯಕ್ಕೇ ನೇಣು, ಉದುರ್‍ಯಾವೆ ಕನಸು ಉಡಿ ತುಂಬ, ಬರಡಾದ ಬದುಕು (ನಾಟಕಗಳು)
3. ಚುಕ್ಕಿ ಚಂದ್ರಮರ ನಡುವೆ, ಅನ್ನ ಮತ್ತು ಅರಿವು, ಭ್ರಮೆಯ ಬೆನ್ನೇರಿ (ಅಚ್ಚಿಗೆ ಸಿದ್ಧವಾಗಿರುವ ನಾಟಕಗಳು)

## ಅಭಿನಯಿಸಿರುವ ನಾಟಕಗಳು:


1. ಬರಡಾದ ಬದುಕು (ಎರಡು ಪ್ರದರ್ಶನ), ರಚನೆ: ಡಾ.ಎಲ್.ಸಿ.ರಾಜು, ನಿರ್ದೇಶನ: ಡಾ.ಎಚ್.ವಿ.ಮೂರ್ತಿ,
2. ಕೊರಳು ಕೊಯ್ದವರು (ಎರಡು ಪ್ರದರ್ಶನ) ರಚನೆ: ಡಾ.ಎಲ್.ಸಿ.ರಾಜು, ನಿರ್ದೇಶನ: ಗೋಪಿನಂದನ
3. ನ್ಯಾಯಕ್ಕೇ ನೇಣು (ಎರಡು ಪ್ರದರ್ಶನ) ರಚನೆ ಮತ್ತು ನಿರ್ದೇಶನ: ಡಾ.ಎಲ್.ಸಿ.ರಾಜು

4. ಚುಕ್ಕಿ ಚಂದ್ರಮರ ನಡುವೆ ರಚನೆ: ಡಾ.ಎಲ್.ಸಿ.ರಾಜು, ನಿರ್ದೇಶನ: ಗೋಪಿನಂದನ
5. ಕಥೆಗಾರ (ಬಾನುಲಿ ನಾಟಕದಲ್ಲಿ ಧ್ವನಿ ನೀಡಿಕೆ) ರಚನೆ: ಡಾ.ಎಲ್.ಸಿ.ರಾಜು
6. ಅಜ್ಜ ನೆಟ್ಟ ಆಲದ ಮರ (ಬಾನುಲಿ ನಾಟಕದಲ್ಲಿ ಧ್ವನಿ ನೀಡಿಕೆ) ರಚನೆ: ಡಾ.ಎಲ್.ಸಿ.ರಾಜು
7. ಸಂಸಾರ ಸ್ವರ (ಮೂರು ಪ್ರದರ್ಶನ) ರಚನೆ: ಎಚ್.ವಿ.ಹನುಮಂತು, ನಿರ್ದೇಶನ: ಡಾ.ಎಚ್.ವಿ.ಮೂರ್ತಿ
8. ಮರಳಿ ಬಂದ ಭಾಗ್ಯ ರಚನೆ: ಎಚ್.ವಿ.ಹನುಮಂತು, ನಿರ್ದೇಶನ: ಡಾ.ಎಚ್.ವಿ.ಮೂರ್ತಿ
9. ಕುಡಿತದ ಸಹವಾಸ ರಚನೆ: ಎಚ್.ವಿ. ಹನುಮಂತು, ನಿರ್ದೇಶನ: ಡಾ.ಎಚ್.ವಿ.ಮೂರ್ತಿ
10. ಸೋದರ ವಾತ್ಸಲ್ಯ (ಎರಡು ಪ್ರದರ್ಶನ) ರಚನೆ: ಗೋಪಿನಂದನ, ನಿರ್ದೇಶನ: ಡಾ.ಎಚ್.ವಿ.ಮೂರ್ತಿ
11. ಲಚ್ಚಿ ರಚನೆ: ಬೇಲೂರು ಕೃಷ್ಣಮೂರ್ತಿ, ನಿರ್ದೇಶನ: ಡಾ.ಎಚ್.ವಿ.ಮೂರ್ತಿ.

****

## ಡಾ.ಎಚ್.ವಿ.ಮೂರ್ತಿ

**ಮೊ: 7829978273**



ಡಾ. ಎಚ್.ವಿ.ಮೂರ್ತಿಯವರ ಹುಟ್ಟೂರು ರಾಮನಗರ. ಇವರು ಎಂಬತ್ತರ ದಶಕದಿಂದಲೂ ತಮ್ಮೊಳಗಿನ ಸಾಹಿತ್ಯಕ ಮತ್ತು ಸಾಂಸ್ಕೃತಿಕ ಪ್ರತಿಭೆಗಳನ್ನು

ಪ್ರಕಟಿಸುತ್ತಲೇ ಬಂದಿದ್ದಾರೆ. ಚಿತ್ರ ರಚನೆ, ನಟನೆ, ಗಾಯನ ಮತ್ತು ರಂಗ ನಿರ್ದೇಶನಗಳಲ್ಲಿ ವಿಶಿಷ್ಟ ಪ್ರತಿಭೆ ಹೊಂದಿರುವ ಮೂರ್ತಿಯವರು ತಬಲ ವಾದನದಲ್ಲಿಯೂ ವಿಶೇಷ ಪರಿಣತಿ ಸಾಧಿಸಿದ್ದಾರೆ. ಇಷ್ಟೆಲ್ಲಾ ಅಭಿರುಚಿಗಳ ಜೊತೆಗೆ ತಮ್ಮ ಶೈಕ್ಷಣಿಕ ಹಾದಿಗೆ ಯಾವುದೇ ತೊಡಕು ಬಾರದಂತೆ ಗಂಭೀರ ಅಧ್ಯಯನ ನಡೆಸಿ, ಕೃಷಿ ವಿಷಯದಲ್ಲಿ ಪದವಿಯನ್ನೂ ಪಡೆದಿದ್ದಾರೆ. ಉದ್ಯೋಗ ಕ್ಷೇತ್ರದಲ್ಲಿಯೂ ವಿಪುಲ ಅವಕಾಶಗಳನ್ನು ತಮ್ಮದಾಗಿಸಿಕೊಂಡಿದ್ದ ಇವರು ರಾಜ್ಯ ಸರ್ಕಾರದ ಭೂಮಾಪನ ಇಲಾಖೆ, ಆರೋಗ್ಯ ಇಲಾಖೆಗಳಲ್ಲಿ ಕಾರ್ಯ ನಿರ್ವಹಿಸಿ ಇದೀಗ ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ವಾಣಿಜ್ಯ ತೆರಿಗೆ ಪರಿವೀಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಇವರ ಸಹೋದರರಾದ ಎಚ್.ವಿ.ಹನುಮಂತುರವರು ಸ್ವತಃ ನಾಟಕಕಾರರೂ ಗಾಯಕರೂ ನಟರೂ ರಂಗ ನಿರ್ದೇಶಕರೂ ಆಗಿ ಖ್ಯಾತರಾದವರು. ಇವರೊಡಗೂಡಿ ಮೂರ್ತಿಯವರು ರಾಮನಗರದಲ್ಲಿ ಸಾಂಸ್ಕೃತಿಕವಾಗಿ ಮೂಡಿಸಿದ ಛಾಪು ಅಪಾರವಾದುದು.

**ಪ್ರಕಟಿತ ಕವನ ಸಂಕಲನ:**

ಜೋಳಿಗೆ.

**ಅಭಿನಯಿಸಿದ ನಾಟಕಗಳು:**

ಕುಡಿತದ ಸಹವಾಸ (ರಚನೆ: ಎಚ್.ವಿ. ಹನುಮಂತು), ರಂಗಾದ ಮುನಿಯ (ರಚನೆ: ಎಚ್.ವಿ.ಹನುಮಂತು), ಮರಳಿ ಬಂದ ಭಾಗ್ಯ (ರಚನೆ: ಎಚ್.ವಿ.ಹನುಮಂತು),ಸಂಸಾರ ಸ್ವರ (ರಚನೆ: ಎಚ್.ವಿ.ಹನುಮಂತು), ಹಳ್ಳಿಯ ಭೂತ (ರಚನೆ: ಎಚ್.ವಿ.ಹನುಮಂತು), ಬರಡಾದ ಬದುಕು (ರಚನೆ: ಡಾ. ಎಲ್.ಸಿ.ರಾಜು), ಸೋದರ ವಾತ್ಸಲ್ಯ (ರಚನೆ: ಗೋಪಿನಂದನ)

**ನಿರ್ದೇಶಿಸಿದ ನಾಟಕಗಳು:**

ಮರಳಿ ಬಂದ ಭಾಗ್ಯ (ರಚನೆ: ಎಚ್.ವಿ.ಹನುಮಂತು), ಸಂಸಾರ ಸ್ವರ (ರಚನೆ: ಎಚ್.ವಿ.ಹನುಮಂತು), ಬರಡಾದ ಬದುಕು (ರಚನೆ: ಡಾ.ಎಲ್.ಸಿ.ರಾಜು), ಸೋದರ ವಾತ್ಸಲ್ಯ (ರಚನೆ: ಗೋಪಿನಂದನ), ಕುಡಿತದ ಸಹವಾಸ (ರಚನೆ: ಎಚ್.ವಿ. ಹನುಮಂತು), ರಂಗಾದ ಮುನಿಯ (ರಚನೆ: ಎಚ್.ವಿ.ಹನುಮಂತು).

****

## ಶ್ರೀ ಗೋಪಿನಂದನ

**ಮೋ:9449524725**



ಗೋಪಿನಂದನ ಅವರು ಜನಿಸಿದ್ದು ರಾಮನಗರದಲ್ಲಿ. ಎಂಬತ್ತರ ದಶಕದಲ್ಲಿಯೇ ಇವರು ತಮ್ಮ ಸಹಸ್ಪಂದಿಯಾಗಿದ್ದ ಎಚ್.ವಿ.ಹನುಮಂತು ಅವರೊಡಗೂಡಿ ಅದೆಷ್ಟೋ ನಾಟಕಗಳಲ್ಲಿ ಅಭಿನಯಿಸಿಬಿಟ್ಟಿದ್ದರು. ಇವರ ಕಲಾಮಿತ್ರರಾದ ಡಾ.ಎಚ್.ವಿ.ಮೂರ್ತಿ ಮತ್ತು ಎಸ್.ಗುರುಸಿದ್ಧ ಅವರ ಜೊತೆ ಸೇರಿಕೊಂಡು ಇವರು ಅಭಿನಯಿಸಿದ ನಾಟಕಗಳು ಅದಾಗಲೇ ರಸಿಕರ ಮನ ಸೂರೆಗೊಂಡಿದ್ದವು. ಅವತ್ತಿನ ಸಂದರ್ಭದಲ್ಲಿ ಪ್ರತಿ ವರ್ಷದ ಯುವಜನ ಮೇಳಗಳಲ್ಲೂ ಈ ಗೆಳೆಯರ ಗುಂಪಿನದ್ದೇ ನಿರಂತರ ಕಲರವ!. ಎಲ್ಲ ಸ್ಪರ್ಧೆಗಳಲ್ಲೂ ಬಹುಮಾನಗಳನ್ನು ಬಾಚಿಕೊಳ್ಳುತ್ತಿದ್ದ ಇವರು ಅಂದಿನ ಸ್ಪರ್ಧಾಳುಗಳ ಪಾಲಿಗೆ ಸಿಂಹಸ್ವಪ್ನವೇ ಆಗಿದ್ದರು.

**ಪ್ರಕಟಿತ ನಾಟಕ:**

ಸೋದರ ವಾತ್ಸಲ್ಯ

**ಅಭಿನಯಿಸಿದ ನಾಟಕಗಳು:**

ಮರಳಿ ಬಂದ ಭಾಗ್ಯ (ರಚನೆ: ಎಚ್.ವಿ.ಹನುಮಂತು), ಸಂಸಾರ ಸ್ವರ (ರಚನೆ: ಎಚ್.ವಿ.ಹನುಮಂತು), ಕೊರಳು ಕೊಯ್ದವರು (ರಚನೆ: ಡಾ.ಎಲ್.ಸಿ.ರಾಜು), ಸೋದರ ವಾತ್ಸಲ್ಯ (ರಚನೆ: ಗೋಪಿನಂದನ), ಕುಡಿತದ ಸಹವಾಸ (ರಚನೆ: ಎಚ್.ವಿ.ಹನುಮಂತು)

ರಂಗಾದ ಮುನಿಯ (ರಚನೆ: ಎಚ್.ವಿ.ಹನುಮಂತು).

**ನಿರ್ದೇಶಿಸಿದ ನಾಟಕಗಳು:**

ಕೊರಳು ಕೊಯ್ದವರು (ರಚನೆ: ಡಾ.ಎಲ್.ಸಿ.ರಾಜು)

ಚುಕ್ಕಿ ಚಂದ್ರಮರ ನಡುವೆ (ರಚನೆ: ಡಾ.ಎಲ್.ಸಿ.ರಾಜು)

**ಸಂಗೀತ ನಿರ್ದೇಶನ ನೀಡಿದ ನಾಟಕ:**

ನ್ಯಾಯಕ್ಕೇ ನೇಣು (ರಚನೆ: ಡಾ.ಎಲ್.ಸಿ.ರಾಜು)

****

## ಶ್ರೀ ಎಚ್.ವಿ.ಹನುಮಂತು

**ನಟ, ನಾಟಕಕಾರ**

ರಾಮನಗರದ ಎಚ್.ವಿ.ಹನುಮಂತು ವೃತ್ತಿಯಲ್ಲಿ ರೇಷ್ಮೆ ಪ್ರದರ್ಶಕರಾಗಿದ್ದುಕೊಂಡು, ಪ್ರವೃತ್ತಿಯಿಂದ ಕಲೆ, ಸಾಹಿತ್ಯ, ಸಂಗೀತದಲ್ಲಿ ತೊಡಗಿಕೊಂಡವರು. ರಾಮನಗರದ ಹವ್ಯಾಸಿ ರಂಗಭೂಮಿಯಲ್ಲಿ ಆರಂಭಿಕವಾಗಿ ನಟರಾಗಿ, ನಾಟಕಕಾರರಾಗಿ ಗುರುತಿಸಿಕೊಂಡವರು. ಇವರು ಸಂಸಾರ ಸ್ವರ, ರಂಗಾದ ಮುನಿಯ, ಹಳ್ಳಿಯಭೂತ, ಕಿತಾಪತಿ ಶಾಮಣ್ಣ, ಮರಳಿ ಬಂದಭಾಗ್ಯ, ಕಿವುಡರ ಸಹವಾಸ, ಕುಡಿತದ ಸಹವಾಸ, ನಾಟಕಗಳ ಕರ್ತೃ, ಇವರ ಗರಡಿಯಲ್ಲಿ ಅನೇಕ ಕಲಾವಿದರು ತಯಾರಾಗಿದ್ದಾರೆ.

## ಶ್ರೀ ಅಂಕನಹಳ್ಳಿ ಪಾರ್ಥ

**ಸಂಪರ್ಕ: 9880631385**

ರಾಮನಗರ ಜಿಲ್ಲೆಯ ಬನ್ನಿಕುಪ್ಪೆಯ ಅಂಕನಹಳ್ಳಿಯ ಪಾರ್ಥ ಅವರದು ಬಹುಮುಖಿ ಪ್ರತಿಭೆ. ಕಲೆ, ಸಾಹಿತ್ಯ, ಸಂಶೋಧನೆಯಲ್ಲಿ ಸಿದ್ಧಹಸ್ತರು. ಇವರು ತಮ್ಮ ಅಂಕನಹಳ್ಳಿ ಪ್ರಕಾಶನದ ಮೂಲಕ 'ಉದುರ್‍ಯಾವೆ ಕನಸು ಉಡಿತುಂಬ ಮತ್ತು ಇತರ ನಾಟಕಗಳು' ನಾಟಕಗಳ ಸಂಕಲನದಲ್ಲಿ ಪ್ಯಾಟೆಮರಾಣಿ, ನ್ಯಾಯಕ್ಕೆ ನೇಣು, ಬರಡಾದ ಬದುಕು ನಾಟಕಗಳ ಸಂಗ್ರಹ ಹೊರತಂದಿದ್ದಾರೆ.



## ಹನುಮಂತೇಗೌಡ

**ರಂಗನಟ(ಹವ್ಯಾಸಿ/ಪೌರಾಣಿಕ)**

ರಾಮನಗರದ ಐಜೂರಿನ ಲೇ. ಅರಸ ಹನುಮಯ್ಯ ಹಾಗೂ ಲೇ.ರೇವಮ್ಮ ಅವರ ಪುತ್ರರಾಗಿ 16.05.1959 ರಲ್ಲಿ ಜನಿಸಿದ ಶ್ರೀ ಹನುಮಂತೇಗೌಡ ಅವರು 1978 ರಿಂದ ಇಂದಿನವರೆಗೆ ರಂಗಕಾಯಕ ಮಾಡುತ್ತಾ ಬಂದಿರುವ ಕಲಾವಿದ. 1978 ರಿಂದ ದಾನಶೂರಕರ್ಣ, ಕುರುಕ್ಷೇತ್ರ, ತ್ರಿಜನ್ಮಮೋಕ್ಷ, ಪಾಂಡುವಿಜಯ, ಗೌಡರಗದ್ಲ, ಚನ್ನಪ್ಪಚನ್ನೇಗೌಡ, ಶನಿಮಹಾತ್ಮೆ, ಮುಂತಾದ ನಾಟಕಗಳ ಮರುಪ್ರದರ್ಶನಗಳಲ್ಲಿ ಭೀಷ್ಮ, ದುರ್ಯೋಧನ, ಭೀಮ, ರಾವಣ, ಶಕುನಿ, ಕೀಚಕ, ಅರ್ಜುನ, ಶನಿದೇವ, ಮುಂತಾದ ಪಾತ್ರಗಳಿಗೆ ಜೀವ ತುಂಬಿ ನಟಿಸಿ ಹೆಸರುಗಳಿಸಿದ್ದಾರೆ. ಚನ್ನಪಟ್ಟಣದ ಅಪಗೇರೆ ಭೋಜಪ್ಪ, ರಾಮನಗರದ ಕುರುಬರಹಳ್ಳಿ ಸಿದ್ದಪ್ಪ, ಶಿವಾನಂದಮೂರ್ತಿ, ಕೃಷ್ಣಂರಾಜು, ಲಕ್ಷ್ಮೀಪುರ ಯತಿರಾಜು, ಮುಂತಾದವರ ನಿರ್ದೇಶನದಲ್ಲಿ ರಂಗ ಕಾಯಕ ಮಾಡಿದ ಹೆಗ್ಗಳಿಕೆ ಹನುಮಂತೇಗೌಡ ಅವರದಾಗಿದೆ.

## ಶ್ರೀ ವಿಜಯಕುಮಾರ್



ರಂಗ ಕಲಾವಿದ(ಪೌರಾಣಿಕ) ವಾರ್ಡ್ ನಂ.31, ಅರ್ಚಕರಹಳ್ಳಿ, ಐಜೂರು ಅಂಚೆ, ರಾಮನಗರ ಟೌನ್ ಮೊ: 9900668676

1986 ರಿಂದ ಇಂದಿನವರೆಗೂ ರಂಗಕಾಯಕ ಮಾಡುತ್ತಿದ್ದಾರೆ. ಇವರು ಶ್ರೀ ಬಸವೇಶ್ವರ ಸಾರ್ವಜನಿಕ ವಿದ್ಯಾರ್ಥಿ ನಿಲಯ ಟ್ರಸ್ಟ್ ಅಧ್ಯಕ್ಷರಾಗಿ ಸಮಾಜ ಸೇವೆ ಸಹ ಮಾಡುತ್ತಿದ್ದಾರೆ.


## ಶ್ರೀ ಎಂ.ಆನಂದ್



ಗೀತಾ ಮಂದಿರ ಬಡಾವಣೆ, 2ನೇ ಕ್ರಾಸ್, ಐಜೂರು, ರಾಮನಗರ ಟೌನ್, ರಾಮನಗರ

ರಾಮನಗರದ ಐಜೂರಿನ ಗೀತಾ ಮಂದಿರ ಬಡಾವಣೆಯ ಎಂ.ಆನಂದ್ ಅವರು 1985ರಿಂದ ಇಂದಿನವರೆಗೂ ಪೌರಾಣಿಕ ರಂಗ ಕಲಾವಿದರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರು ಲೇಟ್.ಮಾರಣ್ಣ ತಂಬೂರಿ ಕಲಾವಿದ ಅವರ ಪುತ್ರರು. ಇವರು ಅಭಿನಯಿಸಿರುವ ನಾಟಕ ಹಾಗೂ ಪಾತ್ರಗಳೆಂದರೇ: ಸತ್ಯವ್ರತ ನಾಟಕದ ಚತುರನ ಪಾತ್ರ, ದಾನಶೂರ ಕರ್ಣ–ಹೃಷಿಕೇತು, ಕೀಚಕನ ವಧೆ– ಅರ್ಜುನ, ನಲ್ಲತಂಗ–ಈಶ್ವರ, ಕುರುಕ್ಷೇತ್ರ–ಶ್ರೀಕೃಷ್ಣ, ಅರ್ಜುನ, ಕರ್ಣ, ಪ್ರಚಂಡ ರಾವಣ–ರಾಮ, ಶ್ರೀಕೃಷ್ಣ ಸಂಧಾನ–ಶ್ರೀಕೃಷ್ಣ, ಸೂತ್ರಧಾರಿ ಮುಂತಾದ ನಾಟಕಗಳಲ್ಲಿ ಅಭಿನಯಿಸಿದ್ದಾರೆ.

## ಶಿವಶಂಕರ ನಾಯಕ್.ಎ.ಜಿ



ರಂಗ ಕಲಾವಿದ/ರಂಗ ನಿರ್ದೇಶಕ/ರಂಗ ಸಂಘಟಕ

**ಮೊ:9916800451/9620916327**

ರಾಮನಗರ ಜಿಲ್ಲೆಯ ಕೈಲಾಂಚ ಹೋಬಳಿಯ ಅಮ್ಮನಪುರದ ಗೋವಿಂದನಾಯಕ್ ಹಾಗೂ ಸೋಮಿಬಾಯಿ ದಂಪತಿಗಳ ಪುತ್ರರಾಗಿ

02.05.1985 ರಲ್ಲಿ ಜನಿಸಿದ್ದಾರೆ. ಶ್ರೀ ಶಿವಶಂಕರ್ ಅವರು ಬೆಂಗಳೂರಿನ ಪ್ರತಿಷ್ಠಿತ ಅಭಿನಯ ತರಂಗ ರಂಗಶಾಲೆಯಿಂದ ಡಿಪ್ಲೋಮ ಮಾಡಿದ್ದಾರೆ. ಅಲ್ಲದೆ ರಾಷ್ಟ್ರೀಯ ನಾಟಕ ಶಾಲೆಯ ಬೆಂಗಳೂರು ಚಾಪ್ಟರ್ ತರಬೇತಿ, ಬೆಂಗಳೂರು ವಿಶ್ವವಿದ್ಯಾಲಯದ ಪ್ರದರ್ಶನ ಕಲಾ ವಿಭಾಗದಿಂದ ನಾಟಕದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಇವರು ರಂಗ ಭೂಮಿ, ಧಾರಾವಾಹಿ, ಸಿನಿಮಾ ನಟ, ನಿರ್ದೇಶಕರಾಗಿ, ರಂಗ ಕಾರ್ಯಾಗಾರಗಳು, ರಂಗ ಸಂಘಟನೆಯಂತಹ ರಂಗ ಭೂಮಿ ಸಂಬಂಧಿ ಕ್ಷೇತ್ರದಲ್ಲಿ ಕಳೆದ ಹತ್ತು ವರ್ಷಗಳಿಗೂ ಹೆಚ್ಚಿನ ಅವಧಿಯಿಂದ ದುಡಿಯುತ್ತಿದ್ದಾರೆ.

**ಅಭಿನಯದ ನಾಟಕಗಳು:**

ನೆನೆಯೋ ಆ ಜನವ (ಧ್ವನಿ ಬೆಳಕು ಬೃಹತ್ ನಾಟಕ), ಆಕ್ರಮಣ, ಹೇರಾಮ್, ಅವಾಂತರ (ಜಯಂತನ ಸ್ವಗತ), ಕೋರಿಯೋ ಲೆನಸ್, ಟೋಬಾಟೇಕ್‌ಸಿಂಗ್, ಮ್ಯಾಕ್‌ಬೆತ್, ಊರು ಭಂಗ (ನೃತ್ಯ ನಾಟಕ), ಚಿರೆಬಂದಿವಾಡೆ, ಆಮಾಸ, ಲೋವರ್‌ಡೆಪ್ತ್, ಮಂಟೇಸ್ವಾಮಿ, ಬಿರುದಂತೆಂಬರ ಗಂಡ, ಇದಿತಾಯಿ, ಗಾಂಧಿ ಅಂಬೇಡ್ಕರ್, ಅಂಬೇಡ್ಕರ್, ಚಾಂಡಲೀಕ, ಒಂದು ಬೊಗಸೆ ನೀರು, ಕಾಲಜ್ಞಾನಿ ಕನಕ, ವಾರ್ಡ್ ನಂ–6, ಆಶಾಡದ ಒಂದು ದಿನ, ಕಾಶಿ ಕಿಟ್ಟಿಕತೆ ಪುರಾಣ, ಹಾಗೂ ಬೀದಿನಾಟಕಗಳು, ಸ್ಕಿಟ್‌ಗಳು ಮುಂತಾದವು.

**ನಿರ್ದೇಶನದ ನಾಟಕಗಳು:** ನಶ್ವರ, ಒಂದು ಬೋಗಸೆ ನೀರು, ಡೊಂಕುಬಾಲ, ಮಧ್ಯಮ ವ್ಯಾಯೋಗ ಮುಂತಾದವು.

**ನಾಟಕ ರಚನೆ:** ನಶ್ವರ

**ಸಹ ನಿರ್ದೇಶನ:**

ಮನುಷ್ಯ ಜಾತಿ ತಾನೊಂದೆ ವಲಂ (ಧ್ವನಿ–ಬೆಳಕು ನಾಟಕ)

**ನಿರ್ದೇಶನ:** ಸಿ.ಬಸವಲಿಂಗಯ್ಯ

'ಬಂಜಾರ ಸಂಸ್ಕೃತಿ' ಡಾಕ್ಯೂಮೆಂಟರಿ ಫಿಲ್ಮ್

**ನಿರ್ದೇಶನ:** ಡಾ.ಎ.ಆರ್.ಗೋವಿಂದಸ್ವಾಮಿ ಮುಂತಾದವು.

****

## ರಾಮನಗರ ತಾಲ್ಲೂಕಿನ ಪ್ರಮುಖ ರಂಗ ತಂಡಗಳು
(ಹವ್ಯಾಸಿ)

### 1.ಅಮರಜ್ಯೋತಿ ಕಲಾ ಬಳಗ(ರಿ)
**ಸಂಪರ್ಕ: 8095120272**

1980 ರಿಂದ ಇಂದಿನವರೆಗೆ ರಾಮನಗರದ 'ಅಮರಜ್ಯೋತಿ ಕಲಾ ಬಳಗ'ವು ಜಿಲ್ಲೆಯಲ್ಲಿ ಪೌರಾಣಿಕ, ಹವ್ಯಾಸಿ ನಾಟಕಗಳ ಪ್ರದರ್ಶನವನ್ನು ನಡೆಸುತ್ತಾ ರಾಮನಗರದ ಪ್ರೇಕ್ಷಕರನ್ನು ರಂಜಿಸುವಲ್ಲಿ ಯಶಸ್ವಿಯಾಗಿದೆ.

ಆರಂಭದ ದಿನಗಳಲ್ಲಿ 'ಅಮರಜ್ಯೋತಿ ಕಲಾ ಬಳಗ'ದ ವತಿಯಿಂದ ಎಲ್.ಸಿ.ರಾಜು ಅವರ 'ಕೊರಳ ಕೊಯ್ದವರು' ನಾಟಕವನ್ನು ಗೋಪಿನಂದನ್ ನಿರ್ದೇಶನದಲ್ಲಿ ಪ್ರಯೋಗಿಸುವ ಮೂಲಕ ಆರಂಭವಾದ ಬಳಗವು ರಾ.ಬಿ.ನಾಗರಾಜು, ಬೈರೇಗೌಡ ಅವರ ನೇತೃತ್ವದಲ್ಲಿ ಅನೇಕ ನಾಟಕಗಳನ್ನು ಪ್ರಯೋಗಿಸಿದೆ. ಕಲಾ ಬಳಗಕ್ಕೆ ಎಸ್.ಟಿ.ಕಾಂತರಾಜ್ ಪಟೇಲ್ ಗೌರವ ಅಧ್ಯಕ್ಷರಾಗಿದ್ದರು. ಪ್ರಸಕ್ತ ಬೈರೇಗೌಡ ಅವರ ನೇತೃತ್ವದಲ್ಲಿ ಅಮರಜ್ಯೋತಿ ಕಲಾ ಬಳಗ ಕೆಲಸ ನಿರ್ವಹಿಸುತ್ತಿದೆ.

ಅಮರಜ್ಯೋತಿ ಕಲಾ ಬಳಗದ ಪ್ರದರ್ಶನದ ನಾಟಕಗಳ ಪಟ್ಟಿ ಇಂತಿದೆ,

### ಸಾಮಾಜಿಕ ನಾಟಕಗಳು

**ಪ್ರದರ್ಶಿಸಿದ ನಾಟಕಗಳು:**

1) ತ್ಯಾಗಿ 1980 2) ಉಂಡಾಡಿ ಗುಂಡ 1980 3) ದೇವದಾಸಿ 1981 4) ಕುರಿದೊಡ್ಡಿ ಕುರುಕ್ಷೇತ್ರ 1982 5)ಎಚ್ಚಮ್ಮ ನಾಯಕ

**ಪೌರಾಣಿಕ ನಾಟಕಗಳು:**

1) ಸಂಪೂರ್ಣ ರಾಮಾಯಣ, ಕುರುಬರಹಳ್ಳಿ (15.02.1987) 2) ರುಕ್ಮಿಣಿ ಸ್ವಯಂವರ, ಕುರುಬರಹಳ್ಳಿ 1983 3) ಶ್ರೀ ಕೃಷ್ಣ ಸಂಧಾನ, ಬಿಳಗುಂಬ 1984 4) ಕುರುಕ್ಷೇತ್ರ, ಚನ್ನಪಟ್ಟಣ 1985 5) ನಲ್ಲತಂಗ, ಆದಿಚುಂಚನಗಿರಿ 1985 6) ಸಂಪೂರ್ಣ ರಾಮಾಯಣ, ಆದಿಚುಂಚನಗಿರಿ 1986 7) ಕುರುಕ್ಷೇತ್ರ, ಆದಿಚುಂಚನಗಿರಿ 1987 8) ಸಂಪೂರ್ಣ ರಾಮಾಯಣ, ಹುಲಿಯೂರು ದುರ್ಗ 1987 9) ಕುರುಕ್ಷೇತ್ರ, ತುಮಕೂರು 1988 10) ನಲ್ಲತಂಗ, ಅರ್ಚಕರಹಳ್ಳಿ

1992 11) ಶನಿಪ್ರಭಾವ, ಮದ್ದೂರು 1994 12) ಸಂಪೂರ್ಣ ರಾಯಾಯಣ, ದಿ// ಶಂಕರೇಗೌಡ ಸ್ಮಾರಕ ರಾಜ್ಯಮಟ್ಟದ ನಾಟಕ ಸ್ಪರ್ಧೆ, ಮಂಡ್ಯ 1992 13) ಶ್ರೀ ಕೃಷ್ಣ ಸಂಧಾನ, ರಾಜ್ಯಮಟ್ಟದ ನಾಟಕ ಸ್ಪರ್ಧೆ 1998 14)ಸಂಪೂರ್ಣ ರಾಮಾಯಣ, ರಾಮನಗರ ಟೌನ್ 1999 15) ಕುರುಕ್ಷೇತ್ರ, ಜಾನಪದ ಲೋಕ ನಾಟಕೋತ್ಸವ ಸ್ಪರ್ಧೆ 2000 16) ನಲ್ಲತಂಗ, ಮಾಗಡಿ ಟೌನ್ 2001 17) ಕೃಷ್ಣ ವಿಜಯ, ರಾಜ್ಯಮಟ್ಟದ ನಾಟಕ ಸ್ಪರ್ಧೆ ಮಿತ್ರಕಲಾ ವೃಂದ ಮಂಡ್ಯ 2002 18) ದಕ್ಷಯಜ್ಞ, ಕಲಾಕ್ಷೇತ್ರ ಮಂಡ್ಯ 2003 19) ಸಾಮ್ರಾಟ ಸಯೋಧನ, ಮಳವಳ್ಳಿ 2004 20) ಕುರುಕ್ಷೇತ್ರ, ರವೀಂದ್ರ ಕಲಾಕ್ಷೇತ್ರ ಬೆಂಗಳೂರು 2005 21) ದಾನಶೂರ ಕರ್ಣ, ಬಿಡದಿ 2006 22) ಕುರುಕ್ಷೇತ್ರ, ಸುತ್ತುರು ಜಾತ್ರಾ ಮಹೋತ್ಸವ 2007 23) ಶ್ರೀ ಕೃಷ್ಣ ಸಂಧಾನ, ಮೈಸೂರು ದಸರಾ ಮಹೋತ್ಸವ 2007 24)ಕುರುಕ್ಷೇತ್ರ, ಶ್ರೀ ರೇವಣಸಿದ್ದೇಶ್ವರ ಸ್ವಾಮಿ ಜಾತ್ರಾ ಮಹೋತ್ಸವ 2008 25) ದಕ್ಷಯಜ್ಞ, ಅಂಬೇಡ್ಕರ್ ಭವನ, ರಾಮನಗರ 2008 26) ನಲ್ಲತಂಗ, ರಾಮನಗರ 2008 27) ದಕ್ಷಯಜ್ಞ, ಬೆಂಗಳೂರು 2009.

**ತಂಡದ ಕಲಾವಿದರು**: 1) ವಿಜಿಕುಮಾರ್ 2) ಸಿ.ರವಿ 3) ಪಟೇಲ್ ವೆಂಕಟೇಶ್ 4) ಲಕ್ಷ್ಮೀಕುಮಾರ್ 5) ವಾಸು ಬಿ.ಸಿ. 6) ಸಿದ್ದರಾಜು ಮಾದಾಪುರ 7) ಕೃಷ್ಣೇಗೌಡ 8) ಗುರುಮಲ್ಲಯ್ಯ ಬಿ.ಎಸ್. 9) ಶಿವಪ್ರಸಾದ್ 10) ಚಿನ್ನಗಿರಿಗೌಡ 11) ಲಿಂಗೇಗೌಡ 12) ಶಿವಣ್ಣ 13) ಕೃಷ್ಣರಾಜು 14) ಹೊಂಬಾಳಯ್ಯ 15) ಸಿದ್ದರಾಜು ರಾಂಪುರ 16) ವೀರೇಶ್‌ಮೂರ್ತಿ 17) ತಿಮ್ಮರಾಜು 18) ನಾರಾಯಣಪ್ಪ 19) ಸುಮತಿ ಕುಮಾರ್ ಜೈನ್ 20) ನಾಗರಾಜು

## ಬೈರೇಗೌಡ ಅವರ ಪರಿಚಯ



ರಾಮನಗರ ಜಿಲ್ಲೆ ಕಸಬಾ ಹೋಬಳಿ, ಬಿಳಗುಂಬ ಅಂಚೆಯ ಕುರುಬರಹಳ್ಳಿಯಲ್ಲಿ ಲೇ.ಮರಿಸಿದ್ದಯ್ಯ ಶ್ರೀಮತಿ ಭಾಗ್ಯಮ್ಮ ಪುತ್ರರಾಗಿ

14.03.1960ರಲ್ಲಿ ಜನಿಸಿದ ಬೈರೇಗೌಡ ಅವರು, ರಂಗಕಲೆಯಲ್ಲಿ ಆಸಕ್ತಿ ಹೊಂದಿರುವವರು. ಇವರಿಗೆ 2008ರ ರಾಜ್ಯೋತ್ಸವ ಪ್ರಶಸ್ತಿ, ನಾಟಕ ಅಕಾಡೆಮಿ ಪ್ರಶಸ್ತಿಗಳು ಬಂದಿರುವುದು ಹೆಮ್ಮೆಯ ಸಂಗತಿ. ಬೈರೇಗೌಡ ಅವರು ಹಲವಾರು ಸಂಘ–ಸಂಸ್ಥೆಗಳಲ್ಲಿ ಸದಸ್ಯರಾಗಿ, ಪದಾಧಿಕಾರಿಗಳಾಗಿದ್ದಾರೆ. ಅವರ ಜ್ಯೋತಿ ಕಲಾಬಳಗ, ರಾಮನಗರ ಇದರ ಗೌರವ ಅಧ್ಯಕ್ಷರಾಗಿ 32ಕ್ಕೂ ಹೆಚ್ಚಿನ ಸಾಮಾಜಿಕ ಮತ್ತು ಪೌರಾಣಿಕ ನಾಟಕಗಳನ್ನು ಸಂಘಟಿಸಿ, ಅಭಿನಯಿಸಿದ್ದಾರೆ. ಇವರು ಸಂಪೂರ್ಣ ರಾಮಾಯಣ, ಪಾಂಡವ ವಿಜಯ, ಶ್ರೀಕೃಷ್ಣ ಸಂಧಾನ, ಮುಂತಾದ ನಾಟಕಗಳಲ್ಲಿ ಆಂಜನೇಯ, ಶಕುನಿ, ಧರ್ಮರಾಯ ಮುಂತಾದ ಪಾತ್ರ ನಿರ್ವಹಿಸಿದ್ದಾರೆ. ಹೀಗೆ ರಂಗಕಲೆಯನ್ನು ಪ್ರೋತ್ಸಾಹಿಸುತ್ತಾ, ಸಂಘಟಿಸುತ್ತಾ ಬರುತ್ತಿರುವ ಆಸಕ್ತರು.

ಇವರು ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು, ರಾಮನಗರ ಇದರ ಕಾರ್ಯದರ್ಶಿ ಹಾಗೂ ಅಧ್ಯಕ್ಷರಾಗಿ ಸಾಂಸ್ಕೃತಿಕ, ಸಾಹಿತ್ಯಿಕ ಚಟುವಟಿಕೆಗಳನ್ನು ನಡೆಸಿ ಹಲವಾರು ಪ್ರಶಸ್ತಿಗೆ ಪುರಸ್ಕಾರಕ್ಕೆ ಭಾಜನರಾಗಿದ್ದಾರೆ. ಅದರಲ್ಲಿ 2009 ರಲ್ಲಿ ಇವರಿಗೆ 'ರಂಗ ಕೌಸ್ತುಭ', 2004 ರ ಕಲಾಶ್ರೀ, 2005 ರಲ್ಲಿ ಜನಪದ ಲೋಕೋತ್ಸವ, ರಾಜ್ಯೋತ್ಸವ ಪ್ರಶಸ್ತಿ, ಮುಂತಾದ ಪ್ರಶಸ್ತಿಗಳು ಲಭಿಸಿವೆ.

## 2. ಸಂಸ್ಕೃತಿ ಸೌರಭ ಟ್ರಸ್ಟ್ ಹಾಗೂ ರಾಮನಗರ ಜಿಲ್ಲಾ ರಂಗಭೂಮಿ ಕಲಾವಿದರ ಸಂಘ

2008 ರಿಂದ ಸಂಸ್ಕೃತಿ ಸೌರಭ ಟ್ರಸ್ಟ್ ಹಾಗೂ ರಾಮನಗರ ಜಿಲ್ಲಾ ರಂಗಭೂಮಿ ಕಲಾವಿದರ ಸಂಘವು ಜಂಟಿಯಾಗಿ ರಾಮನಗರದಲ್ಲಿ ರಂಗಚಟುವಟಿಕೆ ಮಾಡುತ್ತಿವೆ. ನಾಟಕ ಪ್ರಯೋಗ, ಅಂತರ ಕಾಲೇಜು ಕಲಾಸ್ಪರ್ಧೆ, ರಂಗಗೀತೋತ್ಸವದಂತಹ ಅನೇಕ ಕಾರ್ಯ ಚಟುವಟಿಕೆ ನಡೆಸುತ್ತಾ ಬಂದಿದೆ. ಇವುಗಳ ಮುಂದಾಳತ್ವವನ್ನು ನಟ, ಗಾಯಕ, ರಂಗ ಸಂಘಟಕ, ರಾ.ಬಿ.ನಾಗರಾಜ್ ಮುಂತಾದವರು ನಿರ್ವಹಿಸುತ್ತಿದ್ದಾರೆ.

## ಪ್ರಮುಖ ನಾಟಕ ಪ್ರಯೋಗಗಳು

1. ಶ್ರೀ ಕೃಷ್ಣಸಂಧಾನ 2. ಶನಿ ಪ್ರಭಾವ 3. ಸಂಪೂರ್ಣ ರಾಮಾಯಣ ಮುಂತಾದ ಪೌರಾಣಿಕ ನಾಟಕಗಳನ್ನು ಮರು ಪ್ರದರ್ಶನಗಳೊಂದಿಗೆ ಪ್ರಯೋಗಿಸುತ್ತಾ ಬರುತ್ತಿದ್ದಾರೆ. ನಿರಂತರವಾಗಿ ರಾಜ್ಯಮಟ್ಟದ ರಂಗಗೀತೆಗಳ ಸ್ಪರ್ಧೆ ಆಯೋಜನೆ ಮಾಡುತ್ತಿದ್ದಾರೆ.

## ರಾ.ಬಿ.ನಾಗರಾಜ್



**ಸಂಪರ್ಕ: 9844025286 ಅಲಂಕಾರ್ ಸ್ಟುಡಿಯೋ, ಟೌನ್ ಪೊಲೀಸ್ ಸ್ಟೇಷನ್ ರಸ್ತೆ, ಮಂಡಿಪೇಟೆ, ರಾಮನಗರ**

ರಾಮನಗರದ ಶ್ರೀ ಬೀರಯ್ಯ, ಶ್ರೀಮತಿ ಜಯಮ್ಮ ಪುತ್ರರಾಗಿ 02 ಏಪ್ರಿಲ್ 1971 ರಲ್ಲಿ ಜನಿಸಿದ ಶ್ರೀ ನಾಗರಾಜ್ ಬಹುಮುಖ ಪ್ರತಿಭೆ. ಬಾಲ್ಯದಲ್ಲಿಯೇ ಕಲಾ ಆಸಕ್ತಿ ಹೊಂದಿದ್ದ ಇವರು ಗಾಯನ, ನಟನೆ, ಪತ್ರಿಕಾ ರಂಗ, ಕನ್ನಡ ಚಳವಳಿ, ಸಿನಿಮಾ, ಆಕಾಶವಾಣಿ, ಕಿರುತೆರೆ ಸಮಾಜ ಸೇವೆ ಹೀಗೆ ಹಲವು ದೋಣಿಗಳಲ್ಲಿ ಕಾಲಿಟ್ಟು ಯಶಸ್ಸು ಸಿಗದಿದ್ದಾಗ ರಂಗಕಲೆ ಎಡೆಗೆ ತಮ್ಮನ್ನು ತೊಡಗಿಸಿಕೊಂಡವರು. ರಾ.ಬಿ.ನಾಗರಾಜ್ ಒಬ್ಬ ಉತ್ತಮ ರಂಗ ಸಂಘಟಕನಾಗಿ ರಾಮನಗರದಲ್ಲಿ ನಿರಂತರ ಒಂದಲ್ಲ ಒಂದು ರಂಗ ಚಟುವಟಿಕೆ ನಡೆಸುತ್ತ ಬರುತ್ತಿದ್ದಾರೆ. ರಾಮನಗರ ತಾಲ್ಲೂಕು ಹಾಗೂ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಯಾಗಿಯೂ ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳನ್ನು ರೂಪಿಸುತ್ತಾ ಬಂದಿದ್ದಾರೆ. ರಾಮನಗರದ ಎಚ್.ವಿ.ಹನುಮಂತು ಮತ್ತು ಗೆಳೆಯರು ಅಭಿನಯಿಸುತ್ತಿದ್ದ ಸಾಮಾಜಿಕ ನಾಟಕಗಳಲ್ಲಿ ಆರಂಭಕ್ಕೆ ಅಭಿನಯಿಸಿ, ರಂಗಗೀತೆ ಹಾಡುವ ಮೂಲಕ ರಂಗಭೂಮಿಯಲ್ಲಿ ಆಸಕ್ತಿ ಹೊಂದಿದ ಇವರು, 1989 ರಲ್ಲಿ 'ರಾಜಾವಿಕ್ರಮ' ನಾಟಕದಲ್ಲಿ 'ನಾರದ' ಪಾತ್ರಾಭಿನಯದ ಮೂಲಕ ಪೌರಾಣಿಕ ನಾಟಕದ ಕಡೆಗೂ ಒಲವು ಬೆಳೆಸಿಕೊಂಡರು. ಹೀಗೆ ಕರ್ಣ, ಅರ್ಜುನ, ಮುಂತಾದ ನಾಟಕಗಳಲಿ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ.



**ಕೊರಳಕೊಯ್ದವರು ನಾಟಕದ ರಾಜು ಪಾತ್ರದಲ್ಲಿ**

1992 ರಲ್ಲಿ ಸ್ನೇಹಿತರೊಂದಿಗೆ 'ಅಮರ ಜ್ಯೋತಿ ಕಲಾ ಬಳಗ' ಎಂಬ ಸಾಂಸ್ಕೃತಿಕ ಸಂಘಟನೆಯನ್ನು ಸ್ಥಾಪಿಸಿ, ಎಲ್.ಸಿ.ರಾಜು ರಚನೆಯ 'ಕೊರಳ ಕೊಯ್ದವರು' ಸಾಮಾಜಿಕ ನಾಟಕ ಪ್ರಯೋಗದ ಮೂಲಕ ರಂಗ ಚಟುವಟಿಕೆಗೆ ನಾಂದಿ ಹಾಡಿದ ರಾ.ಬಿ.ನಾಗರಾಜ್ ಅವರು, ಹಲವಾರು ನಾಟಕಗಳನ್ನು ಈ ವೇದಿಕೆಯಿಂದ ಪ್ರಯೋಗಿಸಿದ್ದಾರೆ. ನಾಟಕ, ರಂಗಗೀತೆ, ಜಾನಪದ, ಉತ್ಸವ, ವಿಚಾರ ಸಂಕಿರಣ, ರಂಗಕಲಾ ಪುರಸ್ಕಾರ ನೀಡುತ್ತಾ ಬರುತ್ತಿದ್ದಾರೆ. 2008 ರಲ್ಲಿ 'ಅಮರ ಜ್ಯೋತಿ ಕಲಾ ಬಳಗ' ತೊರೆದು ಸಂಸ್ಕೃತಿ ಸೌರಭ ಟ್ರಸ್ಟ್ ಆರಂಭಿಸಿ ಅಧ್ಯಕ್ಷರಾಗಿದ್ದಾರೆ. ಜೊತೆಗೆ 'ರಾಮನಗರ ಜಿಲ್ಲಾ ರಂಗಭೂಮಿ ಕಲಾವಿದರ ಸಂಘ' ರಚಿಸಿ ನಾಟಕಗಳನ್ನು ಸಂಘಟಿಸುತ್ತಾ, ಅಂತರ ಕಾಲೇಜು ಕಲಾಸ್ಪರ್ಧೆ, ರಂಗಗೀತೋತ್ಸವದಂತಹ ಹಲವು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುತ್ತಿದ್ದಾರೆ.

**3. ಕೆ.ಎಸ್. ಮುದ್ದಪ್ಪ ಸ್ಮಾರಕ ಟ್ರಸ್ಟ್**
**ಸಂಪರ್ಕ: ಡಾ.ಎಂ.ಬೈರೇಗೌಡ :**
**9448102158**

ಸಾಮಾಜಿಕ ಜವಾಬ್ದಾರಿ ಇರುವ ವ್ಯಕ್ತಿ. ಸಮಾಜ ತನಗೇನು ಕೊಟ್ಟಿದೆ ಎನ್ನುವ ಪ್ರಶ್ನೆ ಹಾಕಿಕೊಳ್ಳದೆ ತಾನು ಸಮಾಜಕ್ಕೆ ಏನಾದರೂ ಮಾಡಬಹುದೇ ಎಂದು ಆಲೋಚಿಸುತ್ತಾನೆ. ಈ ನಿಟ್ಟಿನಲ್ಲಿ 'ಏನಾದರೂ ಮಾಡುತ್ತಿರು ತಮ್ಮ ಸುಮ್ಮನಿರಬೇಡ' ಎಂದು ಕವಿವಾಣಿಯಂತೆ ಸರ್ಕಾರಿ ಇಲಾಖೆಯ ನೌಕರಿಗೆ ರಾಜೀನಾಮೆ ಕೊಟ್ಟು ದಿವಂಗತರಾದ ತಂದೆಯ ಹೆಸರಿನಲ್ಲಿ ಆಸಕ್ತರೊಡಗೂಡಿ 'ಕೆ.ಎಸ್.ಮುದ್ದಪ್ಪ ಸ್ಮಾರಕ ಟ್ರಸ್ಟ್' ಆರಂಭಿಸಿ ರಂಗ ಚಟುವಟಿಕೆಗಳನ್ನು ನಡೆಸುತ್ತಾ ಬರುತ್ತಿದ್ದಾರೆ. ಜಾನಪದ ತಜ್ಞ ಡಾ.ಎಂ.ಬೈರೇಗೌಡ.

ಬೈರೇಗೌಡ ಅವರು ಆರಂಭದಲ್ಲಿ ರಾಮನಗರದ ಕೈಲಾಂಚ ಹೋಬಳಿಯ ಕೃಷ್ಣಾಪುರದೊಡ್ಡಿಯಲ್ಲಿ ತಂದೆಯ ಪ್ರೇರಣೆಯಿಂದ ಟ್ರಸ್ಟ್ ಆರಂಭಿಸಿ ಇಲ್ಲಿಗೆ ಹದಿಮೂರು ವರ್ಷಗಳನ್ನು ಯಶಸ್ವಿಯಾಗಿ ಪೂರೈಸಿದೆ.

ಕೆ.ಎಸ್.ಮುದ್ದಪ್ಪ ಅವರು ಮೂಡಲಪಾಯ ಯಕ್ಷಗಾನಕ್ಕೆ ತಮ್ಮನ್ನು ಅರ್ಪಿಸಿಕೊಂಡಿದ್ದವರು. ಬಯಲು ಸೀಮೆಯ ಪೌರಾಣಿಕ ನಾಟಕಗಳ ನೂರಾರು ಪಾತ್ರಗಳಲ್ಲಿ ನಟಿಸಿದ್ದರು. ಮಹಾಭಾರತ, ರಾಮಾಯಣ ಮಹಾಕಾವ್ಯಗಳನ್ನು ಪ್ರವಚನ ಮಾಡಿ ಜನಸಾಮಾನ್ಯರಿಗೆ ಅದರ ಸವಿ ಉಣಿಸಿದವರು. ನೂರಾರು ಜನಪದ ಕತೆಗಳನ್ನು ಹೇಳುತ್ತಿದ್ದ ಮುದ್ದಪ್ಪ ಆ ಮೂಲಕ ದಾರಿತಪ್ಪಿದವರನ್ನು ಸರಿದಾರಿಗೆ ತರುವ ಪ್ರಯತ್ನ ನಡೆಸಿದವರು. ಇವರ ನೆನಪಲ್ಲಿ ಮಕ್ಕಳಿಗಾಗಿ ಜಾನಪದ ರಂಗಭೂಮಿಯನ್ನು ಪರಿಚಯಿಸಲು ಚಿಣ್ಣರ ಲೋಕವೆಂಬ ರಂಗತರಬೇತಿ ಶಿಬಿರವನ್ನು ಆಯೋಜಿಸಲು ಟ್ರಸ್ಟ್ ಆರಂಭಿಸಿತ್ತು. ಗ್ರಾಮೀಣ ಹಾಗೂ ನಗರ ಪ್ರದೇಶದ ಮಕ್ಕಳನ್ನು ಶಿಬಿರಕ್ಕೆ ಆಯ್ಕೆ ಮಾಡಿಕೊಂಡು ಇತರೆ ಸಂಘ-ಸಂಸ್ಥೆಗಳಗಳ ಸಹಯೋಗದಲ್ಲಿ ಉಚಿತ ವಸತಿ, ರಂಗತರಬೇತಿ ಶಿಬಿರಗಳನ್ನು ಏರ್ಪಡಿಸಿ, ಇದುವರೆಗೆ ಅನೇಕ ರಂಗಗೆಳೆಯರು, ತಂತ್ರಜ್ಞರನ್ನು ಕರೆಸಿ ಅವರೊಡನೆ ಸಂವಾದ ನಡೆಸುವ ಮೂಲಕ ಮನೋಲೋಕವನ್ನು ಬೆಳಗಿಸಿದ ಕೀರ್ತಿ ಕೆ.ಎಸ್.ಮುದ್ದಪ್ಪ ಸ್ಮಾರಕ ಟ್ರಸ್ಟ್‌ಗೆ ಇದೆ.

ಕಲಾವಿದರ ಶೋಧದಲ್ಲಿ ಪ್ರತಿಭಾವಂತರನ್ನು ಕರೆದು, ಆಸಕ್ತರನ್ನು ಕಲೆಹಾಕಿ, ಕರೆಸಿ ಅನೇಕ ಜಾನಪದ ತರಬೇತಿ ನೀಡುತ್ತಿದೆ. ರಂಗತರಬೇತಿ ನೀಡಿ 'ಬುಡಬೆಳ್ಳಿ, ನಡುಪಚ್ಚೆ ಗೊನೆಮುತ್ತು' ಎಂಬ ನಾಟಕದ ಮೂಲಕ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ತಮ್ಮ ಪ್ರತಿಭೆ ಪ್ರದರ್ಶಿಸಿ ರಂಗಾಸಕ್ತರ ಗಮನ ಸೆಳೆಯುವಂತೆ ಮಾಡಿದ್ದು ಟ್ರಸ್ಟ್ ಹೆಗ್ಗಳಿಕೆ. ಗಂಗಾಧರ ಶಾಸ್ತ್ರಿ, ಬುರುಡೆ, ಹಂದಿಪುರಾಣ, ಎಲೆನಕ್ಕು ಅಡಿಕೆ ಮಾತಾಡಿ, ದಾಸಯ್ಯ, ಪಂಚವರ್ಣದ ಗಿಣಿ, ಮಾರ್ಜಾಲ, ಬುಡಬೆಳ್ಳಿ ನಡುಪಚ್ಚೆ ಗೊನೆಮುತ್ತು ಮುಂತಾದ ನಾಟಕಗಳನ್ನು ನಗರ ಮತ್ತು ಗ್ರಾಮೀಣ ಪ್ರದೇಶದ ಮಕ್ಕಳಿಗೆ ತರಬೇತಿ ಕೊಡಿಸಿ, ಕರ್ನಾಟಕದ ಬೇರೆ ಬೇರೆ ನಗರಗಳಲ್ಲಿ ಪ್ರದರ್ಶನಕ್ಕೆ ವ್ಯವಸ್ಥೆ ಮಾಡಿಕೊಟ್ಟಿದೆ.

ಕಳೆದ ಹದಿಮೂರು ವರ್ಷಗಳಿಂದ ಸುಮಾರು 700 ಕ್ಕೂ ಹೆಚ್ಚು ಕಲಾವಿದರು ಕೆ.ಎಸ್.ಮುದ್ದಪ್ಪ ಸ್ಮಾರಕ ಟ್ರಸ್ಟ್‌ನ ವಿವಿಧ ವೇದಿಕೆಗಳಲ್ಲಿ

ಕಾಣಿಸಿಕೊಂಡಿದ್ದಾರೆ. ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಸಹಯೋಗದಲ್ಲಿ ಕಳೆದ ಮೂರುವರೆ ವರ್ಷಗಳಿಂದ ಹಂಪಿನಗರದ ಗ್ರಂಥಾಲಯದ ಗ್ರಂಥಾಂಗಣದಲ್ಲಿ ಪ್ರತಿ ತಿಂಗಳ ಹನ್ನೊಂದರಂದು ನಡೆಯುವ ಓದಿನರಮನೆಯಲ್ಲಿ ತಿಂಗಳ ಒನಪು ಜನಪ್ರಿಯ ಕಾರ್ಯಕ್ರಮಗಳಲ್ಲಿ ಒಂದು. ಸಾಂಸ್ಕೃತಿಕ ವಾತಾವರಣ ಸೃಷ್ಟಿಸುವ ದೃಷ್ಟಿಯಿಂದ ಈ ಕಾರ್ಯಕ್ರಮ ಇದುವರೆಗೆ 42 ತಿಂಗಳುಗಳನ್ನು ಪೂರೈಸಿ ಜನಮೆಚ್ಚುಗೆಗೆ ಪಾತ್ರವಾಗಿದೆ. ಜೋಕುಮಾರಸ್ವಾಮಿ ನಾಟಕ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳು ಟ್ರಸ್ಟ್‌ನ ಪಟ್ಟಿಯಲ್ಲಿ ಸೇರಿ ಅಲ್ಲಿ ಕಲಾರಸಿಕರ ಮನಸೂರೆಗೊಂಡಿದೆ. ಈವರೆಗೆ ನಾಡಿನ ಹೆಸರಾಂತ ಲೇಖಕರ 80 ಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದೆ. ಡಾ.ಎಲ್.ಬಸವರಾಜು ಅವರ 12 ಕೃತಿಗಳು ಮುಜಾಫರ್ ಅಸ್ಸಾದಿ ಮುಂತಾದವರ ಕೃತಿಗಳನ್ನು ಮುದ್ದುಶ್ರೀ ಗ್ರಂಥಮಾಲೆಯಲ್ಲಿ ಪ್ರಕಟಗೊಳಿಸಿದೆ.

****

## ಬಂಜಾರ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಕಾಡೆಮಿ(ರಿ.)



**ಸಂಪರ್ಕ: ಶ್ರೀಮತಿ ಎನ್.ವರಲಕ್ಷ್ಮಿ ಪ್ರಧಾನ ಕಾರ್ಯದರ್ಶಿ**

**ಮೊ: 9448462620/ 9448617660**

**Email:dr.govindaswamy@gmail.com**

ದೇಶದಲ್ಲಿರುವ 612 ಕ್ಕೂ ಹೆಚ್ಚಿನ ಬುಡಕಟ್ಟುಗಳಲ್ಲಿ ಬಂಜಾರ (ಲಂಬಾಣಿ) ಅಲೆಮಾರಿ ಬುಡಕಟ್ಟು ಭಿನ್ನವಾದುದು. ಕ್ರಿ.ಪೂ. 3 ನೇ ಶತಮಾನಕ್ಕೂ ಹಿಂದಿನಿಂದಲೇ ಸಾಂಸ್ಕೃತಿಕವಾಗಿ ಅತ್ಯಂತ ಶ್ರೀಮಂತ ಪರಂಪರೆಯನ್ನು ಹೊಂದಿದ್ದು, ಇಂದಿಗೂ ಉಳಿಸಿಕೊಂಡು ಬಂದಿದೆ. ವೀರರು, ಶೂರರು, ವ್ಯಾಪಾರಿಗಳು, ವಚನ ಪಾಲಿಸುವ ನಿಷ್ಠಾವಂತರಾಗಿ, ಬಾಳಿದ ಈ ಜನವರ್ಗ

ಆಧುನೀಕರಣದ ಪ್ರಭಾವಕ್ಕೆ ಮತ್ತು ವರ್ಣ ವ್ಯವಸ್ಥೆಯಲ್ಲಿ ಸಿಲುಕಿದೆ. ಇಂದು ಈ ಜನಸಮುದಾಯವು ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಮತ್ತು ರಾಜಕೀಯವಾಗಿ ತನ್ನ ಅಸ್ಥಿತ್ವ ಉಳಿಸಿಕೊಳ್ಳಲು ಹೆಣಗುತ್ತಿದೆ, ಹೆತ್ತ ಮಕ್ಕಳನ್ನೇ ಮಾರಿ ಬದುಕುವ ದಯನೀಯ ಸ್ಥಿತಿಯಲ್ಲಿದೆ. ಪಾರಂಪರಿಕ ಜ್ಞಾನ, ತಾಂತ್ರಿಕ ವಿಧಾನವು, ಆಧುನಿಕ ಸಮಾಜದಲ್ಲಿ ಅಪ್ರಸ್ತುತವಾಗಿ, ಈ ಸಮುದಾಯದ ನೆರವಿಗೆ ಬರುತ್ತಿಲ್ಲ.

ಒಂದೆಡೆ ಜನಮಂಗಳ ಗ್ರಹಕ್ಕೆ ವಲಸೆ ಹೋಗುತ್ತಿದ್ದರೆ, ಇನ್ನೊಂದೆಡೆ ಈ ಬುಡಕಟ್ಟುಗಳು ಹೊತ್ತಿನ ತುತ್ತಿನ ಚೀಲ ತುಂಬಿಸಿಕೊಳ್ಳಲು ನಗರ, ಪಟ್ಟಣಗಳಿಗೆ ನಿರಂತರ ವಲಸೆ ಹೋಗುತ್ತಿರುವುದು ವಿಪರ್ಯಾಸ. ದೇಶದಲ್ಲಿ ಸಮಾನತೆ, ನೀತಿಯ ಮಟ್ಟ, ಭಾಷೆಯ ಉಳಿವು, ಸತ್ಯ-ಪ್ರೇಮ, ಆದರ್ಶ ಕಲ್ಪನೆ, ಧರ್ಮಶ್ರದ್ಧೆ, ಅಲ್ಲದೆ, ವ್ಯಕ್ತಿತ್ವ ವಿಕಾಸ ಹೊಂದಲು ಮತ್ತು ಈ ಜನಾಂಗಗಳು ಸಾಂಸ್ಕೃತಿಕವಾಗಿ ಸಂಘಟಿತರಾಗಲು, ಸರ್ವ ವಿಧದಲ್ಲಿ ಅಲೆಮಾರಿ, ಬುಡಕಟ್ಟು ಜನರು ಹಾಗೂ ಎಲ್ಲ ವರ್ಗದ ಬಡವರ ಪ್ರಗತಿಯ ಉದ್ದೇಶದೊಂದಿಗೆ ಬಂಜಾರ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಕಾಡೆಮಿ ಕಲಾ ಪ್ರಕಾರಗಳ ಪ್ರದರ್ಶನ, ಸಂಸ್ಕೃತಿ, ಭಾಷೆ, ಆಚರಣೆಗಳ ಪ್ರದರ್ಶನ ಏರ್ಪಡಿಸುತ್ತಾ ಬರುತ್ತಿದೆ. ಈ ಜನಾಂಗಗಳಲ್ಲಿನ ಕಲೆ, ಸಾಹಿತ್ಯ, ಶ್ರೇಷ್ಠ ಸಂಸ್ಕೃತಿ, ಕಲೆ, ಅಳಿವಿನ ಅಂಚಿನಲ್ಲಿದೆ. ಇವುಗಳನ್ನು ಉಳಿಸಲು ಕ್ರಮ ಮತ್ತು ಅವುಗಳನ್ನು ಅಕ್ಷರ ಹಾಗೂ ದೃಶ್ಯರೂಪದಲ್ಲಿ ದಾಖಲಿಸುವ, ಸಂಗ್ರಹಿಸುವ ಮತ್ತು ಪ್ರದರ್ಶಿಸುವ ಉದ್ದೇಶ ಹಾಗೂ ಈ ಜನವರ್ಗಕ್ಕೆ ಆರ್ಥಿಕ, ಶೈಕ್ಷಣಿಕ ಸದೃಢತೆ ತಂದು ಆತ್ಮವಿಶ್ವಾಸದೊಂದಿಗೆ "ಓಡುವ ಕಲ್ಲಿಗೆ ತೂಕ ಇಲ್ಲ"ದಂತೆ ಇರುವ ಇವರನ್ನು ಮುಖ್ಯವಾಹಿನಿಗೆ ತರುವ ಏಕೈಕ ಮಹೋನ್ನತ ಉದ್ದೇಶದಿಂದ ಅಕಾಡೆಮಿಯು ಕಳೆದ 20 ವರ್ಷಗಳಿಂದಲೂ ಕೆಲಸ ಮಾಡುತ್ತಿದೆ.

'ಬಂಜಾರ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಕಾಡೆಮಿ'ಯು ಈ ನಿಟ್ಟಿನಲ್ಲಿ ರಾಮನಗರ ಜಿಲ್ಲೆಯ ಅಮ್ಮನಪುರದ ರಂಗನಟ, ನಿರ್ದೇಶಕ, ನಾಟಕಕಾರ, ತರಬೇತುದಾರ, ರಂಗತಜ್ಞ, ಸಾಮಾಜಿಕ ಚಿಂತಕ ಹಾಗೂ ರಂಗ ವಿಮರ್ಶಕರಾದ ಡಾ.ಎ.ಆರ್.ಗೋವಿಂದಸ್ವಾಮಿ ಮಾರ್ಗದರ್ಶನದಲ್ಲಿ ಕೆಲಸ ನಿರ್ವಹಿಸಿಕೊಂಡು ಬಂದಿದೆ. ಹಳ್ಳಿ, ಪಟ್ಟಣ, ರಾಜ್ಯ, ರಾಷ್ಟ್ರಮಟ್ಟದ ಸಾಂಸ್ಕೃತಿಕ ಉತ್ಸವಗಳು, ನಾಟಕ ಹಾಗೂ ಕಲಾ ಪ್ರದರ್ಶನ, ರಂಗತರಬೇತಿ, ಬಡ ವಿದ್ಯಾರ್ಥಿಗಳಿಗೆ ಪುರಸ್ಕಾರ, ಮಕ್ಕಳಿಗೆ ತರಬೇತಿ, ಅರಿವಿನ ಕಾರ್ಯಕ್ರಮ, ವಿಚಾರ ಸಂಕಿರಣ, ನಾಟಕ

ಕಮ್ಮಟ ಜಾನಪದ ತರಬೇತಿ, ಅಂಗವಿಕಲರ ಕಲ್ಯಾಣ ಕಾರ್ಯಕ್ರಮಗಳು ಪ್ರತಿವರ್ಷ ಪ್ರತಿಭಾ ಪುರಸ್ಕಾರ, ಗ್ರಾಮೀಣ ಪ್ರದರ್ಶನಕಲಾ ತರಬೇತಿ ಶಿಬಿರಗಳ ಆಯೋಜನೆ ಮತ್ತು ಪ್ರದರ್ಶನಗಳನ್ನು ನಡೆಸುತ್ತಾ ಬರುತ್ತಿದೆ.

ಅಕಾಡೆಮಿಯಲ್ಲಿ ಬಹುತೇಕ ಪದವಿಧರರು ಹಾಗೂ ಸದಸ್ಯರು ನಾಟಕ ಹಾಗೂ ಸಾಹಿತ್ಯದಲ್ಲಿ ಡಿಪ್ಲೋಮ, ಪದವಿ, ಸ್ನಾತಕೋತ್ತರ ಪದವಿ ಮತ್ತು ಡಾಕ್ಟರೇಟ್ ಗಳಿಸಿದವರಾಗಿದ್ದಾರೆ.

1. ಅಕಾಡೆಮಿಯು ಅಲೆಮಾರಿ–ಬುಡಕಟ್ಟು ಜನರಲ್ಲಿನ ಮಕ್ಕಳ ಮಾರಾಟ ಕುರಿತು ರಂಗತಜ್ಞ ಡಾ.ಎ.ಆರ್.ಗೋವಿಂದಸ್ವಾಮಿ ಅವರಿಂದ "ಬೆವರಲ್ಲೇ ಬೆಳಕು" ನಾಟಕ ರಚಿಸಿ ರಾಜ್ಯದಾದ್ಯಂತ ಪ್ರದರ್ಶನಗಳನ್ನು ಏರ್ಪಡಿಸಿದೆ.
2. ಡಾ.ಎ.ಆರ್.ಗೋವಿಂದಸ್ವಾಮಿ ಅವರ ರಚನೆಯ ವಿದ್ಯುತ್ ಅಪಘಾತ ಕುರಿತ 'ವಿದ್ಯುದ್ದಾಲಿಂಗನ' ನಾಟಕವನ್ನು ಪ್ರಯೋಗಿಸಿದೆ.
3. ಕೇಂದ್ರ ಸಂಗೀತ ಮತ್ತು ನಾಟಕ ವಿಭಾಗದ ಸಹಯೋಗದಲ್ಲಿ 'ವಾರ್ತಾ' ಇಲಾಖೆಯ ಸಹಯೋಗದಲ್ಲಿ ಇತರೆ ರಂಗತಂಡಗಳ ಸಹಯೋಗದಲ್ಲಿ ಹಲವಾರು ಬಡ ಜನರಿಗೆ ಪ್ರಗತಿಯ ಅರಿವು ಮೂಡಿಸುವ ನಾಟಕ, ಬೀದಿನಾಟಕ ಹಾಗೂ ವಿಚಾರ ಸಂಕಿರಣಗಳನ್ನು ನಡೆಸುತ್ತಾ ಬಂದಿದೆ.
4. 1999 ರಿಂದ 2003 ರ ಅವಧಿಯಲ್ಲಿ ರಾಮನಗರ ಜಿಲ್ಲೆಯ ಬಹುತೇಕ ಹಳ್ಳಿಗಳಲ್ಲಿ ಹೆಣ್ಣುಮಕ್ಕಳ ಬಗ್ಗೆ, ಏಡ್ಸ್ ಜಾಗೃತಿ,ಆರೋಗ್ಯ, ಶುಚಿತ್ವ, ಚುನಾವಣೆ ಅರಿವು ಮುಂತಾದ ಕುರಿತು ಬೀದಿ ನಾಟಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ.
5. ಚಲನಚಿತ್ರ ತರಬೇತಿ ಸಂಸ್ಥೆಗಳು, ರಂಗಶಿಕ್ಷಣ ಸಂಸ್ಥೆ, ವಿಶ್ವವಿದ್ಯಾಲಯಗಳು, ಜಾನಪದ ವಿಶ್ವವಿದ್ಯಾಲಯ, ಸಂಗೀತ ಮತ್ತು ಪ್ರದರ್ಶನ ಕಲೆಗಳ ವಿಶ್ವವಿದ್ಯಾಲಯ, ರಂಗಾಯಣ, ರಂಗಶಿಕ್ಷಣ ಕೇಂದ್ರ, ವಿಶ್ವಕನ್ನಡ ಸಮ್ಮೇಳನ, ಭಾರತ ಭವನ ಭೂಪಾಲ್, ವಿವಿಧ ಸಂಘ–ಸಂಸ್ಥೆ, ರಾಜ್ಯ ಹಾಗೂ ಸರ್ಕಾರದ ಇಲಾಖೆಗಳಿಗೆ ಮಾನವ ಸಂಪನ್ಮೂಲ ಅಭಿವೃದ್ಧಿ ತರಬೇತಿ, ರಾಷ್ಟ್ರೀಯ ನಾಟಕ ಶಾಲೆ, ವಿಶ್ವವಿದ್ಯಾಲಯಗಳು, ನಾಟಕ ಅಕಾಡೆಮಿ, ಪತ್ರಿಕಾ ಬರಹ, ರಂಗವಿಮರ್ಶೆ, ಉಪನ್ಯಾಸಕ್ಕಾಗಿ ಬಂಜಾರ ಅಕಾಡೆಮಿ

ವತಿಯಿಂದ ರಂಗತಜ್ಞರನ್ನು, ರಂಗಸಂಪನ್ಮೂಲ ವ್ಯಕ್ತಿಗಳನ್ನು ಕಳುಹಿಸಿಕೊಡಲಾಗಿದೆ.

6. ಬಂಜಾರ ಅಕಾಡೆಮಿಗಾಗಿ ಬಂಜಾರ ಸಂಸ್ಕೃತಿ ಹಾಗೂ ಆಚರಣೆ ಕುರಿತ ಸಾಕ್ಷ್ಯಚಿತ್ರವನ್ನು ಡಾ.ಎ.ಆರ್.ಗೋವಿಂದಸ್ವಾಮಿ ಅವರು ನಿರ್ಮಿಸಿದ್ದಾರೆ.

7. ಬಂಜಾರ ಅಕಾಡೆಮಿ ಪ್ರಥಮ ಬಾರಿಗೆ ರಾಷ್ಟ್ರೀಯ ಬಂಜಾರ ಸಾಹಿತ್ಯ, ಸಾಂಸ್ಕೃತಿಕ ಸಮ್ಮೇಳನ ಹಾಗೂ ನಾಟಕೋತ್ಸವ ಆಯೋಜಿಸಿದೆ.

8. ಬಂಜಾರ ಭಾಷೆಯ ಪ್ರಥಮ ನಾಟಕ ಪ್ರಯೋಗಿಸಿದೆ.

## ಬಂಜಾರ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಕಾಡೆಮಿ ಪ್ರಯೋಗಿಸಿದ ಪ್ರಮುಖ ನಾಟಕ ಪ್ರದರ್ಶನಗಳು

| ವರ್ಷ | ನಾಟಕ | ಲೇಖಕ | ನಿರ್ದೇಶನ |
|---|---|---|---|
| 1999 | ಪ್ರತ್ಯಕ್ಷ ಪ್ರಮಾಣ | ಪರ್ವತವಾಣಿ | ಡಾ.ಎ.ಆರ್.ಗೋವಿಂದಸ್ವಾಮಿ |
| 2000 | ಆನಿ ಬಂತಾನಿ | -- | ಡಾ.ಎ.ಆರ್.ಗೋವಿಂದಸ್ವಾಮಿ |
| 2003 | ಸಂಕ್ರಾಂತಿ | ಪಿ. ಲಂಕೇಶ್ | ಡಾ.ಎ.ಆರ್.ಗೋವಿಂದಸ್ವಾಮಿ |
| 2005 | ಕನಸಿನವರು | ನ. ಶ್ರೀನಿವಾಸ್ | ಡಾ.ಎ.ಆರ್.ಗೋವಿಂದಸ್ವಾಮಿ |
| 2008 | ಮಕ್ಕಳ ನ್ಯಾಯ | ಡಾ.ಎ.ಆರ್.ಗೋವಿಂದಸ್ವಾಮಿ | ಮಾಲತೇಶ ಬಡಿಗೇರ |
| 2009 | ಬೆವರಲ್ಲೇ ಬೆಳಕು | ಡಾ.ಎ.ಆರ್.ಗೋವಿಂದಸ್ವಾಮಿ | ಡಾ.ಎ.ಆರ್.ಗೋವಿಂದಸ್ವಾಮಿ |
| 2010 | ಗೋಕರ್ಣದ ಗೌಡಶಾನಿ | ಚಂಪ | ಅಶೋಕ ಬಾದರದಿನ್ನಿ |
| 2011 | ಖಾಡೇರ್ ಬೋಟಿ ಭೋಡೋ(ಪ್ರಥಮ ಲಂಬಾಣಿ ಭಾಷೆ ನಾಟಕ) | ಪರಿಕಲ್ಪನೆ: ಡಾ.ಎ.ಆರ್.ಗೋವಿಂದಸ್ವಾಮಿ ಸತೀಶಗಟ್ಟಿ | ಡಾ.ಎ.ಆರ್.ಗೋವಿಂದಸ್ವಾಮಿ |
| 2012 | ಒಡಲಾಳ (ಕನ್ನಡ ಹಾಗೂ ಲಂಬಾಣಿ ಭಾಷೆ ಯಲ್ಲಿ) | ದೇವನೂರುಮಹದೇವ (ಸಣ್ಣಕತೆ) | ನರೇಶ ಮಯ್ಯ |
| 2014 | ರಾಮಧಾನ್ಯ | ಕನಕದಾಸ | ಕೆ.ಎಸ್.ಡಿ.ಎಲ್.ಚಂದ್ರು |

## ಬೀದಿ ನಾಟಕಗಳು / ಆಕಾಶವಾಣಿ ನಾಟಕಗಳು

| ಕ್ರ.ಸಂ. | ನಾಟಕ | ಲೇಖಕ | ನಿರ್ದೇಶನ |
|---|---|---|---|
| 1. | ಗುರುಶಿಷ್ಯರು | ಡಾ. ಎ.ಆರ್. ಗೋ.ಸ್ವಾಮಿ | ಡಾ. ಎ.ಆರ್. ಗೋವಿಂದಸ್ವಾಮಿ |
| 2. | ರಾಷ್ಟ್ರೀಯ ನಾಟಕ ರಸತಳ | ಡಾ. ಎ.ಆರ್. ಗೋ.ಸ್ವಾಮಿ | ಡಾ. ಎ.ಆರ್. ಗೋವಿಂದಸ್ವಾಮಿ |
| 3. | ಇದು ಸರಿಯೇ? | ಡಾ. ಎ.ಆರ್. ಗೋ.ಸ್ವಾಮಿ | ಡಾ. ಎ.ಆರ್. ಗೋವಿಂದಸ್ವಾಮಿ |
| 4. | ಸುಳಿ | ಡಾ. ಎ.ಆರ್. ಗೋ.ಸ್ವಾಮಿ | ಡಾ. ಎ.ಆರ್. ಗೋವಿಂದಸ್ವಾಮಿ |
| 5. | ವಿದ್ಯುದ್ದಾಲಿಂಗನ | ಡಾ. ಎ.ಆರ್. ಗೋ.ಸ್ವಾಮಿ | ಆಕಾಶವಾಣಿ |
| 6. | ನಮ್ಮ ಅಂಗಳ | ವರಲಕ್ಷ್ಮೀ. ಎನ್. | ಡಾ. ಎ.ಆರ್. ಗೋವಿಂದಸ್ವಾಮಿ |
| 7. | ನಮ್ಮ ಚುನಾವಣೆ | ಡಾ. ಎ.ಆರ್. ಗೋ.ಸ್ವಾಮಿ | ವರಲಕ್ಷ್ಮೀ. ಎನ್. |
| 8. | ಹೆಣ್ಣುಶಿಶು | ಡಾ. ಎ.ಆರ್. ಗೋ.ಸ್ವಾಮಿ | ವರಲಕ್ಷ್ಮೀ. ಎನ್. |

## ನಾಟಕ ಶಿಬಿರಗಳು/ಕಮ್ಮಟಗಳು:

1. ಸತತ ನಾಲ್ಕು ವರ್ಷಗಳಿಂದ ನಾಟಕ ತರಬೇತಿ ಶಿಬಿರ ಹಾಗೂ ತರಬೇತಿಯನ್ನು ಆಯೋಜಿಸಲಾಗಿದೆ.

2. ಕರ್ನಾಟಕ ನಾಟಕ ಅಕಾಡೆಮಿ ವತಿಯಿಂದ ರಾಮನಗರದ ಅಮ್ಮನಪುರದಲ್ಲಿ ಒಂದು ತಿಂಗಳ ನಾಟಕ ತರಬೇತಿ ಶಿಬಿರ, ಶಿಬಿರದ ನಿರ್ದೇಶನ– ಡಾ.ಎ.ಆರ್.ಗೋವಿಂದಸ್ವಾಮಿ, ನಾಟಕ ಪ್ರಯೋಗ: ಓಡಲಾಳ.

   ನಾಟಕ ನಿರ್ದೇಶನ –ನರೇಶಮ್ಮಯ್ಯಾ

## ಅಕಾಡೆಮಿಯ ರಾಷ್ಟ್ರೀಯ ಉತ್ಸವಗಳು ಹಾಗೂ ಇತರೆ

1. ದೇಶದಲ್ಲಿಯೇ ಪ್ರಥಮಬಾರಿಗೆ 26, 27 ಜೂನ್ 2010 ರಲ್ಲಿ ಬೆಂಗಳೂರಿನಲ್ಲಿ "ರಾಷ್ಟ್ರಮಟ್ಟದ ಲಂಬಾಣಿ ಬುಡಕಟ್ಟು ಪ್ರದರ್ಶನ ಕಲೆಗಳ ಉತ್ಸವ ಹಾಗೂ ನಾಟಕ ಪ್ರದರ್ಶನ ಹಾಗೂ ಪ್ರಶಸ್ತಿ ಪುರಸ್ಕಾರ ಮತ್ತು ವಿಚಾರ ಸಂಕಿರಣ" ಆಯೋಜನೆ ಮಾಡಲಾಗಿದೆ.

2. 18 ಫೆಬ್ರವರಿ 2011 ರಂದು ರವೀಂದ್ರ ಕಲಾ ಕ್ಷೇತ್ರದಲ್ಲಿ "ಬಂಜಾರ ಪ್ರದರ್ಶನ ಕಲಾ ಉತ್ಸವ–2011 ಹಾಗೂ ನಾಟಕ"ಗಳ ಪ್ರದರ್ಶನ ಮಾಡಲಾಗಿದೆ.
3. 2012ರಲ್ಲಿ ಬಂಜಾರರ ರಾಷ್ಟ್ರಮಟ್ಟದ ಪ್ರದರ್ಶನ ಕಲಾ ಉತ್ಸವ ಹಾಗೂ ಸಾಹಿತ್ಯ ಸಮ್ಮೇಳನ ಆಯೋಜಿಸಿದೆ.
4. ಬಂಜಾರರ ಪ್ರಥಮ ಚಿತ್ರಕಲಾ ಸ್ಪರ್ಧೆ ಆಯೋಜನೆ
5. 2015ರಲ್ಲಿ ಬಂಜಾರ ಪ್ರದರ್ಶನ ಕಲಾ ಹಬ್ಬ
6. 2016ರಲ್ಲಿ ಬಂಜಾರರ ಪ್ರದರ್ಶನ ಕಲಾ ನಾಡಹಬ್ಬ
7. ಬಂಜಾರ ಕಲೆಗಳು ಹಾಗೂ ನಾಟಕ ತರಬೇತಿ ಕಮ್ಮಟಗಳನ್ನು ಪ್ರತಿ ವರ್ಷ ಆಯೋಜಿಸುತ್ತಾ ಬಂದಿದೆ.

**ಬಂಜಾರ ಅಕಾಡೆಮಿ ಸಂಪನ್ಮೂಲ ವ್ಯಕ್ತಿಗಳನ್ನು ನಿಯೋಜಿಸಿರುವುದು,**

1. ವಿಶ್ವಕನ್ನಡ ಸಮ್ಮೇಳನ–2001 ಬೆಳಗಾವಿ (ಏಳು ಜನ ಕಲಾವಿದರ ಸಾಕ್ಷ್ಯಚಿತ್ರಕ್ಕೆ ಸಾಹಿತ್ಯ ಒದಗಿಸಿ, ದಲಿತ ಸಂಸ್ಕೃತಿ ಅನನ್ಯತೆ ವಿಷಯದ ವಿಚಾರ ಸಂಕಿರಣದಲ್ಲಿ ಪ್ರಬಂಧ ಮಂಡನೆ)
2. ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ ನಾಟಕ ಡಿಪ್ಲೋಮ, ಬಿ.ಎ. ನಾಟಕ, ಎಂ.ಎ. ನಾಟಕ, ಎಂ.ಫಿಲ್, ಪಿಎಚ್.ಡಿ ನಾಟಕ ಪದವಿಗಳ ಪಠ್ಯಕ್ರಮ ರಚನೆ.
3. ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ರೂಪುರೇಷೆ ರಚನೆ.
4. ಎನ್.ಸಿ.ಸಿ.ಕ್ಯಾಂಪ್, ಬೆಂ.ವಿ.ವಿ.–2005.
5. ಕೇಂದ್ರೀಯ ಭಾಷಾ ಸಂಸ್ಥಾನಕ್ಕಾಗಿ "ಬಿ.ವಿ.ಕಾರಂತರ ರಂಗಭೂಮಿ" ಸಾಕ್ಷ್ಯಚಿತ್ರಕ್ಕೆ ಸಾಹಿತ್ಯ ಒದಗಿಸಲಾಗಿದೆ.
6. ಭಾರತ ಸರ್ಕಾರದ ಮಾನವ ಸಂಪನ್ಮೂಲ ಕೇಂದ್ರ ದೆಹಲಿಗಾಗಿ "ಕರ್ನಾಟಕ ಸಾಂಪ್ರಾದಾಯಿಕ ಜಾನಪದ ಕಲಾ ಪ್ರಕಾರಗಳು ಮತ್ತು ಅವುಗಳ ಸಾಮಾಜಿಕ ಕಳಕಳಿ" ಪ್ರಬಂಧ ರಚಿಸಿ ಸಲ್ಲಿಸಲಾಗಿದೆ.

7. ವಿಚಾರ ಸಂಕಿರಣ– ಭಾರತಭವನ, ಭೂಪಾಲ್

8. ಕೇಂದ್ರ ಸಂಗೀತ ಮತ್ತು ನಾಟಕ ವಿಭಾಗ, ಬೆಂಗಳೂರು. ದಕ್ಷಿಣ ಭಾರತದ ಭಾಷೆಗಳಲ್ಲಿ ಆದ ಧ್ವನಿ ಬೆಳಕು ಕಾರ್ಯಕ್ರಮದಲ್ಲಿ ಅಭಿನಯ, ನೇಪಥ್ಯ, ನಿರ್ದೇಶನ ಸಹಾಯಕ ನಿರ್ದೇಶಕರಾಗಿ ಸೇವೆ.

9. ರಾಷ್ಟ್ರೀಯ ನಾಟಕ ಶಾಲೆ (1996–97, 1997–98) ಸೆನ್ಸಾರ್ ಸಮಿತಿ, ಆಕಾಶವಾಣಿ, ಪ್ರಮುಖ ಟೆಲಿವಿಷನ್‌ಗಳು, ದೂರದರ್ಶನ ಕೇಂದ್ರ, ಕರ್ನಾಟಕ ನಾಟಕ ಅಕಾಡೆಮಿ, ಬೆಂ.ವಿ.ವಿ., ಉಸ್ಮಾನಿಯ ವಿ.ವಿ., ಪದರ್ಶನಕಲಾ ವಿಭಾಗ, ಕರ್ನಾಟಕ, ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಪ್ರಮುಖ ದಿನಪತ್ರಿಕೆಗಳು, ರಂಗಪತ್ರಿಕೆಗಳು, ಮಾಸ ಪತ್ರಿಕೆಗಳು, ಮುಂತಾದವುಗಳಿಗೆ ರಂಗಸಂಪನ್ನರನ್ನು ನಿಯೋಜಿಸಿ, ವಿಚಾರ ಸಂಕೀರ್ಣ, ರಂಗ ತರಬೇತಿ, ರಂಗಸಾಹಿತ್ಯ, ರಂಗವಿಮರ್ಶೆ, ನಾಟಕಾಭಿನಯ, ಮುಂತಾದ ಕೆಲಸಗಳೊಂದಿಗೆ ರಂಗಭೂಮಿಯನ್ನು ಜೀವಂತವಾಗಿಡಲು ಅಕಾಡೆಮಿಯು ಕೆಲಸ ನಿರ್ವಹಿಸಿಕೊಂಡು ಬರುತ್ತಿದೆ.


10. ಭಾರತೀಯ ಅಂತರ ವಿಶ್ವವಿದ್ಯಾಲಯ ರಂಗ ಸ್ಪರ್ಧೆಗಳಲ್ಲಿ ಭಾಗಿಯಾಗಿ ಪ್ರಶಸ್ತಿ.

11. ಅಕ್ಷರ ಮಾಧ್ಯಮಗಳು, ದೃಶ್ಯ ಮಾಧ್ಯಮಗಳಿಗೆ ರಂಗ ಸಂಪನ್ಮೂಲ ವ್ಯಕ್ತಿಗಳಾಗಿ.

ಹೀಗೆ ಬಂಜಾರ ಅಕಾಡೆಮಿಯು ಮುಖ್ಯವಾಹಿನಿಯ ಸಾಂಸ್ಕೃತಿಕ ಕ್ಷೇತ್ರ ಅದರಲ್ಲೂ ರಂಗಭೂಮಿಯಲ್ಲಿ ನಿರಂತರವಾಗಿ ತನ್ನನ್ನು ತೊಡಗಿಸಿಕೊಂಡು ಕೆಲಸ ಮಾಡುತ್ತಾ ಬರುತ್ತಿದೆ.



ಲಂಬಾಣಿ ನಾಟಕದ ದೃಶ್ಯ



ಮಕ್ಕಳ ಮಾರಾಟ ಕುರಿತ ನಾಟಕ– 'ಬೆವರಲ್ಲೇ ಬೆಳಕು'
ರಚನೆ: ಡಾ.ಎ.ಆರ್.ಗೋವಿಂದಸ್ವಾಮಿ, ನಿರ್ದೇಶನ: ಮಾಲತೇಶ ಬಡಿಗೇರ





ಬಂಜಾರ ಅಕಾಡೆಮಿ ಪ್ರಯೋಗಿಸಿದ
ನಾಟಕದ ದೃಶ್ಯ



ಮಕ್ಕಳ ನ್ಯಾಯ
ನಾಟಕದ ದೃಶ್ಯ



ಬಂಜಾರ ಸಾಂಪ್ರದಾಯಿಕ ಆಚರಣೆಯ ಪ್ರದರ್ಶನದ ದೃಶ್ಯ




ಲಂಬಾಣಿ ನಾಟಕದ ದೃಶ್ಯ



ಲಂಬಾಣಿ ಭಾಷೆಯ ಮೊದಲ ನಾಟಕದ ದೃಶ್ಯ
ಪರಿಕಲ್ಪನೆ: ಡಾ.ಎ.ಆರ್.ಗೋವಿಂದಸ್ವಾಮಿ





ತಂಡದ ಬಾಲ ಕಲಾವಿದರು

## ಶ್ರೀಮತಿ ಎನ್.ವರಲಕ್ಷ್ಮಿ



ನಟಿ, ರಂಗಸಂಘಟಕಿ
ಅಮ್ಮನಪುರ, ಕೈಲಾಂಚ ಹೋಬಳಿ, ರಾಮನಗರ ಜಿಲ್ಲೆ
ಮೊ:9448617660/9900242685 varalakshmi.n1978@gmail.com

ಶ್ರೀಮತಿ ಎನ್.ವರಲಕ್ಷ್ಮಿ ಅವರು ರಮನಗರ ಜಿಲ್ಲೆಯ ಕೈಲಾಂಚ ಹೋಬಳಿಯ ಅಮ್ಮನಪುರದ ಹಾಸ್ಟಲ್ ವಾರ್ಡನ್ ಎ.ಆರ್.ನಾಗರಾಜು ಅವರ ಪುತ್ರಿ. ಇವರು ಬಿ.ಕಾಂ. ಪದವಿಯ ಜೊತೆಗೆ ಮಲ್ಲೇಶ್ವರದ ಎಂ.ಇ.ಎಸ್. ರಂಗಶಾಲೆಯಿಂದ ಎರಡು ವರ್ಷಗಳ ರಂಗ ಡಿಪ್ಲೋಮ ಪಡೆದಿದ್ದಾರೆ. 'ಬಂಜಾರ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಕಾಡೆಮಿ'ಯ ಪ್ರಧಾನ ಕಾರ್ಯದರ್ಶಿಯಾಗಿ ಗ್ರಾಮ, ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಅನೇಕ ನಾಟಕ ಉತ್ಸವ ಹಾಗೂ ಕಲಾ ಉತ್ಸವ ಹಾಗೂ ನಾಟಕ ಪ್ರಯೋಗ, ನಮ್ಮ ಅಂಗಳ ಮುಂತಾದ ಬೀದಿನಾಟಕಗಳ ರಚನೆ, ರಂಗ ಸಂಘಟನೆ, ರಂಗ ತರಬೇತಿ ಮುಂತಾದ ರಂಗಭೂಮಿ ಸಂಬಂಧಿ ಕೆಲಸಗಳನ್ನು ನಿರ್ವಹಿಸುತ್ತಾ ಬರುತ್ತಿದ್ದಾರೆ.




**'ನೆನೆಯೋ ಆ ಜನವ'**
**ಬೃಹತ್ ನಾಟಕದ ಭಾರತಮಾತೆ ಪಾತ್ರದಲ್ಲಿ**

ಇವರು ಅಭಿನಯಿಸಿದ ಪ್ರಮುಖ ನಾಟಕಗಳೆಂದರೇ: 'ಹೇರಾಮ್' (ನಿ: ಸುನಿಲ್‌ಕುಮಾರ್ ಸಿಂಗ್), ಕೇಂದ್ರ ಸಂಗೀತ ಮತ್ತು ನಾಟಕ ವಿಭಾಗದ ಬೃಹತ್ ನಾಟಕ 'ನೆನೆಯೋ ಆ ಜನವ' 'ಕರ್ನಾಟಕ ವೈಭವ' ಮುಂತಾದ ನಾಟಕಗಳಲ್ಲಿ ಭಾರತಮಾತೆ, ಚೆನ್ನಮ್ಮರಾಣಿ, ಕ್ರೈಸ್ತ ಸನ್ಯಾಸಿನಿ, ಗಾಂಧಿಸೊಸೆ ಆಭ ಮುಂತಾದ ಪಾತ್ರಗಳನ್ನು ಅಭಿನಯಿಸಿದ್ದಾರೆ. ನಿರಂತರ ನಾಟಕ ಅಭಿನಯದಿಂದ ಗಿನ್ನೀಸ್ ದಾಖಲಾದ ನಂದನ ರಂಗ ತಂಡದ ಸದಸ್ಯರಾಗಿದ್ದಾರೆ. ಹೀಗೆ ಸಾಂಸ್ಕೃತಿಕವಾಗಿ ಹಾಗೂ ಸಾಮಾಜಿಕವಾಗಿ ಕೆಲಸ ಮಾಡುತ್ತಿದ್ದಾರೆ.

****

## ಜಿಲ್ಲಾ ಬಂಜಾರ (ಲಂಬಾಣಿ) ಸಾಂಸ್ಕೃತಿಕ ಸೇವಾ ಸಂಘ, ರಾಮನಗರ

## ಸಂಪರ್ಕ: ಆರ್.ಮೂರ್ತಿನಾಯಕ್ ಜಿಲ್ಲಾಧ್ಯಕ್ಷರು,



**ಮೊ: 9740282367/9449533212**

ಬಂಜಾರ ಸಾಂಸ್ಕೃತಿಕ ಸೇವಾ ಸಂಘವು ಲಂಬಾಣಿ ತಾಂಡ ಹಾಗೂ ರಾಮನಗರದಲ್ಲಿ ಪೌರಾಣಿಕ ನಾಟಕಗಳನ್ನು ಪ್ರಯೋಗಿಸುತ್ತಿದೆ. ಶ್ರೀ ರೇವಣ ಸಿದೇಶ್ವರಸ್ವಾಮಿ ಜಾತ್ರಾಮಹೋತ್ಸವ ಹಾಗೂ ನಗರದಲ್ಲಿ ಶ್ರೀ ಕೃಷ್ಣ ಸಂಧಾನ, ಬೆವರಲ್ಲೇ ಬೆಳಕು, ಹೆಣ್ಣು ಶಿಶು ಮುಂತಾದ ನಾಟಕಗಳನ್ನು ಪ್ರಯೋಗಿಸುತ್ತಾ ಜಾನಪದ ಹಾಗೂ ರಂಗ ತರಬೇತಿ ನೀಡುತ್ತಿದೆ.



ಬಂಜಾರ ಬಾಲ ಕಲಾವಿದರಾದ
ಕು.ಆದ್ಮಿನಿ.ಜಿ. ಮತ್ತು ಕು.ಚಲನ.ಜಿ



'ಬೆವರಲ್ಲೇ ಬೆಳಕು'
ಲಂಬಾಣಿಗರ ಶ್ರಮ ಆಧಾರಿತ ನಾಟಕ



ಕೃಷ್ಣ ಪಾತ್ರದಲ್ಲಿ

## ಜೈ ಭುವನೇಶ್ವರಿ ಕಲಾಬಳಗ, ಕೂಟಗಲ್-ಶ್ರೀ ಕೆ.ಶಾಂತಕುಮಾರ್



**ಸಂಪರ್ಕ: 8453396183**

ರಾಮನಗರ ಜಿಲ್ಲೆಯ ಕೂಟಗಲ್ ಹೋಬಳಿಯ ಕೂಟಗಲ್ ಗ್ರಾಮದಲ್ಲಿ ಶ್ರೀ ಕೆ.ಶಾಂತಕುಮಾರ್ ಅವರ ಅಧ್ಯಕ್ಷತೆಯಲ್ಲಿ ಕಳೆದ ಎರಡು ದಶಕಗಳಿಂದ ಪೌರಾಣಿಕ, ಐತಿಹಾಸಿಕ ಮತ್ತು ಸಾಮಾಜಿಕ ನಾಟಕಗಳನ್ನು ಪ್ರಯೋಗಿಸಿದೆ. ಭುವನೇಶ್ವರಿ ಕಲಾ ಬಳಗವು ಪ್ರಮುಖವಾಗಿ ಪ್ರಯೋಗಿಸಿದ ಪೌರಾಣಿಕ ನಾಟಕಗಳೆಂದರೆ, ಕುರುಕ್ಷೇತ್ರ, ದಾನಶೂರಕರ್ಣ, ದೇವೇಂದ್ರನ ಗರ್ವಭಂಗ, ಸಂಪೂರ್ಣ ರಾಮಾಯಣ, ರಕ್ತಭೂಮಿ, ಸಂಭವಾಮಿ ಯುಗೆಯುಗೆ, ಪ್ರಭುದ್ದ ರಾವಣ, ಶನಿಪ್ರಭಾವ, ಕೃಷ್ಣಾರ್ಜುನರ ಯುದ್ಧ, ಶ್ರೀನಿವಾಸ ಕಲ್ಯಾಣ, ಲಂಕೇಶ್ವರ ರಾವಣ, ಪಾಂಡುವಿಜಯ, ರಕ್ತಾಕ್ಷಿ.

**ಐತಿಹಾಸಿಕ ನಾಟಕಗಳು:** ಶ್ರೀಕೃಷ್ಣ ದೇವರಾಯ, ಎಚ್ಚಮ ನಾಯಕ, ನಾಟ್ಯರಾಣಿ ಶಾಂತಲ, ಮಹಿಮಾಪುರ, ಶೀಲ ತಪಸ್ವಿನಿ, ಸಾಮಾಜಿಕ ನಾಟಕಗಳು, ಕೆಂಬನಿ, ತ್ಯಾಗಿ, ದುರಂತ ಸಂತಾನ, ಕೂಗು.



**ನಾಟಕದ ದೃಶ್ಯದಲ್ಲಿ ಕೆ.ಶಾಂತಕುಮಾರ್**

ರಂಗೋತ್ಸವಗಳಲ್ಲೂ ಭಾಗವಹಿಸಿರುವ ತಂಡ ಹಲವಾರು ಪ್ರಶಸ್ತಿ ಫಲಕಗಳನ್ನೂ ಸಹ ಪಡೆದಿದೆ. 1999 ಹಾಗೂ 2009 ಮಂಡ್ಯ ರಾಜ್ಯಮಟ್ಟದ ಪೌರಾಣಿಕ ನಾಟಕ ಸ್ಪರ್ಧೆಯಲ್ಲಿ ಪ್ರಥಮ ಹಾಗೂ ದ್ವಿತೀಯ ಪಾರಿತೋಷಕ ಗಳಿಸಿದೆ. 2001 ರಲ್ಲಿ ಕಾರ್ಮಿಕ ರಂಗೋತ್ಸವ ಪ್ರಥಮ ಪಾರಿತೋಷಕ, ರಂಗಸಜ್ಜಿಕೆ, ಸಂಗೀತಕ್ಕೆ, ಉತ್ತಮ ಪೋಷಕ ನಟನಾಗಿ ಗಳಿಸಿದೆ. 2002 ರಲ್ಲಿ ಮಾಸುಬೇಗೂರ್ ಪೌರಾಣಿಕ ನಾಟಕ ಸ್ಪರ್ಧೆಯಲ್ಲಿ ಪ್ರಥಮ ಪಾರಿತೋಷಕ, ಉತ್ತಮ ನಿರ್ದೇಶನ ಪ್ರಶಸ್ತಿ ಗಳಿಸಿದೆ. 2005–06 ಬಿಇಎಲ್ ಕಾರ್ಮಿಕ ರಂಗೋತ್ಸವದಲ್ಲೂ ಪ್ರಥಮ ಪಾರಿತೋಷಕ, ಅಂಜನೇಯ ಪಾತ್ರಕ್ಕಾಗಿ 2011–12 ವಿಶ್ವ ಕನ್ನಡ ಸಮ್ಮೇಳನದಲ್ಲಿ 'ಕುರುಕ್ಷೇತ್ರ' ನಾಟಕ ಪ್ರಯೋಗ, ಇದು ಈ ಸಂಸ್ಥೆಯ ಹೆಗ್ಗಳಿಕೆಯಾಗಿದೆ.

## ರಾಮನಗರ ತಾಲ್ಲೂಕು ಪೌರಾಣಿಕ ರಂಗ ಕಲಾವಿದರು
### (ಬೇರೆ ಬೇರೆ ತಂಡಗಳಲ್ಲಿ ಅಭಿನಯ)

ಸಿ.ಎಂ.ಲಿಂಗಪ್ಪ, ನಟ, ಮಾಜಿ ಶಾಸಕರು– ಬಿಡದಿ(ಪೌ/ಸಾ)– 9845006976, ಎಸ್.ಟಿ.ಕಾಂತರಾಜು ಪಟೇಲ್, ಡಿ.ಶಿವಣ್ಣ, ನಟ– ಬಾಲಗೇರಿ, ರಾಮನಗರ ಟೌನ್– 45 ವರ್ಷಗಳಿಂದ, ಎ.ಜಿ. ಕೃಷ್ಣೇಗೌಡ, ನಟ– ಅರೇಹಳ್ಳಿ– 9448042737, ಶಿವಪ್ರಸಾದ್.ಎಲ್., ನಟ–ಇಟ್ಟಮಡು–9900012138, (ಪೌ/ಸಾ), ವಿಜಯಕುಮಾರ, ನಟ–ಅರ್ಚಕರಹಳ್ಳಿ– 9900668676(ಪೌ/ಸಾ), ಕೃಷ್ಣರಾಜು, ನಿರ್ದೇಶನ–ಬಾಲಗೇರಿ–9964209751, ವೆಂಕಟೇಶ್–ಚನ್ನೇನಹಳ್ಳಿ– 9686580304, ಎಂ.ಸಿ.ಸಿದ್ಧರಾಜು, ನಟ–ಮಾದಾಪುರ– 9886552302, ಕೆ.ಲಕ್ಷ್ಮೀಕುಮಾರ್, ನಟ–ಕೆಪಿಟಿಸಿಎಲ್ ಕಾಲೋನಿ–9886980468, ಎಸ್.ಸಿದ್ಧರಾಜು, ನಟ–ರಾಮನಗರ–9845659828/9739926655, ಚನ್ನಗಿರಿಗೌಡ.ಎಸ್.ಪಿ., ನಟ–ಶಾನುಭೋಗನಹಳ್ಳಿ – 9972736534, ಆರ್.ಕೆ. ಬೈರಲಿಂಗಯ್ಯ, ನಟ–ರಾಮನಗರ–9844297610, ಚಂದ್ರು, ನಟ– ರಾಮನಗರ–9844544855, ಟಿ.ನಾರಾಯಣ, ನಟ–ಚನ್ನಪಟ್ಟಣ–9343649612, ಸಿ.ರವಿ, ನಟ–ಹುಣಸನಹಳ್ಳಿ–9844453488, ರಾಮಯ್ಯ, ನಟ– ವಿಭೂತಿಕೆರೆ– 9845687637, ಬಿ.ಜಿ.ಗುರುಮಲ್ಲಯ್ಯ, ನಟ–ಬೊಮ್ಮಚನಹಳ್ಳಿ–9591242629, ಕೆ.ಆರ್. ಮೋಹನ್‌ಕುಮಾರ್, ನಟ–ನಾಗವಾರ–7259528656, ಕೃಷ್ಣಪ್ಪ, ನಟ– ಮೆಳೇಹಳ್ಳಿ– 9945668152, ಬಿ.ಸಿ.ವಾಸು, ನಟ–ರಾಮನಗರ–964457181, ಗವಿರಾಜ್(ಗವಿಯಪ್ಪ), ನಟ–ಅಚ್ಚಲುದೊಡ್ಡಿ–9731799155, ವೈ.ಎಸ್.

ಸಿದ್ದರಾಮೇಗೌಡ, ನಟ–ಯರೇಹಳ್ಳಿ– 9900514984/9743388202, (ಕಾರ್ಯದರ್ಶಿ ಜಿಲ್ಲಾ ರಂಗಭೂಮಿ ಕಲಾವಿದರ ಸಂಘ), ಶಿವರುದ್ರಪ್ಪ.ಬಿ.ಸಿ., ಸಂಗೀತ ಶಿಕ್ಷಕ, ನಿರ್ದೇಶಕ, ರಾಮನಗರ–9845392932, ಎಂ. ಆನಂದ್, ನಟ–ರಾಮನಗರ–9845658738, ಆರ್.ಜಿ.ಪದ್ಮನಾಭ, ರಾಮನಗರ–9242930199 (4 ದಶಕ), ಎಚ್.ಎಸ್.ತಿಮ್ಮರಾಜು, ನಿರ್ದೇಶಕ, ವಡೇರಹಳ್ಳಿ –9741132552,ದೊಡ್ಡಯ್ಯ ಕುಂಬಾಪುರ, ಆರ್.ಮೂರ್ತಿನಾಯಕ್ (ಪೌ.ಸಾ)– 9449533212, ರುದ್ರೇಶ್, ಕೆಂಪೇಗೌಡ ಲಕ್ಕಪ್ಪನಹಳ್ಳಿ, ಆರ್.ಎಸ್.ಮಹದೇವಯ್ಯ, ಬೈರೇಗೌಡ, ಕೃಷ್ಣಪ್ಪ, ಶೆಟ್ಟಿಹಳ್ಳಿ, ಕೆಂಪರಾಜು, ಪಾಂಡುರಂಗ–ಕೈಲಾಂಚ, ಶ್ರೀನಿವಾಸ್– ಪಾದರಹಳ್ಳಿ, ಹನುಮಂತಪ್ಪ, ಸಾಗರ– ಅಮ್ಮನಪುರ, ಗೋವಿಂದರಾಮನಾಯ್ಕ, ಅಮ್ಮನಪುರ, ಗೋವಿಂದನಾಯ್ಕ, ದೇವರದೊಡ್ಡಿ, ಕೃಷ್ಣಯ್ಯ.ಸಿ– ಚಿಕ್ಕನಹಳ್ಳಿ– 8453623474, ಶಾಂತಕುಮಾರ್ ಬಿಟಿಎಸ್–9886752379, ದೊಡ್ಡಯ್ಯ ಕುಂಬಾಪುರ, ಶ್ರೀರಂಗಯ್ಯ– ಅಚ್ಚಲು, ಗೋಪಾಲ– ಅಚ್ಚಲು, ಕೃಷ್ಣಮೂರ್ತಿ– ಅಚ್ಚಲು, ರವೀಂದ್ರ ಎಂ.ಸಿ., ಮಂಗಳವಾರಪೇಟೆ– ಸುಂದರೇಶ್, ಅಚ್ಚಲು, ಪಾಂಡು ರಂಗಯ್ಯ– ಅಚ್ಚಲು, ಶಶಿಧರ್– ಅಚ್ಚಲು, ಸುರೇಶ್–ಅಚ್ಚಲು, ಸತೀಶ್ ನಾಗವಳ್ಳಿ– ಅಚ್ಚಲು, ಚಲುವರಾಜು, ನಾಗವಳ್ಳಿ, ಪ್ರಕಾಶ್.ಎ.ಕೆ.– ಅಚ್ಚಲು, ಸ್ವಾಮಿ.ಎ.ಎಂ.– ಅಚ್ಚಲು, ಜಗದೀಶ್.ಎ.ಜೆ.– ಅಚ್ಚಲು, ಸೋಮೇಶ್–ಅಚ್ಚಲು, ಲೋಕೇಶ್– ಅಚ್ಚಲು, ರಾಜು– ಅಚ್ಚಲು, ಸತ್ಯರಾಜು– ಅಚ್ಚಲು, ಗಿರೀಶ್– ಅಚ್ಚಲು, ಜಗದೀಶ್.ಎನ್.ವಿ., ನಾಗವಳ್ಳಿ, ಲಿಂಗರಾಜು ಮಹಾರ್– ತಿಮ್ಮಸಂದ್ರ, ಚೇತನ್– ಅಚ್ಚಲು, ಹನುಮಯ್ಯ, ಪುಟ್ಟನರಸೇಗೌಡ, ಕೆ.ಶಿವಣ್ಣ, ಕೆ.ಎಂ.ಮಾಯಣ್ಣ, ಬಿ.ಶಿವಲಿಂಗಯ್ಯ, ಕೆ.ಎಂ.ರಾಮಕೃಷ್ಣಯ್ಯ, ಕೆ.ಎನ್.ಪುಟ್ಟಸ್ವಾಮಯ್ಯ, ಸಿ.ಕೆ.ಚನ್ನಂಕಯ್ಯ, ಕೆ.ದೇವರಾಜು, ಚಂದ್ರಶೇಖರ, ವಿರಾಟರಾಜ, ರಾಮಕೃಷ್ಣಯ್ಯ, ಎಂ.ಲೋಕೇಶ್, ಜಯರಾಮು, ಕೆ.ಚಂದ್ರಯ್ಯ, ಬಿ.ಕಾಂತರಾಜು, ಬೆಟ್ಟೇಗೌಡ, ವೆಂಕಟೇಶ, ಬೈರೇಗೌಡ.ಕೆ.ಪಿ., ಗೋವಿಂದ, ಕೆ.ರಾಜು, ನಿಂಗೇಗೌಡ, ಚಿಕ್ಕಹೊಂಬಾಳಯ್ಯ, ಸಿ.ರವಿ, ಕೃಷ್ಣಪ್ಪ, ಎಂ.ಮಾದೇಗೌಡ, ಗುತ್ತಲೇಗೌಡ, ಎಂ.ಬೈರಲಿಂಗಯ್ಯ, ಚಂದ್ರ, ನಾಗರಾಜು, ಕೆ.ಸಿದ್ದೇಗೌಡ, ಉಮೇಶ್, ಮರಿಸ್ವಾಮಿ, ಎಂ.ಸಿ.ದೇವರಾಜು, ಎಂ.ಮುತ್ತುರಾಜು, ಮಹದೇವಯ್ಯ.ಆರ್.ಎಸ್., ಸೋಮಶೇಖರ್, ಕೆ.ಲಕ್ಷ್ಮೀಕುಮಾರ್ ಕವಿಪ್ರನಿನಿ, ಡಿ.ಶಿವಣ್ಣ, ಎ.ಬಿ.ವೀರೇಶ್‌ಮೂರ್ತಿ, ಕೆ.ಕೃಷ್ಣಮೂರ್ತಿ, ಬಿ.ಸಿ.ವಾಸು, ಸಿದ್ದಪ್ಪಾಜಿ, ರಂಗಸ್ವಾಮಿ, ಆರ್.ಕೆ.ಚಂದ್ರಶೇಖರ್, ದೊ.ರಾ.ಸುರೇಶ್, ಆರ್.ಜೆ.ಶಂಕರ್‌ಸಿಂಗ್, ಚಿಕ್ಕದಾಸಪ್ಪ,

ಆರ್.ಕೃಷ್ಣಮೂರ್ತಿ, ಹನುಮಂತೇಗೌಡ, ಎ.ಜಿ.ಕೃಷ್ಣೇಗೌಡ, ಕೆ.ಆರ್.ಮೋಹನ್‌ಕುಮಾರ್, ಬಿ.ಜಿ.ಗುರುಮಲ್ಲಯ್ಯ, ಟಿ.ನಾರಾಯಣ್, ಚಂದ್ರು, ಕೆ.ಲಕ್ಷ್ಮೀಕುಮಾರ್, ವೆಂಕಟೇಶ್, ಸಿದ್ದರಾಮೇಗೌಡ, ಎಂ.ಜಿ.ಮಹೇಶ್‌ಕುಮಾರ್, ಎಚ್.ಮಂಜುನಾಥ್, ಸಿ.ಗೋಪಾಲ್, ಕೆ.ತಿಮ್ಮರಾಜು, ಆರ್.ಜಿ.ಪದ್ಮನಾಭ-9242930199, ಮರೀಗೌಡ ಮುಂತಾದವರು.

## ರಾಮನಗರ ರಂಗ ನಿರ್ದೇಶಕರು (ಪೌರಾಣಿಕ)

ಹೆಸರಾಂತ ಪೌರಾಣಿಕ ನಾಟಕಗಳ ರಂಗ ನಿರ್ದೇಶಕ ದಿ// ರೇವಣಸಿದ್ದಯ್ಯ, ಅಮ್ಮನಪುರ ಇವರು ಎರಡು ದಶಕಗಳ ಹಿಂದೆ ರಾಮನಗರ ಜಿಲ್ಲೆಯ ಸುತ್ತಲಹಳ್ಳಿಗಳಲ್ಲಿ ನೂರಾರು ಪೌರಾಣಿಕ ನಾಟಕ ಕೂರಿಸುತ್ತಿದ್ದರು.

ಇತ್ತೀಚಿನ ರಂಗ ನಿರ್ದೇಶಕರು, ಕುರುಬರಹಳ್ಳಿ ಸಿದ್ದಪ್ಪ, ರಾಮನಗರ, ಕೃಷ್ಣಂರಾಜು, ರಾಮನಗರ, ಯತಿರಾಜು, ಲಕ್ಷ್ಮೀಪುರ, ರಾಮನಗರ-9035822983, ಮಹದೇವಪ್ಪ, ಕರಿಘಾರಂ, ರಾಮನಗರ, ಬನ್ನಿಕುಪ್ಪೆ ಶ್ರೀನಿವಾಸ್, ರಾಮನಗರ, ವೀರಮಾದಯ್ಯ, ಅಂಜನಾಪುರ, ರಾಮನಗರ, ಕೆ.ವಿ.ರಾಮಮೂರ್ತಿ, ಕರಡಿಗೌಡನದೊಡ್ಡಿ- 9008567042, ರಾಜಣ್ಣ, ಅವೇರಹಳ್ಳಿ, ಎಚ್.ಎಸ್.ತಿಮ್ಮರಾಜು - 9741132552, ಕೆ.ವಿ. ರಾಮಮೂರ್ತಿ - 9008567042, ಶಿವಾನಂದಮೂರ್ತಿ, ಅರ್ಚಕರಹಳ್ಳಿ-9035822983

## ಎಚ್.ಎಸ್.ತಿಮ್ಮರಾಜು



**ರಂಗ ನಿರ್ದೇಶಕರು,**
**ರಾಮನಗರ ಮೊ: 9741132552**

ಎಚ್.ಎಸ್.ತಿಮ್ಮರಾಜು ಅವರು ರಾಮನಗರದ ಬಿ.ಎಂ.ರಸ್ತೆಯ ವಡೇರಹಳ್ಳಿಯವರು. 1968 ರಿಂದ ಇಂದಿನವರೆವಿಗೂ ಪೌರಾಣಿಕ ರಂಗ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರು ನಿರ್ದೇಶಿಸಿದ ನಾಟಕಗಳೆಂದರೇ:

ಸಂಪೂರ್ಣ ರಾಮಾಯಣ, ಕುರುಕ್ಷೇತ್ರ, ಶ್ರೀಕೃಷ್ಣ ಲೀಲ, ಶಿವ ಜಲಂಧರ, ದಾನಶೂರ ವೀರಕರ್ಣ, ಸಮಂತಕ ರತ್ನ, ಶಶಿರೇಖಾ ಕಲ್ಯಾಣ, ಶ್ರೀಕೃಷ್ಣ ಗಾರುಡಿ, ಭಾಮಾ ಪರಿಣಯ, ಸೀತ ಸ್ವಯಂವರ ಮುಂತಾದವು. ಇವರು ರಂಗಗೀತೆ ಹಾಗೂ ನಿರ್ದೇಶನಕ್ಕಾಗಿ ರಾಜ್ಯಮಟ್ಟದ ಪ್ರಶಸ್ತಿ ಪಡೆದಿದ್ದಾರೆ.

## ಶಿವಾನಂದಮೂರ್ತಿ

ರಾಮನಗರದ ಅರ್ಚಕರಹಳ್ಳಿಯ ಶಿವಾನಂದಮೂರ್ತಿ ಅವರು ಪೌರಾಣಿಕ ನಾಟಕ, ಸಂಗೀತ ನಿರ್ದೇಶಕರು ಹಾಗೂ ನಟರು. 1978 ರಿಂದ ಕೌಂಡ್ಲಿಕನವಧೆ, ರಾಜಸೂಯ ಯಾಗ, ಕುರುಕ್ಷೇತ್ರ, ದಾನಶೂರಕರ್ಣ, ನಲ್ಲತಂಗಾ ನಾಟಕಗಳಲ್ಲಿ ಅಭಿನಯಿಸಿ, 1981 ರಿಂದ 250ಕ್ಕೂ ಹೆಚ್ಚಿನ ಪೌರಾಣಿಕ ನಾಟಕಗಳನ್ನು ನಿರ್ದೇಶಿಸಿದ್ದಾರೆ. ರಂಗ ತರಬೇತಿ ಸಹ ನೀಡಿ ಹಲವಾರು ಪ್ರಶಸ್ತಿ, ಪುರಸ್ಕಾರಕ್ಕೆ ಭಾಜನರಾಗಿದ್ದಾರೆ.

## ನಿಂಗೇಗೌಡ

ರಾಮನಗರ ತಾಲ್ಲೂಕಿನ ಗುಂಗರಹಳ್ಳಿಯ ನಿಂಗೇಗೌಡ ಅವರು 1972 ರಿಂದ ನಟರಾಗಿ ರಂಗಸೇವೆ ಸಲ್ಲಿಸುತ್ತಿದ್ದಾರೆ. ಇವರು ಕುರುಕ್ಷೇತ್ರ, ದಾನಶೂರಕರ್ಣ, ಕೃಷ್ಣಸಂಧಾನ, ರಾಜ ವಿಕ್ರಮ, ಸಂಪೂರ್ಣ ರಾಮಾಯಣ, ನಲ್ಲತಂಗ, ದಕ್ಷಯಜ್ಞ ಮುಂತಾದ ನಾಟಕಗಳಲ್ಲಿ ಅಭಿನಯಿಸಿದ್ದಾರೆ.

## ರಾಮನಗರ ತಾಲ್ಲೂಕು ವಾದ್ಯ ಕಲಾವಿದರು

ಸಾಂಸ್ಕೃತಿಕ ರಾಜಧಾನಿ ಮೈಸೂರಿನಲ್ಲಿ ಈ ಹಿಂದೆ ಕಲಾ ಆರಾಧಕರಾದ ನಾಲ್ವಡಿ ಕೃಷ್ಣರಾಜ ಒಡೆಯರ ವಂಶಸ್ಥರಾದ ಶ್ರೀ ಜಯಚಾಮ ರಾಜೇಂದ್ರ ಒಡೆಯರ ಆಸ್ಥಾನದಲ್ಲಿ ರಾಮನಗರ ಜಿಲ್ಲೆಯ ಹಲವಾರು ಕಲಾವಿದರು ಕೆಲಸ ಮಾಡಿರುವ ದಾಖಲೆ ಇವೆ. 1960 ರಿಂದ 1985 ರವರೆವಿಗೆ ಆಸ್ಥಾನದಲ್ಲಿ ವಾದ್ಯ ನುಡಿಸಿ ಪ್ರಶಸ್ತಿ ಪಡೆದ ಕಲಾವಿದರಾದ,

ಶ್ರೀಯುತರಾದ ಶೇಷಾದ್ರಿ – ಪಿಟೀಲು ವಾದಕರು, ಶ್ರೀ ಹೆಜ್ಜೂರಪ್ಪ– ಮೈಸೂರು ಕ್ಲಾರಿಯೋನೆಟ್, ಶ್ರೀ ಸಿದ್ದರಾಜು– ಮೈಸೂರು ಕೊಳಲು,ಶ್ರೀ ನಾರಾಯಣಪ್ಪ– ಮೈಸೂರು ಕ್ಲಾರಿಯೋನೆಟ್, ಶ್ರೀ ಮಹಾದೇವಪ್ಪ ಅಂದರು– ತಬಲ ವಾದಕರು, ಶ್ರೀ ರಾಜಣ್ಣ– ಪಿಟೀಲು ವಾದಕರು

ಈ ಮಹಾನ್ ಕಲಾವಿದರೊಟ್ಟಿಗೆ ಕೆಲಸ ಮಾಡಿರುವ ಚನ್ನಪಟ್ಟಣದ ಕಲಾವಿದರೆಂದರೆ,

## ರಾಮನಗರ ತಾಲ್ಲೂಕು ಹಾರ್ಮೋನಿಯಂ ಕಲಾವಿದರು

ಶ್ರೀ ಮುನಿವೆಂಕಟಪ್ಪ- ಬನ್ನಿಕುಪ್ಪೆ, ಶ್ರೀ ಪುಟ್ಟಸ್ವಾಮಿ- ಐಜೂರು, ಶ್ರೀ ಬೈರಪ್ಪ- ಐಜೂರು, ಶ್ರೀ ಚೌಡಪ್ಪ- ಇಟ್ಟಮಡು, ಶ್ರೀ ಕೃಷ್ಣಂರಾಜು- ರಾಮನಗರ

****

# ಚನ್ನಪಟ್ಟಣ ತಾಲ್ಲೂಕಿನ ಪಕ್ಕ ವಾದ್ಯಗೋಷ್ಠಿ

ಶ್ರೀ ಕೃಷ್ಣಪ್ಪ- ಮೇಳೆದೊಡ್ಡಿ-ತಬಲ, ಶ್ರೀ ಚನ್ನಂಕಯ್ಯ-ವಿರೂಪಸಂದ್ರ-ತಬಲ, ಶ್ರೀ ತಮ್ಮಣ್ಣ- ಮಂಗಳವಾರಪೇಟೆ -ತಬಲ, ಶ್ರೀ ಪಾಪಣ್ಣ- ತಗಚಗೆರೆ-ತಬಲ, ಶ್ರೀ ಜೋಗಪ್ಪ- ತಗಚಗೆರೆ- ತಬಲ, ಶ್ರೀ ರಂಗನಾಥ್ - ಎಲೆಕೇರಿ-ತಬಲ, ಶ್ರೀ ಹರೀಶ್‌ಕುಮಾರ್- ಮಂಗಳವಾರಪೇಟೆ- ತಬಲ, ಶ್ರೀ ಮಾರುತಿ-ಎಲೆಕೇರಿ-ತಬಲ, ಶ್ರೀ ಎಂ.ಪಿ.ಕೃಷ್ಣಪ್ಪ- ಮಂಗಳವಾರಪೇಟೆ, ಕ್ಲಾರಿಯೊನೊಟ್, ಶ್ರೀ ಶ್ರೀನಿವಾಸ್-ತಗಚಗೆರೆ, ಕ್ಲಾರಿಯೊನೊಟ್, ಶ್ರೀ ಜಯಣ್ಣ-ಎಲೆಕೇರಿ, ಕ್ಲಾರಿಯೊನೊಟ್, ಶ್ರೀ ಪುಟ್ಟಯ್ಯ- ಚನ್ನಪಟ್ಟಣ-ಕೊಳಲು, ಶ್ರೀ ಚೆನ್ನಯ್ಯ-ಕೋಡಿಹೊಸಳ್ಳಿ-ಕೊಳಲು, ಶ್ರೀ ಅಪ್ಪಸ್ವಾಮಿ- ದೊಡ್ಡಮಳೂರು-ಕೊಳಲು, ಶ್ರೀ ಸುಜ್ಞಾನಪ್ರಭು- ಶೆಟ್ಟಿಹಳ್ಳಿ-ಪಿಟೀಲು, ಶ್ರೀ ಕೃಷ್ಣಚಾರ್- ಮಂಗಳವಾರಪೇಟೆ-ಪಿಟೀಲು, ಶ್ರೀ ರಾಮಚಂದ್ರು-ತಾಳವಾದ್ಯ

## ಚನ್ನಪಟ್ಟಣ ಹಾರ್ಮೋನಿಯಂ ಮೇಷ್ಟ್ರುಗಳು

ಶ್ರೀ ಎಂ.ಎಚ್.ಚೌಡಯ್ಯ-ಮಳೂರುಪಟ್ಟಣ, ಶ್ರೀ ಚೌಡಯ್ಯ-ಮಳೂರುಪಟ್ಟಣ, ಶ್ರೀ ಮಾಧವರಾಜ್-ಲಾಳಗಟ್ಟ, ಶ್ರೀ ಅಪ್ಪಗೆರೆ ಭೋಜಯ್ಯ-ಹರಿಸಂದ್ರ, ಶ್ರೀ ಮುಲ್ಲಯ್ಯ-ಹರಿಸಂದ್ರ, ಶ್ರೀ ಮುನಿಯಪ್ಪ-ಬಿ.ವಿ.ಪಾಳ್ಯ, ಶ್ರೀ ಶಿವಲಿಂಗಯ್ಯ-ದೊಡ್ಡಮಳೂರು, ಶ್ರೀ ಸಿದ್ದರಾಜು- ದೊಡ್ಡಮಳೂರು, ಶ್ರೀ ಕಾಳಲಕ್ಕಯ್ಯ - ಕುಂತೂರುದೊಡ್ಡಿ, ಶ್ರೀ ಮಲ್ಲೇಶಪ್ಪ-ಎಲೆಕೇರಿ, ಶ್ರೀ ತಮ್ಮಣ್ಣ-ಮಂಗಳವಾರಪೇಟೆ, ಶ್ರೀ ಗಿರಿಯಪ್ಪ-ಬ್ರಹ್ಮಣಿಪುರ, ಶ್ರೀ ಶಿವಣ್ಣ-ಎನ್.ಆರ್.ಕಾಲೋನಿ, ಶ್ರೀ ಶಿವಕಾಳಯ್ಯ-ಮೈಲನಾಯ್ಕನಹೊಸಳ್ಳಿ, ಶ್ರೀ ಅಂದಾನಪ್ಪ-ಅಂಬೇಡ್ಕರ್ ನಗರ, ಶ್ರೀ ಧರ್ಮೇಂದ್ರ-ಮಂಗಳವಾರಪೇಟೆ, ಶ್ರೀ ಶಿವರಾಜು-ನಾಗವಾರ, ಶ್ರೀ ಅಂಬರೀಶಯ್ಯ-ಮೇಳೆದೊಡ್ಡಿ, ಶ್ರೀ ಕೆಂಚಪ್ಪ-ಎಲೆಹೊಸಳ್ಳಿ, ಶ್ರೀ ಕೃಷ್ಣಪ್ಪ-ಮಳೂರುಪಟ್ಟಣ, ಶ್ರೀ ಮುನಿರಾಜು-ವಿರುಪಸಂದ್ರ, ಶ್ರೀ ಬಸವರಾಜಚಾರ್-ಚನ್ನಪಟ್ಟಣ, ಶ್ರೀ ಎಂ.ಎಸ್. ಸಿದ್ದರಾಜು, ಶಿಕ್ಷಕ-ದೊಡ್ಡಮಳೂರು

## ಚನ್ನಪಟ್ಟಣದಲ್ಲಾಗಿರುವ ಪ್ರಮುಖ ಪೌರಾಣಿಕ ನಾಟಕ ಪ್ರಯೋಗಗಳು



**ನಿರ್ದೇಶಕ: ಎಸ್.ಕೆ.ಜಯರಾಮು**

**ಹಾರ್ಮೋನಿಯಂ ಮೇಷ್ಟ್ರು, ಸುಣ್ಣಘಟ್ಟ, ಚನ್ನಪಟ್ಟಣ, ರಾಮನಗರ ಜಿಲ್ಲೆ**

25.09.1993 – ಕುರು ಪಾಂಡವರ ಸಮರ ಅಥವಾ ಶ್ರೀ ಕೃಷ್ಣ ವಿಜಯ

04.03.1994 – ಕುರುಕ್ಷೇತ್ರ ಅಥವಾ ಧರ್ಮರಾಜ್ಯ ಸ್ಥಾಪನೆ

28.05.1994 – ಶಕುನಿ ಕುತಂತ್ರ

18.01.1996 – ಕುರು ಪಾಂಡವರ ಸಮರ ಅಥವಾ ಶ್ರೀ ಕೃಷ್ಣ ವಿಜಯ

09.10.1997 – ಶ್ರೀ ಕೃಷ್ಣರಾಯಭಾರ ಅಥವಾ ಕುರು ಪಾಂಡವರ ಸಮರ

12.06.1997 – ಕುರುಕ್ಷೇತ್ರ

16.09.1998 – ಸತ್ಯಹರಿಶ್ಚಂದ್ರ ಅಥವಾ ವಿಶ್ವಾಮಿತ್ರನ ಗರ್ವಭಂಗ

24.09.1998 – ಶ್ರೀ ಪಾಂಡವ ವಿಜಯ

27.04.1999 – ಶ್ರೀಕೃಷ್ಣರಾಯಭಾರ

18.11.1999 – ಶ್ರೀ ಕೃಷ್ಣವಿಜಯ

16.09.1999 – ಕುರುಕ್ಷೇತ್ರ ಅಥವಾ ಧರ್ಮರಾಜ್ಯ ಸ್ಥಾಪನೆ

30.05.2002 – ಕುರುಕ್ಷೇತ್ರ ಅಥವಾ ಶ್ರೀಕೃಷ್ಣ ಸಂಧಾನ

30.06.2004 – ಶ್ರೀ ಕೃಷ್ಣ ಸಂಧಾನ

19.11.2004 – ಭೀಮ ದುರ್ಯೋಧನರ ಗದಾಯುದ್ಧ

28.10.2006 – ಶ್ರೀ ಕೃಷ್ಣ ಸಂಧಾನ ಅಥವಾ ಭೀಮದುರ್ಯೋಧನರ ಗದಾಯುದ್ಧ

14.11.2007 – ಶ್ರೀ ಕೃಷ್ಣ ವಿಜಯ

(ಈ ಮೇಲಿನ ನಾಟಕಗಳನ್ನು ಚನ್ನಪಟ್ಟಣದ ಸುಣ್ಣಘಟ್ಟದ ಎಸ್.ಕೆ.ಜಯರಾಮು ಅವರು ನಿರ್ದೇಶಿದ್ದಾರೆ)

## ಡಾ. ಕೋ.ವೆಂ. ರಾಮಕೃಷ್ಣೇಗೌಡ (ಹವ್ಯಾಸಿ)



**ಕೋಡಿಹಳ್ಳಿ, ಚನ್ನಪಟ್ಟಣ ತಾ. ರಾಮನಗರ ಜಿಲ್ಲೆ ಮೊ: 9448851781**

ಚನ್ನಪಟ್ಟಣ ತಾಲ್ಲೂಕಿನ ಕೋಡಿಹೊಸಹಳ್ಳಿಯ ವೆಂಕಟಗಿರಿಗೌಡ ಹಾಗೂ ಶ್ರೀಮತಿ ಲಕ್ಷ್ಮಮ್ಮ ಅವರ ಪುತ್ರರಾಗಿ 10.06.1962 ರಲ್ಲಿ ಜನಿಸಿದ ಶ್ರೀಯುತರು, ಮೂಲತಃ ಸಾಹಿತ್ಯ ಹಾಗೂ ಸಾಂಸ್ಕೃತಿಕ ಕ್ಷೇತ್ರದಲ್ಲಿ ಮತ್ತು ಕನ್ನಡ ಪರ ಹೋರಟಗಳಲ್ಲಿ ಕಳೆದ 35 ವರ್ಷಗಳಿಂದ ನಿರಂತರವಾಗಿ ತೊಡಗಿಸಿಕೊಂಡು ಬಂದಿದ್ದಾರೆ. ಬಾಲ್ಯದಿಂದಲೇ ರಂಗಾಭಿನಯದ ಆಸಕ್ತಿ ಹೊಂದಿದ್ದಾರೆ. ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾಗಿ, ಕನ್ನಡ ಸಂಘರ್ಷ ಸಮಿತಿ ಕಾರ್ಯಾಧ್ಯಕ್ಷರಾಗಿ, ಸಾಹಿತ್ಯ ಪರಿಷತ್ ಪ್ರಕಟಿಸುವ ಕನ್ನಡನುಡಿ ಸಂಪಾದಕರಾಗಿದ್ದವರು.

ಇವರ ಮುಖ್ಯ ಕೃತಿಗಳು: ಕೃತಿಆಳ, ದುಂಬಿಕಾಯಕ (ನಾಟಕ), ವಿಮರ್ಶಾ ಸಂಕಲನಗಳು ಬಂದಿವೆ. ಕುಗ್ಗಿನಿಲ್ಲದಿರೋ ಕುಬ್ಜನಾಗದಿರೋ, ಹಚ್ಚೆ ಎದೆಯ ಪದ (ಕವನ ಸಂಕಲನ) ಹಾಗೂ ಸಂಪಾದಿತ 20ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ.

**ರಂಗಭೂಮಿಗೆ ಸಂಬಂಧಿಸಿದ ಲೇಖನಗಳು:**

ಕುವೆಂಪು ಅವರ 'ಶ್ಮಶಾನ ಕುರುಕ್ಷೇತ್ರ' ನಾಟಕದಲ್ಲಿ ಯುದ್ಧವಿರೋಧಿ ನಿಲುವು.

ಲಂಕೇಶರ 'ಕ್ರಾಂತಿ ಬಂತು ಕ್ರಾಂತಿ' ನಾಟಕದ ಸ್ತ್ರೀಪಾತ್ರಗಳು.

ಕುವೆಂಪು "ಶೂದ್ರತಪಸ್ವಿ' ನಾಟಕದಲ್ಲಿ ಅನುಸಂಧಾನ.

'ಕ್ರಾಂತಿ ಬಂತು ಕ್ರಾಂತಿ' ನಾಟಕದಲ್ಲಿ ಕರುಣೆ ಮತ್ತು ಕ್ರೌರ್ಯ.


**ಪಡೆದಿರುವ ಪ್ರಶಸ್ತಿಗಳು:** 1. ನಾಡಪ್ರಭು ಕೆಂಪೇಗೌಡ ಪ್ರಶಸ್ತಿ (2014), ಬಿ.ಬಿ.ಎಂ.ಪಿ., ಬೆಂಗಳೂರು. 2. ವಿಶ್ವೇಶ್ವರಯ್ಯ ರಾಷ್ಟ್ರೀಯ ಸಾಹಿತ್ಯ ಪ್ರಶಸ್ತಿ–2014 (ಕರ್ನಾಟಕ ಕಾವೇರಿ ಸಂಸ್ಕೃತಿ ಕೃತಿಗೆ),ಕನ್ನಡ ಪತ್ರಿಕಾ ಸಂಪಾದಕರ ಒಕ್ಕೂಟ 3. ಉತ್ತಮ ಉಪನ್ಯಾಸಕ ಪ್ರಶಸ್ತಿ–2011 4. ಕನ್ನಡ ಭೂಷಣ ಪ್ರಶಸ್ತಿ. 5. ಸರ್.ಎಂ. ವಿಶ್ವೇಶ್ವರಯ್ಯ ಪ್ರಶಸ್ತಿ . 6. ಕರುನಾಡಸಿರಿ ಪ್ರಶಸ್ತಿ. 7. ಗಡಿನಾಡಧ್ವನಿ ಪ್ರಶಸ್ತಿ 8. ಶಿಕ್ಷಣರತ್ನ ಪ್ರಶಸ್ತಿ ಮುಂತಾದವು.

ಇವರು ಅಭಿನಯಿಸಿದ ಪ್ರಮುಖ ನಾಟಕಗಳು (ನೂರು ಪ್ರದರ್ಶನದೊಂದಿಗೆ)

ಬಿಜ್ಜಳ, ವಸಂತ, ಮುಳ್ಳು ಬೇಲಿಗಳ ನಡುವೆ, ಮಾದಾರಾ ಚೆನ್ನಯ್ಯ, ಮುಂತಾದವು. ಇವರ ನಿರ್ದೇಶನದ ನಾಟಕಗಳು: ಮುಳ್ಳುಬೇಲಿ ನಡುವೆ ಮುಂತಾದವು.

## ಚನ್ನಪಟ್ಟಣ ತಾಲ್ಲೂಕಿನ ಪೌರಾಣಿಕ ರಂಗ ಕಲಾವಿದರು

## ಶ್ರೀ ತಿಮ್ಮರಾಜು (ಎಂ.ಟಿ.ಆರ್.)



**ಸಂಪರ್ಕ: 9844115092**

ಚನ್ನಪಟ್ಟಣದ ಮಂಗಳವಾರಪೇಟೆಯ ತಿಮ್ಮರಾಜು ಲೇ.ಎಂ.ಟಿ.ರಾಮಯ್ಯ ಹಾಗೂ ಲೇ.ಗೌರಮ್ಮ ಅವರ ಪುತ್ರರಾಗಿ 11.05.1962 ರಲ್ಲಿ ಜನಿಸಿದರು. 1984 ರಿಂದ ರಂಗಭೂಮಿಗೆ ಪ್ರವೇಶ ಪಡೆದ ಇವರು ರಾಜಕೆಂಪೇಗೌಡ ನಾಟಕದ ನಾರಾಯಣಸ್ವಾಮಿ, ಜಗದೇವರಾಯ ಪಾತ್ರ ನಿರ್ವಹಣೆ ಜೊತೆಗೆ ಕುರುಕ್ಷೇತ್ರ,


ಭೂಕೈಲಾಸ, ರಾಮಾಯಣ ನಾಟಕಗಳನ್ನು ಸುಮಾರು 38ಕ್ಕೂ ಹೆಚ್ಚಿನ ಪ್ರದರ್ಶನಗಳಲ್ಲಿ ಯಮಧರ್ಮ, ಭೀಮ, ರಾಮ, ದುರ್ಯೋಧನ, ಮಾಯರಾವಣ, ಮುಂತಾದ ಪಾತ್ರಗಳನ್ನು ನಿಭಾಯಿಸಿದ್ದಾರೆ. ಇವರ ನಾಟಕಗಳು ಚನ್ನಪಟ್ಟಣ ತಾಲ್ಲೂಕಿನ ಹಳ್ಳಿಗಳು, ರಾಮನಗರದ ಹಳ್ಳಿಗಳು, ಬೆಂಗಳೂರು ಮುಂತಾದ ಕಡೆ ಪ್ರಯೋಗ ಕಂಡಿವೆ.

## ನರೇಂದ್ರಬಾಬು



**ನಟ, ನಿರ್ದೇಶಕ, ನೇಪಥ್ಯ ಕಲಾವಿದ**
**ಸಂಪರ್ಕ: 9945695338**
**Email: narendrababu15@gmail.com**

ಚನ್ನಪಟ್ಟಣ ತಾಲ್ಲೂಕಿನ ಮಂಗಳವಾರಪೇಟೆಯ ಲೇ.ಚಿಕ್ಕಬೋರಯ್ಯ ಹಾಗೂ ಜಯಮ್ಮ ದಂಪತಿಗಳ ಪುತ್ರರಾಗಿ 15.08.1975 ರಲ್ಲಿ ಜನಿಸಿದ ನರೇಂದ್ರಬಾಬು ಅವರು ರಂಗನಟರಾಗಿ ಅಂತ್ಯ, ಸೇತುಮಾದವನ ಸಲ್ಲಾಪ, ಮಾರನಾಯಕನ ದೃಷ್ಟಾಂತ, ಮಹಿಪತ ಕ್ವಾಣನ ತಂಬ್ಗಿ ಎಂಎ, ಮುಂತಾದವುಗಳಲ್ಲಿ ಅಭಿನಯಿಸಿದ್ದಾರೆ. ನಿರ್ದೇಶನದ ನಾಟಕಗಳೆಂದರೇ, ಸೇತುಮಾದವನ ಸಲ್ಲಾಪ, ಅಂತರ ಕಾಲೇಜು, ಅತ್ಯುತ್ತಮ ನಟ, ಸೂರ್ಯಸ್ಥದಿಂದ ಸೂರ್ಯೋದಯದವರೆಗೆ, ಟಿ.ಪ್ರಸನ್ನನ್ನ ಗೃಹಾಸ್ಥಾಶ್ರಮ, ಆಷಾಡದ ಒಂದು ದಿನ, ಪುಟ್ಟಕ್ಕನ ಮೆಡಿಕಲ್ ಕಾಲೇಜು, ಧರ್ಮಪ್ಪ, 'ಕಬ್ಬಡ್ಡಿ' ಸಿನಿಮಾ ನಿರ್ದೇಶಕರಾಗಿ ರಾಜ್ಯ ಪ್ರಶಸ್ತಿ ಗಳಿಸಿದ್ದಾರೆ. 'ಜೋಗಯ್ಯ' ಸಿನಿಮಾ ಸಂಭಾಷಣೆ ರಚನಾಕಾರರು. ಶಿವರಾಜ್ ಕುಮಾರ್




ಅಭಿನಯದ 'ಸಾರಂಗ' ಹಾಗೂ ಕಬೀರ ಸಿನಿಮಾ ಸಿದ್ಧತೆಯಲ್ಲಿದ್ದಾರೆ. 'ವಿಸ್ತಾರ ರಂಗ ತಂಡ'ದ ಸಂಸ್ಥಾಪಕರು. ಈಗ ಇದು ಸಿನಿಮಾ ನಿರ್ಮಾಣದಲ್ಲೂ ತೊಡಗಿದೆ.

## ಶ್ರೀ ಸಿದ್ದಲಿಂಗಯ್ಯ



**ಸಂಪರ್ಕ: 9964977949**

ಚನ್ನಪಟ್ಟಣದ ನಾಗವಾರದ ಲೇ. ಅಂಕಯ್ಯ ಹಾಗೂ ಗೌರಮ್ಮ ಅವರ ಪುತ್ರರಾಗಿ 06.04.1972 ರಲ್ಲಿ ಜನಿಸಿದ ಸಿದ್ದಲಿಂಗಯ್ಯ, 1985 ರಿಂದ ರಂಗಕಾಯಕದಲ್ಲಿದ್ದಾರೆ. ಇವರು ಕಂಬನಿ, ಸೌಂದರ್ಯ, ಡಂಬಾಶೂರನವಧೆ, ರಾಮಾಯಣ, ಕಾಲಚಕ್ರ, ಶಿವಭಕ್ತ ಚಂಡಾಶೂರ, ಪರಶುರಾಮ, ತಾಳಿಕಟ್ಟಿದರು ಗಂಡನಲ್ಲ, ಸತಿ ಸಂಸಾರದ ಜ್ಯೋತಿ, ಕುಡುಕ ಕಟ್ಟಿದ ತಾಳಿ, ತವರಿನ ತಮ್ಮ, ಕಾರ್ತವೀರ್ಯಾರ್ಜುನ, ನೋಡು ತಂಗಿ ನೋಡು, ಬೀದಿಮಾರಿ, ಸ್ನೇಹಬಂಧನ, ಸಾಮ್ರಾಟ್ ಸುಯೋಧನ, ದಕ್ಷಯಜ್ಞ, ಕುರುಕ್ಷೇತ್ರ, ತ್ರಿಜನ್ಮಮೋಕ್ಷ, ಶ್ರೀನಿವಾಸ ಕಲ್ಯಾಣ, ಕೃಷ್ಣಸಂಧಾನ, ಮುಂತಾದ ನಾಟಕಗಳಲ್ಲಿ ವಿಭಿನ್ನ ಪಾತ್ರಕ್ಕೆ ನ್ಯಾಯ ಒದಗಿಸಿದ್ದಾರೆ. ಅಲ್ಲದೆ, ರಂಗ ಸಂಘಟಕರಾಗಿ ನಿರ್ದೇಶಕರಾಗಿ 25ಕ್ಕೂ ಹೆಚ್ಚಿನ ನಾಟಕ ನಿರ್ದೇಶಿಸಿರುವ ಹೆಗ್ಗಳಿಕೆ ಶ್ರೀ ಸಿದ್ದಲಿಂಗಯ್ಯ ಅವರದಾಗಿದೆ.

## ಶ್ರೀ ಜಿ. ವೆಂಕಟೇಶ್

**ಸಂಪರ್ಕ:9844385599**

ಚನ್ನಪಟ್ಟಣದ ಕೂಡ್ಲೂರಿನ ವೆಂಕಟೇಶ್ ಅವರು ಲೇ.ಗೋವಿಂದೇಗೌಡ ಹಾಗೂ ಕಿಟ್ಟಮ್ಮ ಅವರ ಪುತ್ರರಾಗಿ 22.01.1964 ರಲ್ಲಿ ಜನಿಸಿದರು. ಇವರು ಕುರುಕ್ಷೇತ್ರ, ರಾಮರಾಜ್ಯ, ಕುರಿದೊಡ್ಡಿ ಕುರುಕ್ಷೇತ್ರ, ತ್ರಿಜನ್ಮಮೋಕ್ಷ, ಶ್ರೀ ಕೃಷ್ಣಸಂಧಾನ, ಮುಂತಾದ ನಾಟಕಗಳಲ್ಲಿ ವಿಭಿನ್ನ ಪಾತ್ರ ನಿರ್ವಹಣೆಯಿಂದ ರಾಜ್ಯದ ಬೇರೆ ಬೇರೆ ಪ್ರದೇಶಗಳಲ್ಲಿ ಹೆಸರು ಗಳಿಸಿ ಹಲವಾರು ಪ್ರಶಸ್ತಿ ಪುರಸ್ಕಾರಗಳಿಗೆ ಭಾಜನರಾಗಿದ್ದಾರೆ.

## ಚನ್ನಪಟ್ಟಣ ತಾಲ್ಲೂಕಿನ ಪೌರಾಣಿಕ ರಂಗ ಕಲಾವಿದರ ಪಟ್ಟಿ


ಎನ್.ಕೆ. ಶಿವಣ್ಣ S/o ಕರೀಗೌಡ–ನಾಗವಾರ, ಶಿವಕುಮಾರ್ S/o ಕರಿಯಪ್ಪ–ನಾಗವಾರ, ರವಿಕುಮಾರ್ S/o ನಾರಾಯಣಗೌಡ–ಮೈಲನಾಯ್ಕನಹಳ್ಳಿ', ಪುಟ್ಟರಾಜು, ಕುಂತೂರ್‌ದೊಡ್ಡಿ, ಎನ್.ಡಿ. ಲೋಕೇಶ್ S/o ದೊಡ್ಡಲಿಂಗಯ್ಯ, ನಾಗರಾಜ್.ಜಿ.ಎಚ್., ಗೋವಿಂದಳ್ಳಿ, ಕೃಷ್ಣದೇವ, ಚಿಕ್ಕಮಳೂರು, ರಾಜಣ್ಣ, ಡರೂರು, ಶಿವಕುಮಾರ್, ಹುಲುವಾಡಿ, ಉಮಾಶಂಕರ್, ಚನ್ನಪಟ್ಟಣ, ಬಿ.ಆರ್. ಗೋಪಾಲ್, ಬೈರಾಪಟ್ಟಣ, ವೆಂಕಟೇಶ್ ಕೆಇಬಿ, ನಾರಾಯಣ, ಮಂಗಳವಾರ ಪೇಟೆ, ಬೀಡಾ ಪುಟ್ಟರಾಜು, ಚನ್ನಪಟ್ಟಣ, ರಮೇಶ್, ಮಂಗಳವಾರಪೇಟೆ, ಹನುಮಂತಯ್ಯ, ರಾಮನಗರ, ಗೋವಿಂದೇಗೌಡ, ಕೂಡ್ಲೂರು, ಚಂದ್ರರಾಜ ಅರಸು, ಕೂಡ್ಲೂರು, ಕೆ. ಶಿವಣ್ಣ, ಚನ್ನಪಟ್ಟಣ, ಮೋಹನ್‌ಕುಮಾರ್, ನಾಗವಾರ, ಸುಮತಿಕುಮಾರ್ ಜೈನ್, ಚನ್ನಪಟ್ಟಣ, ರಾಮಕೃಷ್ಣ, ಕನ್ನಮಂಗಲ, ಅಂಬರೀಷ್, ದೇವರಹೊಸಳ್ಳಿ, ವೆಂಕಟೇಶ್‌ಮೂರ್ತಿ, ಮೈಲನಾಯ್ಕನಹಳ್ಳಿ, ಕೆಂಪೇಗೌಡ, ಬೆಳಕೆರೆ, ಮುರಳಿ, ತೊರೆಹೊಸೂರು, ರಾಮಮೂರ್ತಿ, ತಗಚಗೆರೆ, ಮಹಲಿಂಗು, ಸೂರ್ಯಪ್ಲವರ್ಸ್, ತಗಚಗೆರೆ, ಕೃಷ್ಣೇಗೌಡ, ಗರಕಳ್ಳಿ, ಕೃಷ್ಣೇಗೌಡ, ನಿಡಗಟ್ಟಿ, ಎಲೆಕೇರಿ ಬಾಲಿ, ಎಲ್‌ಐಸಿ ನಾಗರಾಜ್, ಚಾಮೇಗೌಡ ಜೆಸಿಬಿ, ವಿಜಿಕುಮಾರ್, ಜಿ.ವೆಂಕಟೇಶ್, ನಟ, ಕೂಡ್ಲೂರು, ಎಂ.ಜಿ.ಮಹೇಶ್‌ಕುಮಾರ್, ನಟ, ಚನ್ನಪಟ್ಟಣ– 9902614005, ಸಿದ್ದಲಿಂಗಯ್ಯ, ನಟ, ನಾಗವಾರ– 9964977949 (ಪೌ.ಸಾ), ಎನ್.ಸುಕೀರ್ತಿ, ನಟ, ನಾಗವಾರ– 9731037798 (ಪೌ.ಸಾ), ಎಚ್.ಮಂಜುನಾಥ್, ನಟ, ಎಲೆಕೇರಿ, – 241213333 (ಪೌ.ಸಾ), ಗೋಪಾಲ್.ಸಿ., ನಟ, ಕುವೆಂಪುನಗರ– 9902614005, ಕೆ.ತಿಮ್ಮರಾಜು, ನಟ,

ಮಂಗಳವಾರಪೇಟೆ- 9880402699, ಈಶ್ವರಪ್ಪ, ಚನ್ನಪಟ್ಟಣ, ಸಂತೋಷಕುಮಾರ್.ಪಿ., ನಟ, ಕುವೆಂಪುನಗರ- 7353787850, ಎಲ್. ರಮೇಶಯ್ಯ, ರಾಮ ಸಂಜೀವಯ್ಯ, ಸಿ.ಟಿ.ತಿಮ್ಮೇಗೌಡ, ಎ.ಪುಟ್ಟಸ್ವಾಮಿಗೌಡ, ಎಸ್.ರಮೇಶ್, ಸಿ.ಎ.ಸುರೇಶ್‌ಕುಮಾರ್, ನರಸಿಂಹ (ಸ್ನೇಹಜೀವಿ), ನಾಗಣ್ಣ, ಅಶ್ವಥ್, ಎನ್.ಮಾದೇಗೌಡ, ಆರ್.ಸೋಮಶೇಖರ್, ಶಿವರಾಮಚಂದ್ರ (ಕುಮಾರ್), ಸಿ.ವೈ.ಶೇಖರ್, ಸಿ.ಕೆ.ರಾಮೇಗೌಡ, ಪುಟ್ಟು, ಸಿ.ಜಿ.ನಾಗರಾಜು, ರಾಜು, ಸಿ.ಎ.ಶಿವಲಿಂಗೇಗೌಡ, ಶಂಕರ್, ಕೆ.ಶಿವಣ್ಣ, ಬಿ.ಕೆ.ಕುಮಾರ್, ಕೃಷ್ಣೇಗೌಡ, ಎನ್.ಪುಟ್ಟರಾಜು, ಗುರಪ್ಪ, ಶ್ರೀನಿವಾಸಮೂರ್ತಿ, ಬಿ.ಎನ್.ಮಾದೇಗೌಡ, ಆಟೋ ಶೀನಪ್ಪ, ಆರ್.ಶ್ರೀನಿವಾಸು, ಎಲ್.ನಾಗರಾಜು, ರಂಗಸ್ವಾಮಿ, ಮುತ್ತುರಾಜು, ಬಿ.ಎಂ.ಮಂಜು, ಎಚ್.ವಿ.ರಾಮೇಗೌಡ, ಡೈರಿರಾಜು, ಪರಡಿಶ್ ಭದ್ರೇಗೌಡ, ಪ.ಪ್ರಕಾಶ್ (ಜವರೇಗೌಡ), ಆರ್.ಜಿ.ವೆಂಕಟೇಗೌಡ, ಎಸ್.ಗಿರೀಶ್, ಧರಣೀಶ್.ಸಿ, ನಾರಾಯಣಗೌಡ, ಬಿ.ಬಸವರಾಜು, ಹಾಲಿನ ಸಿದ್ದೇಗೌಡ, ಆರ್.ಕೃಷ್ಣಪ್ಪ (ಡೈರಿ), ಎಸ್.ರಾಜು, ಹಾ.ರಮೇಶ, ಪುಟ್ಟಸ್ವಾಮಿಗೌಡ, ಸಿ.ಬಸವರಾಜು, ಸುರೇಶ, ಎಚ್.ಸಿ.ಚಂದ್ರ, ಬಿ. ಶಿವರಾಮು, ವಿ.ಎಂ.ರಾಮಚಂದ್ರ, ವಿ.ಕೆ.ರಮೇಶ್, ವಿ.ಡಿ.ರಾಜಣ್ಣ, ಎ.ಎಂ.ವೆಂಕಟೇಶ್, ಹ್ಯಾಮಗಿರಿ ರಾಮಣ್ಣ, ಎ.ಗೋಪಾಲ್, ಡಿ.ರಾಜು, ವಿ.ಎಂ.ರಮೇಶ್, ವಿ.ಸಿ.ಕೃಷ್ಣಪ್ಪ, ವಿ.ಎಂ.ರಾಜಣ್ಣ, ಆರ್. ರಾಜಾಚಾರ್, ವಿ.ಎಂ.ಮುತ್ತೇಗೌಡ, ಕುಳ್ಳಿಕರಡಿ ಪುಟ್ಟರಾಮು, ವಿ.ಎಂ.ಶ್ರೀನಿವಾಸು, ವಿ.ಡಿ.ಶಿವರಾಮು, ವಿ.ಕೆ.ಚಂದ್ರು, ಕುಳ್ಳಿಕರಡಿ ಮಾಯಿಗೌಡ, ವಿ.ಕೆ.ತಿಮ್ಮೇಗೌಡ, ಜಿ. ಗುರುಮೂರ್ತಿ, ಟಿ.ಗುರುಮೂರ್ತಿ, ಕೆ.ಶಿವಲಿಂಗಯ್ಯ, ಎನ್.ಎಸ್.ಬಸವರಾಜು, ಡಿ.ನಾರಾಯಣ, ಶಿವಪ್ರಸಾದ್ ಕೆ.ಇ.ಬಿ., ಡಿ.ಗುರುಮೂರ್ತಿ, ಎನ್.ಡಿ.ಕುಮಾರ, ರಾಯಪ್ಪ, ಜಿ.ಶಂಕರಮೂರ್ತಿ, ಆರ್.ರಂಗನಾಥ್, ಎಸ್.ಎನ್.ಶಿವಕುಮಾರ್, ಡಿ.ಹೊನ್ನಗಿರಿ, ಡಿ.ಶ್ರೀನಿವಾಸ್ ಕೆಇಬಿ, ಅಣ್ಣಯ್ಯ ಕೆಇಬಿ, ಕುಮಾರಸ್ವಾಮಿ, ಕೆ.ಎಂ.ಮಲ್ಲೇಶ್, ಎಸ್.ಆರ್.ಪಾಪಣ್ಣ, ಎಸ್.ಪುಟ್ಟೇಗೌಡ, ಎಸ್.ಕೆ.ಶಿವಣ್ಣ, ಎಸ್.ಆರ್.ರಮೇಶ್, ಎಸ್.ಪಿ.ಚಲುವೇಗೌಡ, ಎಸ್.ಟಿ.ಬಸವರಾಜು, ಹೋಟೆಲ್ ಪುಟ್ಟಸ್ವಾಮಿ, ಮರೇಗೌಡ, ಎಸ್.ಆರ್.ಪರಮೇಶ, ಎಸ್.ಬಿ.ಪುಟ್ಟಸ್ವಾಮಿ, ಎಚ್.ಸಿ.ಮುತ್ತುರಾಜ್, ಎಸ್.ಟಿ.ರಾಮೇಗೌಡ, ಲೋಕೇಶ್, ಕೆ.ಪಿ.ಗೋವಿಂದ, ಕೆ.ಪಿ.ಮೂರ್ತಿ, ವಿ.ಲೋಕೇಶ್, ಎಚ್.ಕೆ.ಚನ್ನಪ್ಪ, ಟಿ.ಕೃಷ್ಣ, ಎಂ.ಕೆ.ಸ್ವಾಮಿ, ಜಯರಾಮು.ಮ., ರಮೇಶ್.ಅಂ.ಮ., ರಾಮಕೃಷ್ಣಕೆ. ಎಚ್.ಚನ್ನಪ್ಪ, ಡಿ.ಗಿರಿಯಪ್ಪ, ಮಂಜು.ಕೆ.ಟಿ., ಎನ್.ವೆಂಕಟೇಶ್, ಗಿರಿಗೌಡ.ವಿ., ಸಿದ್ದಪ್ಪ ಉ// ಸೊತ್ರಪ್ಪ.ಮ.,

ಕೃಷ್ಣೇಗೌಡ.ಕೆ.ವಿ., ರಾಮಣ್ಣ.ಕೆ.ವಿ., ಮ// ಜಯರಾಮು, ಕೆ.ಎಂ.ಪಾಪಣ್ಣ, ಕೆ.ಎ.ರಾಜು, ರಮೇಶ್.ಕೆ.ಎ., ಬೋರಲಿಂಗಯ್ಯ, ಕೆ.ಟಿ.ಮರೀಗೌಡ, ಎಂ.ಲಂಕಪ್ಪ, ಕೆ.ರಾಮರ್ಕರಪ್ಪ, ರಾಮು.ಕೆ., ಮಂಜು.ಕೆ.ಟಿ., ವೆಂಕಟೇಶ್.ಕೆ.ಎನ್., ಗುರುಮೂರ್ತಿ, ಸಿ.ಶಿವಪ್ರಸಾದ್, ಡಿ.ನಾರಾಯಣ, ಬಸವರಾಜು ಬಿಎಂಟಿಸಿ, ಟಿ.ಎನ್.ಸತ್ಯನಾರಾಯಣ, ಶಿವಮೂರ್ತಿ, ಡಿ.ಗುರುಮೂರ್ತಿ, ನಾಗಮೂರ್ತಿ, ಕಾಳಯ್ಯ, ಶಿವಮೂರ್ತಿ, ರಂಗಸ್ವಾಮಿ, ಗಿರಿಧರ, ನಾಗಮೂರ್ತಿ, ಜಿ.ಅನಿಲ್‌ಕುಮಾರ್, ಡಬ್ಲ್ಯೂ.ಟಿ.ಚಂದ್ರಕಾಂತ್, ಅಣ್ಣಯ್ಯ, ಕಲ್ಯಾಣ್ ಶಂಕರ್.ಟಿ., ಶಿವರುದ್ರಯ್ಯ, ಪೊಲೀಸ್ ಇಲಾಖೆ, ಎಸ್.ಪುಟ್ಟಸ್ವಾಮಿ, ಎ.ಸಿ.ಚಿಕ್ಕಚನ್ನಯ್ಯ, ಬಿ.ಶಿವಲಿಂಗಯ್ಯ, ಅರ್ಜುನ, ಕೆ.ರಮೇಶ್, ಎಂ.ಯೋಗಮೂರ್ತಿ, ಮುದ್ದುರಾಜು, ರಾಮಲಿಂಗಯ್ಯ, ಡಿ.ಪುಟ್ಟೇಗೌಡ, , ತಹಶೀಲ್ದಾರ್, ಸಿ.ರಾಮಣ್ಣ, ಬಿ.ಪಿ.ಕಾಳಯ್ಯ, ನಂಜುಂಡೇಗೌಡ, ಸಿ.ರಾಜಶೇಖರ್, ಸಿ.ಎಂ.ನಾಗರಾಜು, ಚಿಕ್ಕರಾಜು, ಕೆ.ಎಸ್.ನಾರಾಯಣಸ್ವಾಮಿ, ಹಾ.ಸಿ.ಗುರುವಪ್ಪ, ಸಿ.ಹುಚ್ಚಪ್ಪ, ಸೋಮಲಿಂಗಪ್ಪ, ಸಿ.ಎಚ್.ಕಾಳೀರೇಗೌಡ, ಸಿ.ಎಸ್.ಯೋಗೇಶ್, ಸಿ.ಕೆ.ವೆಂಕಟೇಶ್, ಸಿ.ಕೆ.ಶಂಕರ್, ಸಿ.ಎಸ್.ರಮೇಶ್, ಸಿ.ಸಿ.ಹುಚ್ಚಪ್ಪ, ಸಿ.ಪಿ.ನಾಗರಾಜು, ಸಿ.ಎಸ್.ವಾಸು, ಚೆಲುವರಾಜು, ಸಿ.ಎಸ್.ಲಿಂಗೇಗೌಡ, ಸಿ.ಎಸ್.ರಾಜು, ಸಿ.ಎಂ.ಸದಾನಂದ, ಸಿ.ಬಿ.ಕುಮಾರ, ಕೆ.ಹುಚ್ಚೀರಯ್ಯ, ಸಿ.ಎಂ.ಜಗದೀಶ್, ನವೀನ್, ಚೌಡಯ್ಯ, ರಾಮಕೃಷ್ಣ, ಎಸ್.ವಿ.ಶಿವಸ್ವಾಮಿ, ಎಸ್.ಎಂ.ಪ್ರಕಾಶ್, ಎಸ್.ಆರ್.ತಮ್ಮಣ್ಣ, ಎಸ್.ವಿ.ಪಾಪಣ್ಣ, ಮಂಟಿಕಯ್ಯ, ಸಿದ್ದರಾಮಶೆಟ್ಟಿ, ರಾಜಪ್ಪ (ಎನ್.ಡಿ.ಬೀರೇಗೌಡ), ಜವರಾಯೀಗೌಡ, ಚಿಕ್ಕಬೊಕ್ಕಶೆಟ್ಟಿ, ಯತೀಶ್, ಎಸ್.ಗಿರೀಶ್, ಎಸ್.ಜಿ.ರಾಜು, ಶಿವರಾಜು, ಶಿವನಂಜಯ್ಯ, ಎಸ್.ಚಿಕ್ಕಹುಚ್ಚಯ್ಯ, ನಾರಾಯಣ, ಬಿ.ಸಿ.ಕೆಂಚೇಗೌಡ, ಕಾಳೇಗೌಡ, ಶಿವಮಾದ, ಬಿ.ವಿ.ದೊಡ್ಡತಮ್ಮಯ್ಯ, ಡಿ.ತಿಮ್ಮಪ್ಪ, ಬಿ.ಮರಿಸ್ವಾಮಿ, ಎ.ಬಿ.ತಿಮ್ಮೇಗೌಡ, ಕೆ.ಕೃಷ್ಣ, ಎಂ.ವೆಂಕಟಗಿರಿಯಯ್ಯ, ಎಂ.ಪುಟ್ಟಸ್ವಾಮಿ, ಕೆ.ಚಿಕ್ಕಣ್ಣ, ಡಿ.ಮಸಾಲಯ್ಯ, ಬಿ.ಗುರುವಯ್ಯ, ಸಿ.ಗುರುವಯ್ಯ, ಎಂ.ಪುಟ್ಟಮಾದಯ್ಯ, ಚಿಕ್ಕಮಾದೇಗೌಡ, ಎಸ್.ಪುಟ್ಟಪ್ಪ, ಟಿ.ನಾಗೇಶ್, ಸಿ.ತಿಮ್ಮಯ್ಯ, ಎಂ.ತಿಮ್ಮಯ್ಯ, ಬಿ.ಪುಟ್ಟರಾಜು, ಸಿ.ವೆಂಕಟೇಶ್, ಕೆ.ಸಿ.ಸುರೇಶ್, ಬಿ.ರಮೇಶ್, ರಾಜಶೇಖರ, ಸೂತ್ತೇಗೌಡ, ಕೆ.ಎಚ್.ಕೆಂಪೇಗೌಡ, ಎಚ್.ಬಸವರಾಜು, ಪುಟ್ಟಸ್ವಾಮಿ, ಚಿ.ಚನ್ನೇಗೌಡ, ಸಿದ್ದರಾಮು.ಎಸ್., ಶಿಕ್ಷಕ, ಕೆ.ಶಿವಣ್ಣ, ಕೆ.ಸಿ.ರಾಜು, ಬಿ.ಬಸವರಾಜು, ಕೆ.ಎಲ್.ಶಿವಲಿಂಗಯ್ಯ, ಶಿವಬೀರಯ್ಯ, ಮಲ್ಲೇಶ್, ಸಿದ್ದಲಿಂಗೇಗೌಡ, ಶಿವಣ್ಣ, ಟಿ.ಜಯರಾಮೇಗೌಡ, ಚಂದ್ರ, ಕೆ.ಗುರುರಾಜು, ಎನ್.ಶಿವನಂಜೇಗೌಡ, ಕೃಷ್ಣೇಗೌಡ,

ರಾಮೇಗೌಡ, ಎಂ.ಶಿವಣ್ಣ, ಟಿ.ತಿಮ್ಮೇಗೌಡ, ಬಿ.ಕಂಪೇಗೌಡ, ಎಂ.ಆರ್.ನಾರಾಯಣ, ಬಿ.ಶಿವರಾಜು, ಟಿ.ರಾಜು (ತಿಮ್ಮಪ್ಪ), ಕೆ.ಮರೀಗೌಡ, ಚಿಕ್ಕೇಗೌಡ, ಅಂಗಡಿ ಪುಟ್ಟಸ್ವಾಮಿ, ಎಸ್.ಪುಟ್ಟಸಾಮಾಚಾರ್, ಎಂ.ಟಿ.ನಾಗರಾಜು, ಸಿ.ಗೋಪಾಲ್ –9902614005, ಎಚ್.ಮಂಜುನಾಥ್, ಎಲೆಕೇರಿ– 9241213333, ಎನ್.ಸುಕೀರ್ತಿ, ನಾಗವಾರ– 9731037794, ಎಂ.ಜಿ. ಮಹೇಶ್‌ಕುಮಾರ್ – 9902614005 ಮುಂತಾದವರು.

## ಜಿ.ವೆಂಕಟೇಶ್ (ಹ/ಪೌ)



**ಮೊ: 9844385599, ಚನ್ನಪಟ್ಟಣ**

ಜಿ.ವೆಂಕಟೇಶ್ ಅವರು ರಾಮನಗರ ಜಿಲ್ಲೆ, ಚನ್ನಪಟ್ಟಣ ತಾಲ್ಲೂಕಿನ ಕೂಡ್ಲೀರಿನವರು. 1983 ರಿಂದ ಇಂದಿನವರೆವಿಗೂ ರಂಗಭೂಮಿಯಲ್ಲಿ ನಟರಾಗಿ ಸಕ್ರೀಯವಾಗಿ ತೊಡಗಿಕೊಂಡಿರುವ ಇವರು ಅಭಿನಯಿಸಿದ ನಾಟಕ ಹಾಗೂ ಪಾತ್ರಗಳೆಂದರೇ: ಕುರುಕ್ಷೇತ್ರ–ಶಕುನಿ, ದುರ್ಯೋಧನ, ರಾಮರಾಜ್ಯ–ಖಳನಾಯಕ, ಕುರಿದೊಡ್ಡಿ ಕುರುಕ್ಷೇತ್ರ–ಛೇರ್ಮನ್ ಚೆಲುವೇಗೌಡ, ತ್ರಿಜನ್ಮಮೋಕ್ಷ–ಹಿರಣ್ಯ, ರಾಮಾಯಣ–ರಾವಣ, ಶ್ರೀಕೃಷ್ಣಸಂಧಾನ–ದುರ್ಯೋಧನ, ಮುಂತಾದ ನಾಟಕಗಳಲ್ಲಿ ಅಭಿನಯಿಸಿ ಪ್ರಶಸ್ತಿ, ಪುರಸ್ಕಾರಗಳನ್ನು ಗಳಿಸಿದ್ದಾರೆ.

## ರಂಗಭೂಮಿ ಕಲಾವಿದೆ ಚನ್ನಬಸಪ್ಪ.ಶಿವಪ್ಪ.ಕಾಳೆ

ಚನ್ನಬಸಪ್ಪ.ಶಿವಪ್ಪಕಾಳೆ ಅವರು ಮೂಲತ: ಧಾರವಾಡ ಜಿಲ್ಲೆಯ ಹುಬ್ಬಳ್ಳಿ ತಾಲ್ಲೂಕಿನ ಬಮ್ಮಸಮುದ್ರ ಗ್ರಾಮದವರು, 1977 ರಿಂದ ನಿರಾಂತರ ರಂಗಭೂಮಿಯಲ್ಲಿ ಮುಖ್ಯಪಾತ್ರಗಳಲ್ಲಿ ಅಭಿನಯಿಸಿದ ಹೆಗ್ಗಳಿಕೆ ಇವರದು. ವೃತ್ತಿ ರಂಗಭೂಮಿ, ಹವ್ಯಾಸಿರಂಗಭೂಮಿ, ಎರಡಕ್ಕೂ ಇವರು ಸೈ, ಹಾಗೆಯೇ

ಧಾರವಾಡ ಆಕಾಶವಾಣಿ ನಾಟಕಗಳಲ್ಲಿಯೂ ಅಭಿನಯ ಮಾಡಿದ್ದಾರೆ. ಇವರು ಎಂ.ಎ ಪದವೀಧರರು.

ಈಗ ಸುಮಾರು ವರ್ಷಗಳಿಂದ ರಾಮನಗರ ಜಿಲ್ಲೆಯ ಚನ್ನಪಟ್ಟಣದಲ್ಲಿ ವಾಸವಾಗಿದ್ದು ರಾಜ್ಯದ ನಾನಾ ಕಡೆ ನಾಟಕಗಳಲ್ಲಿ ಅಭಿನಯಿಸುತ್ತಿದ್ದಾರೆ. ಸುಮಾರು 62 ನಾಟಕಗಳು 41 ಧಾರಾವಾಹಿ, 8 ಚಲನಚಿತ್ರ, 9 ರೇಡಿಯೋ ನಾಟಕಗಳಲ್ಲಿ ಅಭಿನಯಿಸಿದ್ದಾರೆ.

ಮುಖ್ಯವಾಗಿ ಅಣ್ಣ–ತಂಗಿ, ಬಸ್‌ಹಮಾಲ ಆದರ್ಶಪ್ರೇಮ, ರಣದುಂಧುಬಿ, ಸಿಂಧೂರ ಲಕ್ಷ್ಮಣ, ಹರಿಜನವಾರ ಬಂಗಾರದಕೊಡ, ರಕ್ತರಾತ್ರಿ, ಮೆರವಣಿಗೆ, ಹಲೋಇಂಡಿಯಾ ಸಂಗೋಳ್ಳಿರಾಯಣ್ಣ, ಪದ್ಮಾವತಿ ಮಹಾತ್ಮೆ, ಗೌಡ್ರಗದ್ಲ, ಕಲಿತಕಳ್ಳ ಹೆಜ್ಜೆ ತಪ್ಪಿದ ಹೆಣ್ಣು, ಕುರುಕ್ಷೇತ್ರ, ಸಿಕ್ಕೇದುಂಗುರ ಮಿಷಮ ವಿವಾಹ ಭಾರತಸುಂದರಿ, ಜಗಜ್ಯೋತಿ ಬಸವೇಶ್ವರ ನಾಯಿಕತೆ, ಜಯಕರ್ನಾಟಕ ಗುಲಾಮಗಂಡ, ಎಚ್ಚಮನಾಯಕ ಅಶ್ವಗಾಂಧಿ, ರಾಮಾಯಣ, ಜಾತ್ರೆ, ವೀರಕಂಕಣ, ಮಂಗಳಾ ನನ್ನ ಅತ್ತಿಗೆ, ಜನನಾಯಕ ಮುಂತಾದ ನಾಟಕಗಳಲ್ಲಿ ಅಭಿನಯಿಸಿದ್ದಾರೆ. ರಕ್ತರಾತ್ರಿಯಲ್ಲಿ ದುರ್ಯೋಧನ, ಬಸವೇಶ್ವರದಲ್ಲಿ ಬಿಜ್ಜಳ ಸಿಂಧೂರ ಲಕ್ಷ್ಮಣದಲ್ಲಿ ಇನ್‌ಸ್ಪೆಕ್ಟರ್ ಹಾಗೂ ಗೌಡ, ಕಳ್ಳರು ಮಹಾಕಳ್ಳರು ಹಾಸ್ಯನಾಟಕಲ್ಲಿ ಮುಖ್ಯ ಪಾತ್ರ ರೈತನ ಮಕ್ಕಳು ನಾಟಕದ ನಿರ್ದೇಶನದ ಹೊಣೆ ನಿರ್ವಹಣೆ ಮಾಡಿದ್ದಾರೆ.

## ಸುರೇಶ್.ಎಚ್

ರಾಮನಗರ ಜಿಲ್ಲೆಯ ಚನ್ನಪಟ್ಟಣ ತಾಲ್ಲೂಕಿನ ರಾಮಪುರ ಗ್ರಾಮದ ರಂಗ ಕಲಾವಿದ ಸುರೇಶ್.ಎಚ್. ಅವರು ಮೂಲತ: ಎಲೆಕ್ಟ್ರಿಕಲ್ ವ್ಯಾಪಾರಿ. ಇವರು ಕಳೆದ 15 ವರ್ಷಗಳಿಂದ ಪೌರಾಣಿಕ ರಂಗಭೂಮಿಯಲ್ಲಿ ಸಕ್ರಿಯರಾಗಿದ್ದಾರೆ. ಇವರು ಕುರುಕ್ಷೇತ್ರ, ರಾಮಾಯಣ, ಹೇಮಾವತಿ ಕಲ್ಯಾಣ, ದಾನಶೂರ ಕರ್ಣ, ದಕ್ಷಯಜ್ಞ, ಸತ್ಯಹರಿಶ್ಚಂದ್ರ, ಕೌಂಡಲಿಕನ ವಧೆ ಇಂತಹ ಪ್ರಮುಖ ನಾಟಕಗಳಲ್ಲಿ ಕರ್ಣ, ಅರ್ಜುನ, ಶಕುನಿ, ಧರ್ಮರಾಯ, ವಿಧುರ, ಸಾತ್ಯಕಿ, ಸೇನಾಧಿಪತಿ, ಭರತ, ಜಟಾಯಿ, ಗುಹ ವೀರಭದ್ರ, ದ್ರೋಣಾಚಾರ್ಯ, ಲೋಹಿತಾಶ್ವ ಇಂತಹ ಪಾತ್ರಗಳನ್ನು ಮಾಡಿ ರಂಗ ಭೂಮಿಯಲ್ಲಿ ವಿಜಯ ಸಾದಿಸುತ್ತಾ ಬಂದಿರುತ್ತಾರೆ.

****

# ಮಾಗಡಿ ತಾಲ್ಲೂಕು

## ಹವ್ಯಾಸಿ ಕಲಾವಿದರು/ರಂಗಕರ್ಮಿಗಳು

### ಶ್ರೀ ಟಿ.ಎಂ.ನಾಗರಾಜು

**ಬೆಳಕು ವಿನ್ಯಾಸಕ (ಹವ್ಯಾಸಿ)**



**ಸಂಕರ್ಪ: 9845398006 ತಿಪ್ಪಸಂದ್ರ, ಮಾಗಡಿ**

ಮಾಗಡಿ ತಾಲ್ಲೂಕಿನ ತಿಪ್ಪಸಂದ್ರದ ಶ್ರೀ ಮರಿಹೊನ್ನಯ್ಯ ಹಾಗೂ ಶ್ರೀಮತಿ ಗಂಗಮ್ಮ ಅವರ ಪುತ್ರರಾಗಿ, 01.02.1963 ರಲ್ಲಿ ಜನಿಸಿ, ಗ್ರಾಮದಲ್ಲೇ ವಿದ್ಯಾಭ್ಯಾಸ ಮುಗಿಸಿದ್ದಾರೆ. 1987–88 ರಲ್ಲೇ ರಂಗಭೂಮಿಗೆ ಪ್ರವೇಶ ಮಾಡಿದ ನಾಗರಾಜು ಅವರು ಮೂಲತಃ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ತಾಂತ್ರಿಕ ವರ್ಗದಲ್ಲಿ ಉದ್ಯೋಗಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಇವರು ನಟರಾಗಿ ಪ್ರವೇಶ ಪಡೆದು, ನಂತರ ಬೆಳಕು ವಿನ್ಯಾಸದ ಕಡೆ ಆಸಕ್ತಿ ಹೊಂದಿದರು. ಹೆಬ್ಬೆಟ್ಟು ನಾಟಕದಿಂದಲೂ ಕೆಲಸ ಆರಂಭಿಸಿದರು. ನಂತರ ಇವರು ಅಪ್ಪ, ಬಸವನಚೆಲ್ಲಿ, ಹೆಜ್ಜೆಗಳು, ಮೈಸೂರು ಮಲ್ಲಿಗೆ, ಗಂಗಾವತರಣ, ರೋಮಿಯೋ ಜೂಲಿಯಟ್, ಮೈಮನಗಳ ಸುಳಿಯಲ್ಲಿ, ಬಡೆಸಾಬು ಪುರಾಣ, ಗಲ್ಬಕ್ಸಿ, ಅಲ್ಲೇ ಇದ್ದೋರು, ಜತೆಗಿರುವನು ಚಂದಿರ, ಮುಂತಾದ 75ಕ್ಕೂ ಹೆಚ್ಚಿನ ನಾಟಕಗಳಿಗೆ, ನೃತ್ಯ ನಾಟಕಗಳಿಗೆ, ಪಪೆಟ್ ಷೋಗಳಿಗೆ ಬೆಳಕು ವಿನ್ಯಾಸ ಮಾಡಿದ ಹೆಗ್ಗಳಿಕೆ ಇವರದು. ಪ್ರಸಿದ್ಧ ನಿರ್ದೇಶಕರ ಗರಡಿಯಲ್ಲಿ ಪಳಗಿದ್ದಾರೆ. ಬೆಳಕು ವಿನ್ಯಾಸಕ್ಕಾಗಿ ರಾಷ್ಟ್ರಮಟ್ಟದಲ್ಲಿ ಐದು ಬಾರಿ ಪ್ರಶಸ್ತಿ ಪಡೆದಿದ್ದಾರೆ. ಬಹುತೇಕ ಇವರ ವಿನ್ಯಾಸದ ನಾಟಕಗಳು ಪ್ರಶಸ್ತಿಗಳಿಗೆ, ಸ್ಪರ್ಧೆಗಳಿಗೆ ತಯಾರಾಗಿರುವುದು ವಿಶೇಷ. ಎಸ್.ಎಲ್.ಎನ್. ಸ್ವಾಮಿ ನಿರ್ದೇಶನದ 'ಸಾರಥ್ಯ' ನಾಟಕವು ನಿರಂತರ 52 ಗಂಟೆ 20 ನಿಮಿಷ ನಡೆದು ಲಿಮ್ಕಾ ಆಫ್ ರೆಕಾರ್ಡ್

ಪ್ರಶಸ್ತಿ ಪಡೆದಿದ್ದಾರೆ. 23:13 ಸೆಕೆಂಡಿನ 'ಅನು' ನಾಟಕ ಸಹ ಎಸ್.ಎಲ್.ಎನ್. ಸ್ವಾಮಿ ನಿರ್ದೇಶನದಲ್ಲಿ 1989 ರಲ್ಲಿ ಲಿಮ್ಕಾ ಪ್ರಶಸ್ತಿ ಗಳಿಸಿದೆ. ಇದಕ್ಕೆ ನಾಗರಾಜು ಅವರು ಬೆಳಕು ವಿನ್ಯಾಸ ಮಾಡಿದ್ದಾರೆ. ಪ್ರಸ್ತುತ 2011 ರ 'ನಾಟಕ ಅಕಾಡೆಮಿ ಪ್ರಶಸ್ತಿ' ಪ್ರದಾನ ಮಾಡಲಾಗಿದೆ.

## ಸಂಪರ್ಕ: ಖಂಡಪರಶು



**ಕನ್ನಡಮೊನಗೂಡು, ಚೆನ್ನಪ್ಪ ಬಡಾವಣೆ, ಮಾಗಡಿ, ಮೊ: 9449021838**

ಮೂಲತಃ ಕೋಲಾರದ ಬಾಗೆಪಲ್ಲಿಯ ಖಂಡಪರಶು ಅವರು ಕಳೆದ 32 ವರ್ಷಗಳಿಂದ ಮಾಗಡಿಯಲ್ಲಿ ವಾಸವಾಗಿದ್ದಾರೆ. ಇವರ ತಂದೆ ಲೇ. ಎಸ್.ಎಲ್.ರಂಗಾಚಾರ್ಯ, ತಾಯಿ ಲಕ್ಷ್ಮಿದೇವಮ್ಮ ಪುತ್ರರಾಗಿ, 10.02.1958 ರಲ್ಲಿ ಜನಿಸಿ ಇವರು,



**ಮಾಗಡಿಯಲ್ಲಿ ನಡೆದ ಪೌರಾಣಿಕ ನಾಟಕದ ದೃಶ್ಯ**

ಶಾಲಾ ದಿನಗಳಲ್ಲಿ ಗುರುಗಳಾದ ಬಿ.ಎ.ಕೃಷ್ಣಮೂರ್ತಿ ಅವರ ಪ್ರೇರಣೆಯಿಂದ ರಂಗಭೂಮಿಗೆ ಬಂದಿರುವ ಇವರು ಮೂಲತಃ ಪತ್ರಕರ್ತರು.

**ನಾಟಕ ರಚನೆ:** ಪ್ರಸವ ಪ್ರಸಂಗ (ಪ್ರಾಯೋಗಿಕ ನಾಟಕ)

**ನಿರ್ದೇಶನ:** ಕುಂತರ ಕುಣಿತ, ಮೂಗರ ಮೇಳ, ಯಮಳ ಪ್ರಶ್ನೆ, ಮೂವರು ಕಿವುಡರು, ಚಾಮಣ್ಣನ ಚಿರೋಟಿ, ಮುಂತಾದ 22ಕ್ಕೂ ಹೆಚ್ಚು ಹಾಸ್ಯ ನಾಟಕಗಳಲ್ಲಿ ಅಭಿನಯಿಸಿ, ನಿರ್ದೇಶನ ಮಾಡಿ ಜನ ಮನ್ನಣೆ ಗಳಿಸಿದ್ದಾರೆ.

## ಹವ್ಯಾಸಿ ನಟರು

ರಾಜಶೇಖರ, ಕೂದುರು, ನಾರಾಯಣಪ್ಪ, ಹೊಸಪೇಟೆ, ಹನುಮಂತಯ್ಯ, ಮಣಿಗನಹಳ್ಳಿ, ಜಿ.ವಿ. ರಾಮಕೃಷ್ಣಪ್ಪ, ಗುಡೆಮಾರನಹಳ್ಳಿ, ಶಿವಣ್ಣ, ಚಿಕ್ಕಚೆನ್ನಹಳ್ಳಿ, ರಾಮಕೃಷ್ಣರಾವ್, ಸಿ.ಬಿ. ಅಶೋಕ್, ಗಂಟಗಯ್ಯನಪಾಳ್ಯ, ಚಿಕ್ಕವೀರಯ್ಯ, ಮಾಗಡಿ.

## ಬೈರ್ನಳ್ಳಿ ಶಿವರಾಮ್

ನಟ, ನಿರ್ದೇಶಕ, ರಂಗತಜ್ಞ, ಜಾನಪದ ಸಂಶೋಧಕ, ಬೈರ್ನಳ್ಳಿ ಶಿವರಾಮ್ ಅವರು ಮಾಗಡಿ ತಾಲ್ಲೂಕಿನ ಬಡ ಕುಟುಂಬದಲ್ಲಿ 1961 ರ ಜು. 02 ರಂದು ನಿಟ್ಟೂರು ಲಿಂಗಯ್ಯ ಮತ್ತು ಜಯಮ್ಮ ದಂಪತಿಗಳ ಪುತ್ರರಾಗಿ ಜನಿಸಿದರು. ಶ್ರೀ ಶಿವರಾಮ್ ಅವರು ಆಧುನಿಕ ಗಾಂಧಿ ಎಂದೆ ಹೆಸರಾಗಿದ್ದ ದಿ|| ಎಸ್. ಕರಿಯಪ್ಪನವರ ರೂರಲ್ ಕಾಲೇಜು, ಕನಕಪುರ ಇಲ್ಲಿ ಪದವಿ ಶಿಕ್ಷಣ ಪಡೆದರು. ಆರಂಭದಿಂದಲೇ ಇವರಿಗೆ ರಂಗಭೂಮಿ ಕಡೆಗೆ ಆಸಕ್ತಿ ಇತ್ತು. ಪದವಿ ವ್ಯಾಸಂಗದ ಹಂತದಲ್ಲಿ ಹೆಸರಾಂತ ರಂಗಕರ್ಮಿ ಶ್ರೀ ಇಕ್ಬಾಲ್ ಅಹಮದ್ ಮೊದಲ ರಂಗ ಗುರು. ಇಕ್ಬಾಲ್ ಅವರು ಕನಕಪುರದಲ್ಲಿ ಜನಸ್ಪಂಧನ ಯೋಜನೆಯಲ್ಲಿ ನಡೆಯುತ್ತಿದ್ದ ರಂಗ ತರಬೇತಿಯ ನಿರ್ದೇಶಕರಾಗಿದ್ದಾಗ ಇಕ್ಬಾಲ್ ಅಹಮದ್ ಅವರು ಬೈರ್ನಳ್ಳಿ ಶಿವರಾಮು ಅವರಲ್ಲಿನ ರಂಗ ಪ್ರತಿಭೆಯನ್ನು ಗುರುತಿಸಿ ಅದನ್ನು ರಂಗಭೂಮಿಗೆ ದುಡಿಸಿಕೊಂಡರು. ಅದೇ ರೀತಿ ಪ್ರಾಧ್ಯಾಪಕ ತಿಮ್ಮೆಗೌಡ ಅವರು ಶಿವರಾಮು ಅವರು ರಂಗ ಭೂಮಿಗೆ ತೊಡಗಿಕೊಳ್ಳಲು ಪ್ರೇರಣೆ ನೀಡಿದವರಲ್ಲಿ ಒಬ್ಬರು. ಪ್ರೌಢ ಶಾಲೆಯ ಹಂತದಲೇ ಯಕ್ಷ ಪ್ರಶ್ನೆ ನಾಟಕದಲ್ಲಿ ಅರ್ಜುನನ ಪಾತ್ರವಹಿಸಿದ್ದ ಶಿವರಾಮ್ 1985–86 ರ ಸಾಲಿನ ನೀನಾಸಂ ತರಬೇತಿ ಶಿಬಿರದಲ್ಲಿ ಒಂದು ವರ್ಷದ ನಾಟಕ ತರಬೇತಿ ಪಡೆದು ಮಾಗಡಿ ತಾಲ್ಲೂಕಿನಲ್ಲಿ ಬಿ.ವಿ. ಕಾರಂತರ ಯಡ್ಡಾಯಣ ನಾಟಕವನ್ನು ಮೊದಲ ಬಾರಿಗೆ ನಿರ್ದೇಶಿಸಿ ಯಶಸ್ವಿಯಾದರು. ಬೈರ್ನಳ್ಳಿ ಶಿವರಾಮು ಅವರು ಹಲವಾರು ಶಾಲಾ–ಕಾಲೇಜುಗಳಲ್ಲಿ ಮಕ್ಕಳ ರಂಗ ತರಬೇತಿ ಶಿಬಿರಗಳನ್ನು ನಡೆಸಿದ್ದಾರೆ. ಮಕ್ಕಳಿಗಾಗಿ ಕಿಂದರಜೋಗಿ ಯಡ್ಡಾಯಣ, ಗೊಂಬೆರಾಮ, ಮೂಡಲಪಾಯ ಯಕ್ಷಗಾನದ ಬೆಬ್ಬೇತು, ಧನ್ವಂತರಿ ಚಿಕಿತ್ಸೆ, ದೆವ್ವದ ಮನೆ, ಜಲಗಾರ, ಲವಕುಶ ಮುಂತಾದ ನಾಟಕಗಳನ್ನು ನಿರ್ದೇಶಿಸಿದ್ದಾರೆ. ಅಲ್ಲದೆ ಸತತ ರಂಗ ತರಬೇತಿ ಶಿಬಿರಗಳನ್ನು ನಡೆಸಿರುವ

ಶಿವರಾಮ್ ಅವರು ಅಗ್ನಿ, ಶುನಶೇಪ, ಸ್ವರ್ಗಸ್ಥ, ವ್ಯವಸ್ಥೆ, ಕರಿಭಂಟ, ಕೆರೆಗೆಹಾರ ಮುಂತಾದ ನಾಟಕಗಳ ನಿರ್ದೇಶನ ಮಾಡಿದ್ದಾರೆ. ಬೈರ್ನಳ್ಳಿ ಶಿವರಾಮು ಅವರಿಗೆ ಅಗ್ನಿ ನಾಟಕಕ್ಕೆ ಡಾ. ರಾಜ್‌ಕುಮಾರ್ ಪರ್ಯಾಯ ಪಾರಿತೋಷಕ ಪ್ರಶಸ್ತಿ ಹಾಗೂ ಕರಿಭಂಟ ನಾಟಕಕ್ಕೆ ಅಖಿಲ ಭಾರತ ಮಟ್ಟದಲ್ಲಿ ಪ್ರಥಮ ಬಹುಮಾನ ಸಹ ಬಂದಿರುತ್ತದೆ.

ಶಿವರಾಮು ಅವರು ರಂಗಭೂಮಿ ಜೋತೆಗೆ ಜಾನಪದ ಲೋಕದ ನಂಟನ್ನು ಹೊಂದಿದವರು, ಇವರು ಜಾನಪದ ವಿದ್ವಾಂಸ ಸಿದ್ದಗಂಗಯ್ಯ ಕಂಬಾಳು ಅವರ ನೇರವಿನಿಂದ ಜಾನಪದ ತಜ್ಞ ಎಚ್.ಎಲ್. ನಾಗೇಗೌಡರಿಗೆ ಆಪ್ತರಾಗಿ ರಾಮನಗರದ ಜಾನಪದ ಲೋಕದಲ್ಲಿ ಹಲವಾರು ರಂಗಭೂಮಿಯ ಕಾರ್ಯಕ್ರಮಗಳನ್ನು ನಡೆಸಿದ್ದಾರೆ.

ಶ್ರೀ ಬೈರ್ನಳ್ಳಿ ಶಿವರಾಮು ಅವರಿಗೆ ಇತ್ತೀಚೆಗೆ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ ಸಹ ಲಭಿಸಿದೆ.

****

## ಡಿ.ದೇವರಾಜು

**#14, ಮುನೇಶ್ವರ ನಗರ, 1ನೇ ಮುಖ್ಯರಸ್ತೆ,2ನೇ ಅಡ್ಡರಸ್ತೆ, ಬೆಂಗಳೂರು–79.**

**ಮೊ: 9845398502**

ಮಾಗಡಿಯ ಸಿದ್ದಯ್ಯನಪಾಳ್ಯದ ದೇವಯ್ಯ ನವರ ಪುತ್ರರಾದ ಡಿ.ದೇವರಾಜು ಅವರು ರಂಗಭೂಮಿ ಕಿರುತೆರೆ ನಟ, ನಿರ್ದೇಶಕ, ಚಲನಚಿತ್ರ ಕೀರ್ತನಕಾರರು, ನಾಟಕಕಾರ, ನಿರೂಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರು ರಾಜಪೇಟೆ, ಮಂಟೇಸ್ವಾಮಿ ಕಥಾ ಪ್ರಸಂಗ, ನಮ್ಮ ನಿಮ್ಮೊಳಗೊಬ್ಬ, ಅಲ್ಲೇ ಇದ್ದವರು, ಸೇತು ಮಾಧವನ ಸಲ್ಲಾಪ, ಮಲ್ಲಮ್ಮನ ಮನೆ ಓಟ್ಲು, ದಾರುಣ ಭಾರತ, ರಾಜಸತ್ಯವ್ರತ, ಕೃಷ್ಣಸಂಧಾನ, ಇತರೆ ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಪ್ರಯೋಗರಂಗ, ರಂಗನಿರಂತರ, ರೂಪಾಂತರ, ಭಾಗವತನ ಸುವಳಕ ಕಲ್ಪಿಸಲು ಅಕಾಡೆಮಿ, ಇತರ ರಂಗತಂಡಗಳ ಒಡನಾಟದಲ್ಲಿರುವ ದೇವರಾಜು ಪ್ರತಿಭಾವಂತ ಕಲಾವಿದ. ಮಕ್ಕಳ ಮತ್ತು ಕಾಲೇಜು ರಂಗಭೂಮಿಯಲ್ಲೂ ತೊಡಗಿಸಿಕೊಂಡು ಹಲವಾರು ಪ್ರತಿಭೆಗಳನ್ನು, ವೇದಿಕೆಗೆ ಪರಿಚಯಿಸಿ, ನಿರ್ದೇಶಿಸಿದ್ದಾರೆ. ಹಂಪಿ

ಉತ್ಸವ, ವಿಶ್ವಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ರಂಗಗೀತೆ ಕಾರ್ಯಕ್ರಮ ನೀಡಿದ್ದಾರೆ. ಪ್ರಸ್ತುತ "ಪದ" ಸಾಂಸ್ಕೃತಿಕ ತಂಡಕಟ್ಟಿ ಸಾಂಸ್ಕೃತಿಕ ಕಾಯಕದಲ್ಲಿ ತೊಡಗಿದ್ದಾರೆ.

## ಮಾಗಡಿ ಪೌರಾಣಿಕ ರಂಗಭೂಮಿ ಕಲಾವಿದರು

**ರಮೇಶ್,** ಮಳೂರು ಪೌರಾಣಿಕ ನಿರ್ದೇಶಕರು/ ಸಹನಾಯಿ/ ಕ್ಲಾರಿಯೋನೆಟ್ ವಾದಕರು

**ಚಂದ್ರಪ್ಪ,** ಕೂಡ್ಲೂರು, ಪೌರಾಣಿಕ ನಿರ್ದೇಶಕರು/ ಸಹನಾಯಿ/ ಕ್ಲಾರಿಯೋನೆಟ್ ವಾದಕರು

**ರಾಮುಮೂರ್ತಿ,** ಮಾದಿಗೊಂಡನಹಳ್ಳಿ, ರಂಗ ನಟ/ಹರಿಕತೆ ಕಲಾವಿದ

**ನರಸಿಂಹಮುರ್ತಿ** (ರಂಗ ಕಲಾವಿದ)

**ರಂಗಣ್ಣ,** ಮಾದಿಗೊಂಡನಹಳ್ಳಿ ನಿರ್ದೇಶಕರು/ ತಬಲ ವಾದಕರು

**ಶ್ರೀಧರ್,** ಗುಡೆಮಾರನಹಳ್ಳಿ, ತಬಲ ವಾದಕರು

**ರಾಮಕೃಷ್ಣಯ್ಯ,** ಚೋಳುಪಾಳ್ಯ ರಂಗನಟ

**ಹನುಮಂತಯ್ಯ,** ಮಾಗಡಿ, ರಂಗನಟ

**ನಾರಾಯಣಪ್ಪ,** ಬಿಳಗುಂಬ, ಹಾರ್ಮೋನಿಯಂ ವಾದಕರು

**ಮಂಜುನಾಥ,** ಹೊಂಬಾಳಮ್ಮನಪೇಟೆ, ರಂಗ ಕಲಾವಿದ

**ಕೃಷ್ಣಮೂರ್ತಿ,** ಸಣ್ಣೂರು, ಪಿಟೀಲು

**ಕೃಷ್ಣಮೂರ್ತಿ,** ಕನ್ನಸಂದ್ರ, ಕೀಬೋರ್ಡ್ ವಾದಕರು

**ಸತ್ಯಪ್ಪ,** ಅರಸಿನಕುಂಟೆ, ರಂಗನಟ

****

# ಕನಕಪುರ ತಾಲ್ಲೂಕು

## ರಂಗ ಮಂದಿರಗಳು

1. ಆರ್.ಇ.ಎಸ್. ಶಿಕ್ಷಣ ಸಂಸ್ಥೆಗಳಲ್ಲಿನ ಶಾಲಾ ರಂಗಮಂದಿರಗಳು ಮತ್ತು ರೂರಲ್ ಕಾಲೇಜಿನ ರಂಗಮಂದಿರ.
2. ಡಾ.ರಾಜ್‌ಕುಮಾರ್ ಬಯಲು ರಂಗ ಮಂದಿರ, ತಾಲ್ಲೂಕು ಕಚೇರಿ ಮುಂಭಾಗ, ಕನಕಪುರ ಟೌನ್.

## ಕನಕಪುರ ರಂಗ ನಟರು/ ನಿರ್ದೇಶಕರು (ಹವ್ಯಾಸಿ)

ಬೈರ್ನಳ್ಳಿ ಶಿವರಾಮ್(ಜಾನಪದಲೋಕ) ನೀ.ನಾ.ಸಂ, ನರೇಶ್‌ಮಯ್ಯ (ನೀ.ನಾ.ಸಂ)–9663970250, ಮಂಜುಳ (ನೀ.ನಾ.ಸಂ)–9663970250, ಎಂ.ಸಿ.ನಾಗರಾಜ್–9916350712, ಶಂಭು (ರಂಗಶಾಲೆ, ಕುಂದಾಪುರ), ಮುನಿಚೌಡಪ್ಪ (ನೀ.ನಾ.ಸಂ)

## ರಂಗ ಚಟುವಟಿಕೆ

ಹೊರಜಿಲ್ಲೆಯಿಂದ ಬಂದು ಕನಕಪುರದಲ್ಲಿ ರಂಗಕಾಯಕವನ್ನು, ಇಕ್ಬಾಲ್ ಅಹಮದ್, ಬಸವಲಿಂಗಯ್ಯ.ಸಿ., ತಾಜೂಮಾ, ಕಾನಕಾನಳ್ಳಿ ಗೋಪಿ, ಸುರೇಶ ಆನಗಳ್ಳಿ ಮುಂತಾದವರು ಮಾಡಿದ್ದಾರೆ. ಇಕ್ಬಾಲ್ ಅವರು ಬುಡಕಟ್ಟು ಬಂಜಾರ ಅವಿದ್ಯಾವಂತ ರಂಗ ಕಲಾವಿದರಿಂದ ಗೊಂಬೆ ಮ್ಯಾಕ್‌ಬೇತ್ ಪ್ರಯೋಗಿಸಿ ಯಶಸ್ವಿಯಾಗಿ, ಕನಕಪುರಕ್ಕೆ ರಂಗಭೂಮಿಯ ಭೂಪಟದಲ್ಲಿ ಹೆಸರು ತಂದವರು. ಹಾಗೇ ತುಕ್ರನ ಕನಸು, ಬ್ರೆಕ್ಟ್‌ನ ಮೂರು ಕಾಸಿನ ಸಂಗೀತ ನಾಟಕ, ತ್ರಿಪೆನ್ನಿ ಅಪೇರಾ ಮುಂತಾದ ನಾಟಕ ಪ್ರಯೋಗಿಸಿದ್ದಾರೆ.


ಕನಕಪುರಕ್ಕೆ ಹೊರಗಿನ ಪ್ರಯೋಗಗಳಲ್ಲಿ ರಂಗಾಯಣದ ನಾಟಕಗಳು, ಸಂಕೇತ್ ತಂಡದ ನಾಟಕ ಪ್ರಯೋಗಗಳು, ನೀನಾಸಂ ತಿರುಗಾಟ ಪ್ರಯೋಗಗಳು ಸೇರಿವೆ. 20.08.1999 ರಲ್ಲಿ ಸಿ// ಎಸ್.ಕರಿಯಪ್ಪ ಸ್ಮರಣಾರ್ಥ ಟೌನ್ ಟೆನಿಸ್ ಕೋರ್ಟಿನಲ್ಲಿ 'ಜಿಲ್ಲಾ ನಾಟಕೋತ್ಸವ' ಆಯೋಜಿಸಲಾಗಿತ್ತು. ಕನ್ನಡ ಸಾಹಿತ್ಯ ಅಕಾಡೆಮಿ ವತಿಯಿಂದ 1982 ರಲ್ಲಿ ಕನ್ನಡ ನಾಟಕ ಪರಂಪರೆ ಕುರಿತ 10 ದಿನಗಳ ನಾಟಕ ಕಮ್ಮಟ ನಡೆಸಲಾಗಿದೆ. ಕರಿಯಪ್ಪ ಅವರು ತಾಲ್ಲೂಕು ಮಟ್ಟದ ರಂಗ ಕಲಾವಿದರ ಸಮ್ಮೇಳನ ಆಯೋಜಿಸಿರುತ್ತಾರೆ.

## ಕನಕಪುರ ತಾಲ್ಲೂಕು
## ವಸ್ತ್ರಾಲಂಕಾರ / ಪ್ರಸಾಧನ


1975–76 ರ ಸುಮಾರಿಗೆ ಕನಕಪುರ ತಾಲ್ಲೂಕಿನ ಲಿಂಗೇಗೌಡ ಅವರು ಡ್ರಾಮಸೀನರಿ ಕಂಪನಿ ತೆರೆದಿದ್ದರು. ಇದೇ ಮುಂದೆ 'ವೆಂಕಟೇಶ್ವರ ಡ್ರಾಮನೇನರಿ' ಕಗ್ಗಲಹಳ್ಳಿ ಪ್ರೇರಣೆ ಒದಗಿಸಿತು. ಇಲ್ಲಿ ಮುತ್ತಕದ ಪಾಳ್ಯ, ಕಗ್ಗಲಹಳ್ಳಿ ಅಂಚೆಯ 'ಚೌಡೇಶ್ವರಿ ವಸ್ತ್ರಾಲಂಕಾರ'ದ ವಸ್ತ್ರಾವಿನ್ಯಾಸಕ ಮಲ್ಲೇಶ್ ಅವರು ಇಲ್ಲಿ ಸೌಂಡ್ ಆಪರೇಟರ್ ಆಗಿ ಕೆಲಸ ಮಾಡುತ್ತಿದ್ದರು. ಇದೇ ಕಾಲದಲ್ಲಿ 'ನಟರಾಜ ಸೌಂಡ್‌ಸಿಸ್ಟಂ ರಾವತ್‌ಹಳ್ಳಿ', 'ಕಾಳಿಕಾಂಬ ಡ್ರಾಮಸಿನೇರಿ (ಕಾಳಾಚಾರ್ ಅವರ) ಮಾಗಡಿರಸ್ತೆ', ಕಗ್ಗಲಹಳ್ಳಿಯ ಶಿವಣ್ಣ ಅವರ 'ಮಹಾದೇಶ್ವರ ಡ್ರಾಮಸಿನೇರಿ'ಯು ಪ್ರಸಕ್ತ ಮರಳವಾಡಿಯಲ್ಲಿದೆ. 'ನಾಗಾರ್ಜುನ ಡ್ರಾಮಸಿನೇರಿ' ಸಹ ಕನಕಪುರದ ಅಂದರೆ ರಾಮನಗರ ಜಿಲ್ಲೆಯ ಕಲಾವಿದರಿಂದಲೇ ಆರಂಭವಾದ ಸಿನೇರಿ ಕಂಪನಿಯಾಗಿದೆ. ಇದರ ಒಡೆಯರು ಮಲ್ಲೇಶ್. ಪ್ರಸ್ತುತ ಬೆಂಗಳೂರಿನ ತ್ಯಾಗರಾಜನಗರದಲ್ಲಿದ್ದಾರೆ.

### ಮಲ್ಲೇಶ್, ನಾಗಾರ್ಜುನ ಕಾಸ್ಟೂಮ್ಸ್ ಅಂಡ್ ಸ್ಟೇಜ್

ಕಗ್ಗಲಹಳ್ಳಿಯ 'ವೆಂಕಟೇಶ್ವರ ಡ್ರಾಮಸಿನೇರಿ'ಯಲ್ಲಿ ಕೆಲಸ ಆರಂಭಿಸಿ, ಮುಂದೆ ಬೆಂಗಳೂರಿನ ಹೆಸರಾಂತ ಚೌಡೇಶ್ವರಿ ವಸ್ತ್ರಾಲಂಕಾರದಲ್ಲಿ ಕೆಲಸ ಮಾಡುತ್ತಲೇ ಸ್ವಂತ ವಸ್ತ್ರಾಲಂಕಾರ ಪ್ರಸಾಧನ ಕಂಪನಿ ಮಾಡಿ ಇಂದು ಬೆಂಗಳೂರಿನ ಬಹುತೇಕ ರಂಗ ಚಟುವಟಿಕೆಗಳಿಗೆ ವಸ್ತ್ರ, ಪ್ರಸಾಧನ, ಆಭರಣಗಳು ಹಾಗೂ ಧ್ವನಿ ವ್ಯವಸ್ಥೆ ಒದಗಿಸುತ್ತಿರುವ ಮಲ್ಲೇಶ್ ಅವರ ಬಳಿ ಇರುವ ವಸ್ತ್ರಾಲಂಕಾರ, ಆಭರಣಗಳನ್ನು ಒಂದೇ ದಿನಕ್ಕೆ ಕನಿಷ್ಟ 20 ಸಾವಿರ ಕಲಾವಿದರಿಗೆ ಒದಗಿಸಬಹುದು. ಅಷ್ಟು ಬೃಹತ್ ಸಂಗ್ರಹ ಇವರಲ್ಲಿದೆ.







## ನಟನಾಗಿ ಮಲ್ಲೇಶ್

**ಆಭರಣ:** ದಿನಕ್ಕೆ ಕನಿಷ್ಟ 1000 ಪಾತ್ರಗಳಿಗೆ ಒದಗಿಸಬಹುದಾಗಿದೆ. ಪೌರಾಣಿಕ ಪಾತ್ರಗಳಿಗೆ ಕನಿಷ್ಟ 100 ಜನಕ್ಕೆ, ಐತಿಹಾಸಿಕ ಪಾತ್ರಗಳಿಗೆ ಕನಿಷ್ಟ 100 ಪಾತ್ರಗಳಿಗೆ ಪರಿಕರ ಒದಗಿಸಬಹುದು. ಇದಲ್ಲದೇ ನೃತ್ಯಕ್ಕೆ, ನಾಟಕಗಳಿಗೆ ಮುಖವಾಡಗಳು, ಪೇಟಗಳು ಒದಗಿಸಬಹುದು. ಅಲ್ಲದೆ ಇತರೆ ರಾಜ್ಯಗಳ ಪ್ರಾದೇಶಿಕ ಕಲಾ ಪ್ರಕಾರಗಳ ವಸ್ತ್ರ, ಆಭರಣ, ಪರಿಕರ ಸಹ ಇಲ್ಲಿ ಲಭ್ಯ. ಇಂತಹ ರಾಮನಗರ ಮೂಲದ ಬೃಹತ್ ಕಂಪನಿಯು ಪ್ರಸ್ತುತ ಬೆಂಗಳೂರಿನ ತ್ಯಾಗರಾಜನಗರದಲ್ಲಿ ರಾಮನಗರ ಜಿಲ್ಲೆಯವರಾದ ಮಲ್ಲೇಶ್ ಅವರ ನೇತೃತ್ವದಲ್ಲಿ ಕೆಲಸ ನಿರ್ವಹಿಸುತ್ತಿದೆ ಎಂಬುದೇ ಹೆಮ್ಮೆಯ ವಿಷಯ.

## ಕನಕಪುರ ತಾಲ್ಲೂಕು ಹವ್ಯಾಸಿ ಕಲಾವಿದರು/ಸಂಘಟಕರು

### ಡಾ. ಕಾಂತರಾಜ್. ಟಿ.ಎಸ್.



**ಸಂಪರ್ಕ: 9845078726** ಅರಳಾಳು, ನಂದಿನ ಹಾಲಿನ ಶಿಥಲೀಕೇಂದ್ರದ ಎದುರು, ಕನಕಪುರ

ಮೂಲತಃ ಶಿಕಾರಿಪುರದವರಾದ ಕಾಂತರಾಜ್ ಅವರು ನೆಲೆಕಂಡಿರುವುದು

ಕನಕಪುರದಲ್ಲಿ ಕನಕ ಆಸ್ಪತ್ರೆಯಲ್ಲಿ ಸೇವೆ ಮಾಡುತ್ತಾ, ರಂಗ ಕಾಳಜಿಯೊಂದಿಗೆ ರಂಗ ಸಂಘಟನೆ ಹಾಗೂ, ಕಲಾಸೇವೆ ಸಲ್ಲಿಸುತ್ತಿದ್ದಾರೆ. ಕಾಂತರಾಜ್ ಅವರು ಸ್ಥಳೀಯಸಂಘ ಸಂಸ್ಥೆಗಳಾದ, ಟೌನ್‌ಟೆನ್ನಿಸ್ ಕ್ಲಬ್, ರೋಟರಿ ಕನಕಪುರ ಮುಖಾಂತರ ರಂಗ ಚಳವಳಿ ಕಟ್ಟಿದಕೀರ್ತಿ ಇವರದಾಗಿದೆ. ಪ್ರಸಿದ್ಧ ಹವ್ಯಾಸಿ ರಂಗ ನಟ–ನಟಿ, ನಿರ್ದೇಶಕರು ಬೆಳೆಯಲು ರಂಗ ಚಟುವಟಿಕೆಗೆ ಇವರ ಸಹಕಾರ ಸ್ಫೂರ್ತಿ ಪ್ರೇರಣೆಯಾಗಿದೆ. ರಂಗ ನಿರ್ದೇಶಕರಾದ ಆರ್.ನರೇಶ್‌ಮಯ್ಯ, ಇಕ್ಬಾಲ್ ಅಹಮದ್, ಸುರೇಶ್ ಆನಗಳ್ಳಿ, ಎಂ.ಸಿ.ನಾಗರಾಜು, ಮುನಿಚೌಡಪ್ಪ ಮುಂತಾದವರು ರಂಗ ಚಟುವಟಿಕೆ ನಡೆಸಲು ಪ್ರೇರಣೆಯಾಗಿದ್ದಾರೆ. ಇವರಿಂದ 'ಚಿಣ್ಣಬಣ್ಣ', ಮಕ್ಕಳ ತಂಡ ಇಲ್ಲಿ ಕೆಲಸ ಮಾಡಿದೆ.

ಟೆನಿಸ್ ಕ್ಲಬ್‌ನಲ್ಲಿ ನೀನಾಸಂ ತಿರುಗಾಟದ ನಾಟಕಗಳ ಆಯೋಜನೆಯನ್ನು ಹಲವು ವರ್ಷ ನಡೆಸಿದ್ದಾರೆ. 1980ರ ದಶಕದಲ್ಲಿ ನೀನಾಸಂನ ಜನಸ್ಪಂದನವನ್ನು ಕೆ.ವಿ.ಸುಬ್ಬಣ್ಣ ಅವರ ಉಪಸ್ಥಿತಿಯಲ್ಲಿ ಇಕ್ಬಾಲ್ ಅಹಮದ್ ನಿರ್ದೇಶನದಲ್ಲಿ ಸ್ಥಳೀಯರಿಗೆ ರಂಗ ತರಬೇತಿ ಶಿಬಿರ ನಡೆಸಿ, 'ಸಾಹೇಬರು ಬರುತ್ತಾರೆ' ನಾಟಕ ಕಟ್ಟಿದ್ದರು. ರೂ.50,000/– ವೆಚ್ಚದಲ್ಲಿ ಬೃಹತ್ ನಟವರ್ಗದೊಂದಿಗೆ 'ತ್ರಿಪೆನ್ನಿ ಅಪೇರಾ' ಇಕ್ಬಾಲ್ ನಿರ್ದೇಶನದಲ್ಲಿ ನಡೆದಾಗ, ರಾಜು ಅನಂತಸ್ವಾಮಿ, ಸಿ.ಬಸವಲಿಂಗಯ್ಯ ಸಂಗೀತ ಸಂಯೋಜಿಸಿದ್ದರು.

ನಾಟಕವರ್ಗದಲ್ಲಿ, ಸಿದ್ದರಾಜ್ ಕಲ್ಯಾಣ್‌ಕರ್, ಇಸ್ಮಾಹಿಲ್, ಮುಂತಾದ ಪ್ರಸಿದ್ಧರು ಅಭಿನಯಿಸಿದ್ದರು. ರಾಜ್ಯದಲ್ಲೆಡೆ ಪ್ರಯೋಗವಾಗಿತ್ತು. ರಂಗಾಯಣದ ಪ್ರಯೋಗಗಳನ್ನು ಇಲ್ಲಿ ತಾಲ್ಲೂಕು ಮಟ್ಟದಲ್ಲಿ ಮಾಡಿಸಿದ್ದಾರೆ. ಮುಖ್ಯವಾಗಿ 'ತಲೆದಂಡ', 'ಮಿಡ್ ಸಮ್ಮರ್ ನೈಟ್ ಡ್ರೀಮ್ಸ್'. ಇವರು ಟೌನ್ ಟೆನ್ನಿಸ್ ಕ್ಲಬ್‌ನಲ್ಲಿ ಒಂದು ಸಣ್ಣ ರಂಗಮಂದಿರ ನಿರ್ಮಿಸಲು ಕಾರಣರಾಗಿದ್ದಾರೆ. ಪ್ರಥಮ ನಾಟಕ ಸಾಹಿತ್ಯ ಸಮ್ಮೇಳನ, ಇಲ್ಲಿ ನಡೆದಾಗ ಮುಖ್ಯ ಸಂಘಟಕರಾಗಿದ್ದರು. 1975 ರಲ್ಲಿ ನಟರಂಗದ 'ಕಾಕನಕೋಟೆ' ಪ್ರಯೋಗ, ಪ್ರೋಥಿಯೂ ತಂಡದ 'ಗುಣಮುಖ' ಪ್ರಯೋಗಕ್ಕೆ, ಮಕ್ಕಳ ರಂಗ ತರಬೇತಿಗೆ ಕಾರಣರಾಗಿದ್ದಾರೆ. ಪ್ರಸ್ತುತ, ರಂಗಾಸಕ್ತರಿಗೆ ಸ್ಫೂರ್ತಿ ನೀಡುತ್ತಾ ಸಾಹಿತ್ಯಸಕ್ತರಾಗಿ, ಸಂಗೀತ ಆಸಕ್ತಿಯೊಂದಿಗೆ ಕೆಲಸ ಮಾಡುತ್ತಿದ್ದಾರೆ.

# ಶ್ರೀ ಆರ್. ನರೇಶ್‌ಮಯ್ಯ



**ಸಂಪರ್ಕ: 9663970250/ 9066308503 ಖ/ಶಿ ಲೇ// ಕೆ.ವಿ.ರಾಜಣ್ಣ, ಕೊನೆಮನೆ, ಪುಟ್ಟರಾಜು ರಸ್ತೆ, ಟೀಚರ್ಸ್ ಕಾಲೋನಿ, ಜೆ.ಸಿ.ಬಡಾವಣೆ, ಕನಕಪುರ**

ರಾಮನಗರ ಜಿಲ್ಲೆಯ ಕನಕಪುರ ನರೇಶ್‌ಮಯ್ಯ ಶ್ರೀ ಕೆ.ವಿ.ರಾಜಣ್ಣ ಹಾಗೂ ರಾಮನಗರದ ಇಂದಿರಮ್ಮ ದಂಪತಿಗಳ ಪುತ್ರರಾಗಿ 12.05.1974 ರಲ್ಲಿ ಕನಕಪುರದಲ್ಲಿ ಜನಿಸಿದ್ದಾರೆ. ಇವರ ತಾತ ಮಯ್ಯಣ್ಣ ಅವರು ಕರ್ನಾಟಕ ಶಾಸ್ತ್ರಿಯ ಸಂಗೀತ ಹಾಗೂ ನಾದಸ್ವರ ವಿದ್ವಾನ್ ಆಗಿ ವೃತ್ತಿ ಕಂಪನಿಗಳಲ್ಲಿ ಕೊಳಲು ವಾದಕರಾಗಿದ್ದವರು. ಮಯ್ಯ ಅವರು ನೀ.ನಾ.ಸಂ.ನ 1996-97 ರ ಬ್ಯಾಚ್ ವಿದ್ಯಾರ್ಥಿ. ಈ ಟಿವಿ ವಾಹಿನಿಯ ಕರ್ಯಕ್ರಮ ನಿರ್ವಾಹಕರಾಗಿ ಸೇವೆಸಲ್ಲಿಸಿದ್ದಾರೆ(2002-2007). ಕಸ್ತೂರಿ ವಾಹಿನಿ ಹಿರಿಯ ಕಾರ್ಯಕ್ರಮ ನಿರೂಪಕರಾಗಿ (2007-2011), ಪ್ರಸ್ತುತ ಕಿರುತೆರೆಯಲ್ಲಿ ಸಾಹಿತ್ಯ ನಿರ್ದೇಶನದಲ್ಲಿ ಕಥೆಗಾರರಾಗಿ ಸೇವೆ ಸಲ್ಲಿಸಿದ್ದಾರೆ, ನಟನೆ ಸಹ ಮಾಡುತ್ತಿದ್ದಾರೆ.

**ನಟರಾಗಿ ಮಯ್ಯ:** ಈ ಕೆಳಗಿನವರು, ಹ್ಯಾಮ್ಲೆಟ್, ಮಂಜುಳ, ಅದೇ ಅಧೂರೆ



'ಈ ಕೆಳಗಿನವರು' ನಾಟಕದ ಸಂಕಪ್ಪ ಪಾತ್ರ

**ತಿರುಗಾಟ:** ಜೊತೆಗಿರುವನು ಚಂದಿರ, ಸಹ್ಯಾದ್ರಿ ಕಾಂಡ, ಮಹಾತ್ಮ, ಅಭಿಜ್ಞಾನ ಶಾಕುಂತಲ, ಸಕ್ಕರೆಗೊಂಬೆ, ಕೆಂಪು ಕಣಗಿಲೆ, ಬುಜಬಿದೇವರ ಜೂಗಾರಿ ಆಟ, ಗುಂಡುತಲೆ ಚೂಪುತಲೆ ಪ್ರಸಂಗ, ಗುಣಮುಖಿ, ಗೋಕುಲ ನಿರ್ಗಮನ, ಮುಂತಾದವು.

## ನಿರ್ದೇಶನದ ನಾಟಕಗಳು

ಕಾಳಿದಾಸನ ಅಗ್ನಿಮಿತ್ರ, ಪಂಜರಶಾಲೆ, ಟ್ರೋಜನ ಉಮೇನ್, ಭಟ್ಟರ ಮಗಳು

**ಕಥಾನಾಟಕಗಳು:** ಕುವೆಂಪು–ಸಾಲದ ಮಗ ಬಿಡದೆ, ನರಸಿಂಹಮೂರ್ತಿ–ತಲೆ ಬಳಸುವ ಕಲೆ, ಭಾರತಿಸುತ–ಮೋಚಿ, ಬೆಸಗಾರಹಳ್ಳಿ ರಾಮಣ್ಣ– ಗಾಂಧೀ, ಕಥೆಗಳ ನಾಟಕ (ಹೊನ್ನವಳ್ಳಿ), ನೀನಾಸಂ ತಂಡಕ್ಕಾಗಿ ವಿವೇಕ್ ಶಾನ್‌ಬಾಗ್ ಅವರ ಬಹುಮುಖಿ ನಾಟಕ, ಸಾಣೆಹಳ್ಳಿ ರಂಗ ಪ್ರಯೋಗ ಶಾಲೆಗೆ ಶಿವರಾಂ ಕಾರಂತರ "ಋತುಯಾತ್ರೆ" ಗೀತ ನಾಟಕ ಸಂಗೀತ ಬಿ.ವಿ.ಕಾರಂತ್, ಬಂಜಾರ ಸಾಮಾಜಿಕ ಸಾಂಸ್ಕೃತಿಕ ಅಕಾಡೆಮಿಗಾಗಿ "ಒಡಲಾಳ" ನಾಟಕ, ಮಂಡ್ಯ ಜನದನಿಗಾಗಿ ಬಿ.ಸುರೇಶ್ ಅವರ "ಗಿರಿಜ ಕಲ್ಯಾಣ"ಮುಂತಾದವು.



'ಅಗ್ನಿಮಿತ್ರ' ನಾಟಕದ ದೃಶ್ಯ

**ಮಕ್ಕಳ ನಾಟಕಗಳು:** ಕತ್ತೇಬಾಲ ಕುದುರೆ ಜುಟ್ಟು, ಜನತೆಯ ಶತ್ರು

**ಸಂಗೀತ ನಿರ್ದೇಶನ:** ನೇಪಥ್ಯ, ಬೆಳಕು ವಿನ್ಯಾಸ, ವಸ್ತ್ರವಿನ್ಯಾಸ, ಒಟ್ಟಾರೆ ವಿನ್ಯಾಸ ಬಲ್ಲವರಾಗಿದ್ದಾರೆ.

ಸೇವೆ ಸಲ್ಲಿಸಿದ ತಂಡಗಳು(ನಟ, ನಿರ್ದೇಶಕ, ಸಂಘಟಕನಾಗಿ): ಚಿಣ್ಣಬಣ್ಣ, ನಾಟಕ ಕರ್ನಾಟಕ ರಂಗಾಯಣ, ನೀನಾಸಂ, ರಂಗಶಿಕ್ಷಣ ಕೇಂದ್ರ, ರಾಷ್ಟ್ರೀಯ ನಾಟಕ ಶಾಲೆ, ಹೊಳೆರಂಗ ಹೊನ್ನವಳ್ಳಿ, ಪ್ರೋಥಿಯು, ತಿಪಟೂರು, ಜಾನಪದಲೋಕ, ಸೀಗಲ್ ಥಿಯೇಟರ್ ರೆಪರ್ಟರಿ ಕಂಪನಿ, ಗೋಹಾತಿ, ಪೃಥ್ವಿ ಥಿಯೇಟರ್, ಬಾಂಬೆ, ಜಾನಪದಂ ರೇಪರ್ಟರಿ, ಹೈದರಾಬಾದ್, ಸಮುದಾಯ ಬೆಂಗಳೂರು, ಮುಂತಾದವು.

ಯು.ಆರ್.ಅನಂತಮೂರ್ತಿ, ಬಿ.ವಿ.ಕಾರಂತ್, ಕೆ.ವಿ.ಸುಬ್ಬಣ್ಣ, ಚಿದಂಬರ ರಾವ್ ಜಂಬೆ, ರಘುನಂದನ್, ಅಕ್ಷರ ಕೆ.ವಿ., ಬಸವಲಿಂಗಯ್ಯ.ಸಿ., ಸುರೇಶ ಆನಗಳ್ಳಿ, ರುಸ್ತುಂ ಭರೋಚ, ಕೆ.ಜಿ.ಕೃಷ್ಣಮೂರ್ತಿ, ಡಾ.ಜೆ.ಶ್ರೀನಿವಾಸಮೂರ್ತಿ, ಇಕ್ಬಾಲ್ ಅಹಮದ್, ಮುಂತಾವದರ ಜೊತೆ ಭಾಗವಹಿಸಿದ್ದಾರೆ.

****

## ಶ್ರೀ ಎಂ.ಸಿ. ನಾಗರಾಜು



**ಸಂಪರ್ಕ: 9916350712 #32, ಟೌನ್‌ಟೆನ್ನಿಸ್ ಕ್ಲಬ್ ಮುಂಭಾಗ, ಕನಕಪುರ– 562117**

ಕನಕಪುರದ ಶ್ರೀ ಎಂ.ಚೂಡಯ್ಯ ಹಾಗೂ ನೀಲಮ್ಮ ದಂಪತಿಗಳ ಪುತ್ರರಾಗಿ, 15.07.1963 ರಲ್ಲಿ ಜನ್ಮ ಪಡೆದ ಶ್ರೀಯುತರು ಮೂಲತಃ ಶಿಕ್ಷಣ ಇಲಾಖೆಯಲ್ಲಿ ಉದ್ಯೋಗಿಯಾಗಿದ್ದು, ಹವ್ಯಾಸಕ್ಕೆ ರಂಗಭೂಮಿಯಲ್ಲಿ ಕೆಲಸ ಮಾಡುತ್ತಿರುವ ರಂಗಪ್ರತಿಭೆ.

### ಅಭಿನಯಿಸಿದ ಪ್ರಮುಖ ನಾಟಕಗಳು

ಚೆರ್ರಿತೋಟ, ಸಾಹೇಬರು ಬರುತ್ತಾರೆ, ಮ್ಯಾಕ್‌ಬೆತ್, ಹ್ಯಾಮ್ಲೆಟ್,

ಮಿಡ್‌ಸಮ್ಮರ್ ನೈಟ್ಸ್ ಡ್ರೀಮ್, ನೀಲಿ ಕುದುರೆ, ಅಂದೇರಿನಗರಿ ಚೌಪಟ್‌ರಾಜ, ಅಂಗಿಬಟ್ಟೆ, ಮುಂತಾದವು.

## ನಿರ್ದೇಶನದ ನಾಟಕಗಳು

ಮಾನಿಷಾದ, ಜಾತ್ರೆ, ಮ್ಯಾಕ್‌ಬೆತ್, ನಮ್ಮ ಟಿಪ್ಪು, ಅಂದೇರಿನಗರಿ ಚೌಪಟ್‌ರಾಜ, ಎಚ್ಚರ, ಜೀವ ವಿಕಾಶ(ಮೌನ ನಾಟಕ), ಕೃಷ್ಣಧ್ವನಿ (ಧ್ವನಿ ಬೆಳಕು ನಾಟಕ),ನೀಲಿಕುದುರೆ,ಹ್ಯಾಮ್ಲೆಟ್,ಅಜ್ಜಿಕತೆ, ಮಿಡ್ಸಮ್ಮರ್ ನೈಟ್ ಡ್ರೀಮ್ಸ್, ನೈಬರ್ಸ್ ಮುಂತಾದವು.

**ನಾಟಕ ರಚನೆ:** ನಮ್ಮ ಟಿಪ್ಪು, ದಿಕ್ಕೆಟ್ಟ ದೇವರುಗಳ ಸಭೆ ಹಾಗು ಸ್ಕಿಟ್ ಗಳು.

## ಹೆಸರು ಮಾಡಿದ ರಂಗತಂಡಗಳು/ನಿರ್ದೇಶಕರು

ಚಿಣ್ಣಬಣ್ಣ, ತಿರುಗಾಟ, ನೀನಾಸಂ ಜನಸ್ಪಂದನ, ನೀನಾಸಂ ರಂಗಶಿಕ್ಷಣ ಕೇಂದ್ರ, ಅಭಿನಯರಂಗ, ಮುಂತಾದವು.

**ಸಂಘಟಕರಾಗಿ:** ಬಿ.ವಿ.ಕಾರಂತ, ಚಿದಂಬರರಾವ್‌ಜಂಬೆ, ರುಸ್ತುಂ ಭರೂಚ, ಸಿ.ಬಸವಲಿಂಗಯ್ಯ, ಸುರೇಶ್ ಆನಗಳ್ಳಿ, ವೆಂಕಟರಮಣ ಐತಾಳ್, ಕೆ.ವಿ.ಅಕ್ಷರ, ಮುಂತಾದ ನಿರ್ದೇಶಕರ ಜೊತೆ ಕೆಲಸದ ಅನುಭವ ಹೊಂದಿದ್ದಾರೆ. ಅಲ್ಲದೆ, ಕನಕಪುರದಲ್ಲಿ ಜರುಗುವ ರಂಗ ಉತ್ಸವಗಳಲ್ಲಿಯೂ ಸಂಘಟಕರಾಗಿ ತೊಡಗುತ್ತಾ ಬಂದಿದ್ದಾರೆ. 2009 ರಿಂದ ಮಾಯ್ಕಾರ ರಂಗತಂಡದ ಸಂಸ್ಥಾಪಕ ನಿರ್ದೇಶಕರಾಗಿ ಕೆಲಸಮಾಡುತ್ತಿದ್ದಾರೆ.

## ಶ್ರೀಮತಿ ಮಂಜುಳ. ಬಿ. (ನಟಿ)

**ಸಂಪರ್ಕ: 9663970250/ 9739540169**
**S/o ಲೇ// ಕೆ.ವಿ.ರಾಜಣ್ಣ, ಕೊನೆಮನೆ,**
**ಪುಟ್ಟರಾಜು ರಸ್ತೆ, ಟೀಚರ್ಸ್ ಕಾಲೋನಿ,**
**ಜೆ.ಸಿ.ಬಡಾವಣೆ, ಕನಕಪುರ**

ರಾಮನಗರ ಜಿಲ್ಲೆಯ ಕನಕಪುರದ ಶ್ರೀ ನರೇಶ್‌ಮಯ್ಯ ಅವರ ಪತ್ನಿ. ಇವರು 24.04.1980 ರಲ್ಲಿ ಹೊಸಪೇಟೆಯ ಕಮಲಾಪುರದಲ್ಲಿ ಶ್ರೀಮತಿ ಅಂಜಲಿ ಹಾಘು ಫಕಿರಪ್ಪ ದಂಪತಿಗಳ ಪುತ್ರಿಯಾಗಿ ಜನಿಸಿದರು. 1996–97ರ ನೀನಾಸಂ ಡಿಪ್ಲೋಮ ವಿದ್ಯಾರ್ಥಿನಿ.

## ಅಭಿನಯಿಸಿದ ಪ್ರಯೋಗಗಳು


ಕೆಳಗಿನವರು, ಬಿರುದಂತೆಂಬರಗಂಡ, ಕಾಕನಕೋಟೆ, ಹ್ಯಾಮ್ಲೆಟ್, ಮಂಜುಳ, ಅದೇಅಧೋರೆ, ಋತುಯಾತ್ರೆ, ಟಿಪ್ಪುಸುಲ್ತಾನ್, ಮುಂತಾದವು.

ನಿರ್ದೇಶನದ ನಾಟಕಗಳು: ಮಂಗಣ್ಣ ಮದುವೆ, ಅಂದೇರ್ ನಗರಿ ಚೌಪಟ್ ರಾಜ.

ರಂಗಸೇವೆ: ಕನ್ನಡ ವಿಶ್ವವಿದ್ಯಾಲಯ, ರಾಷ್ಟ್ರೀಯ ನಾಟಕಶಾಲೆ, ಕಿನ್ನರಮೇಳ, ತುಮರಿ, ನೀನಾಸಂ, ಹೆಗ್ಗೊಡು, ಕನ್ನಡ ಕಲಾಸಂಘ, ಟಿ.ಬಿ.ಡ್ಯಾಮ್, ರಂಗಭಾರತಿ, ಹೂವಿನಹಡಗಲಿ, ಮುಂತಾದವು.

****

## ಶ್ರೀ ಶಂಭು



**ಸಂಪರ್ಕ: 9008169952 ದೊಡ್ಡಕಾಬಳ್ಳಿ, ಕೋಡಿಹಳ್ಳಿ ಹೋಬಳಿ, ಕನಕಪುರ**

ಕೋಡಿಹಳ್ಳಿ ಹೋಬಳಿಯ ದೊಡ್ಡಕಾಬಳ್ಳಿಯ ಶ್ರೀ ಬಿಂದುಮಾರಯ್ಯ ಹಾಗೂ ಶ್ರೀಮತಿ ಯಶೋಧಮ್ಮ ಅವರ ಪುತ್ರರಾಗಿ 28.06.1985ರಲ್ಲಿ ಜನಿಸಿದ್ದಾರೆ. ಅಭಿನಯದಲ್ಲಿ ರಂಗ ಅಧ್ಯಯನ ಕೇಂದ್ರ, ಕುಂಬಾಪುರದಿಂದ ಒಂದು ವರ್ಷದ ನಾಟಕ ಡಿಪ್ಲೋಮ ಪಡೆದಿದ್ದಾರೆ.

**ಅಭಿನಯದ ನಾಟಕಗಳು:** ಅಗ್ನಿಲೋಕ, ಮತ್ತವಿಲಾಸ, ಮದುವೆಹೆಣ್ಣು, ಕಿಂಗ್ಲಿಯರ್, ಎಚ್ಚರ, ಕುಬೇರನಿಗೆನಿರಬೇಕು, ಮುಂತಾದವು.

**ನಿರ್ದೇಶನದ ನಾಟಕ:** ಎಚ್ಚರ, ಗ್ಲೋಬಲ್ ವಾರ್ಮಿಂಗ್, ನಮ್ಮ ಟಿಪ್ಪು, ಮುಂತಾದವು.

**ನಾಟಕ ರಚನೆ:** ರಚ್ಚರ

**ಕೆಲಸ ಮಾಡಿದ ತಂಡಗಳು:** ಬೆ.ನ.ಕ.ಅನೇಕ, ಮಾಯ್ಕಾರ, ಮುಂತಾದವು.

## ಕನಕಪುರ ತಾಲ್ಲೂಕಿನ ಪ್ರಮುಖ ರಂಗ ತಂಡಗಳು

1. ಅಭಿನಯ ರಂಗತಂಡ: ಈ ತಂಡವು ಕನಕಪುರ ತಾಲ್ಲೂಕಿನಲ್ಲಿ ಸುಮಾರು 80 ವರ್ಷಗಳಿಂದ ಅಸ್ತಿತ್ವದಲ್ಲಿದ್ದು, ಈ ತಂಡದ ಮುಂಚೂಣಿಯಲ್ಲಿ ನಾಗಣ್ಣ, ಶ್ರೀನಿವಾಸ್, ಕೃಷ್ಣಪ್ಪ, ಸೀನಪ್ಪ, ಮಳೆಗಾಳು ಕೆಂಚನರಸಿಂಹ, ಮುಂತಾದವರು ನಾಟಕಗಳಲ್ಲಿ ಅಭಿನಯಿಸಿರುವುದರ ಮೂಲಕ ನಾಟಕವನ್ನು ಜೀವಂತಗೊಳಿಸಿದ್ದಾರೆ.

2. ರಂಗಬಾಂಧವ್ಯ ನಾಟಕ ತಂಡ: ಕನಕಪುರದಲ್ಲಿರುವ ಈ ನಾಟಕ ತಂಡ 1970ರಿಂದ ಅಸ್ತಿತ್ವದಲ್ಲಿದೆ. ದಿ// ಎಂ.ಸಿ.ರಾಮಕೃಷ್ಣಪ್ಪ ಅವರ ನೇತೃತ್ವದಲ್ಲಿ, ಶ್ರೀ ಜಗದೀಶ್ವರಾಚಾರ್ಯರ ನಿರ್ದೇಶನದಲ್ಲಿ ಹವ್ಯಾಸಿ ರಂಗಾಸಕ್ತರನ್ನು ಕಲೆಹಾಕಿ 'ರಂಗ ಬಾಂಧವ್ಯ' ಎಂಬ ನಾಟಕ ತಂಡವನ್ನು ಕಟ್ಟಿಕೊಂಡು ನಿರಂತರವಾಗಿ ರಂಗಭೂಮಿ ಕಾಯಕ ಮಾಡುತ್ತಾ ಬರುತ್ತಿದೆ.

ಹೆಚ್ಚಾಗಿ ಪೌರಾಣಿಕ ನಾಟಕಗಳನ್ನು ಅಭಿನಯಿಸುತ್ತಿರುವ ಈ ತಂಡವು ತಾಲ್ಲೂಕಿನ ಮೂಲೆ ಮೂಲೆಯಲ್ಲಿರುವ ರಂಗಾಸಕ್ತರನ್ನು ತನ್ನತ್ತ ಆಕರ್ಷಿಸುತ್ತಿದೆ. ಜೊತೆಗೆ ಅನೇಕ ಯುವ ಪೀಳಿಗೆಗೆ ರಂಗಕಲೆಯಲ್ಲಿ ಆಸಕ್ತಿ ಮೂಡುವಂತೆ ಪ್ರೇರೇಪಿಸುತ್ತಿದೆ. ಇದರಲ್ಲಿ ಶಿಕ್ಷಕರು, ಸಂಗೀತ ಶಿಕ್ಷಕರು ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿರುವ ನೌಕರರೂ ಸೇರಿ ಈ ನಾಟಕ ಸಂಘವನ್ನು ಮುನ್ನಡೆಸಿಕೊಂಡು ಹೋಗುತ್ತಿದ್ದಾರೆ. ಈ ನಿಟ್ಟಿನಲ್ಲಿ ತಿಂಗಳಿಗೊಂದರಂತೆ ರಂಗಾಸಕ್ತರನ್ನು ಕಲೆ ಹಾಕಿ ರಂಗ ಗೀತೆಗಳ ಸ್ಪರ್ಧೆ, ನಾಟಕಗಳನ್ನು ಅಲ್ಲದೆ, ಯುವ ಜನಾಂಗಕ್ಕೆ ತರಬೇತಿ ನೀಡುವ ಕೆಲಸವನ್ನು ಶ್ರೀ ಜಗದೀಶ್ವರಾಚಾರ್ಯರು ನಿರಂತರವಾಗಿ ಮಾಡಿಕೊಂಡು ಬರುತ್ತಾ ರಂಗಕಲೆಯ ಉಳಿವಿಗಾಗಿ ಶ್ರಮಿಸುತ್ತಿದ್ದಾರೆ.

# ಜಗದೀಶ್ವರಚಾರ್ಯ



**ಸಂಪರ್ಕ: 9845631981 #128, ಮಹಾಲಕ್ಷ್ಮೀ ನಿವಾಸ, ಮಹಾರಾಜರ ಕಟ್ಟೆ ರಸ್ತೆ, ಬಸವೇಶ್ವರನಗರ, ಕನಕಪುರ**

ರಂಗಬಾಂಧವ್ಯದ ಜಗದೀಶ್ವರಚಾರ್ ಅವರದು ಮೂಲತಃ ರಂಗಭೂಮಿ ಕುಟುಂಬವಾಗಿದೆ. ತಂದೆ ದಿ// ಕೆಂಪಾಚಾರ್ ಅವರು ಸಹ ನಾಟಕ ಮೇಷ್ಟ್ರು. 1970 ರಲ್ಲಿ ಆರಂಭವಾಗಿರುವ ರಂಗ ಬಾಂಧವ್ಯ ರಂಗತಂಡವನ್ನು ಪೌರಾಣಿಕ ನಾಟಕದ ಮೇಷ್ಟ್ರಾದ ಶ್ರೀ ಜಗದೀಶ್ವರಚಾರ್ ಸಂಚಾಲಕರಾಗಿ, ಶ್ರೀ ಎಂ.ಸಿ. ರಾಮಕೃಷ್ಣಪ್ಪ ಪೋಷಕರಾಗಿ ಮುನ್ನಡೆಸುತ್ತಿದ್ದಾರೆ. ಶ್ರೀ ಜಗದೀಶ್ವರಚಾರ್ ಅವರ ತಂದೆ ದಿ// ಕೇಂಪಾಚಾರ್ ಅವರು ಸಹ ನಾಟಕದ ಮೇಷ್ಟ್ರು ಜಗದೀಶ್ವರಚಾರ್ ಸುಂಡಘಟ್ಟದಲ್ಲಿ ಹುಟ್ಟಿ ಕನಕಪುರದ ತುಂಗಣಿಯಲ್ಲಿ ಬೆಳೆದವರು. ತಾಲ್ಲೂಕು ಸಹಕಾರ ಸಂಘದ ಸೊಸೈಟಿ ಮಾರ್ಕೆಟಿಂಗ್‌ನ ಲೆಕ್ಕ ಪಾಲಕರಾಗಿದ್ದು ಹವ್ಯಾಸಕ್ಕೆ ರಂಗತಂಡ ಕಟ್ಟಿದವರು. ಇವರ ತಂಡದಿಂದ ಪ್ರಪಂಚ ರಾವಣ, ಶ್ರೀ ಕೃಷ್ಣರಾಯಭಾರ, ಜಗಜ್ಯೋತಿ ಬಸವೇಶ್ವರ, ಕರುಣಾಮಯಿ ಅಯ್ಯಪ್ಪಸ್ವಾಮಿ, ಮುಂತಾದ ನಾಟಕಗಳನ್ನು ಪ್ರಯೋಗಿಸಿದ್ದಾರೆ. ಅಲ್ಲದೆ, ಪ್ರತಿ ತಿಂಗಳ ಕೊನೆ ಭಾನುವಾರಗಳಂದು ನಿರಂತರವಾಗಿ ಗ್ರಾಮೀಣ ಹಾಗೂ ವೃತ್ತಿ ರಂಗ ಕಲಾವಿದರು ಅದರಲ್ಲೂ ಆರ್.ನಾಗರತ್ನಮ್ಮ ಅವರಂತವರಿಂದ ಇದುವರೆವಿಗೂ 101 ಕ್ಕೂ ಹೆಚ್ಚಿನ ರಂಗ ಗೀತೆಗಳ ಸಂಗೀತೋತ್ಸವ ನಡೆಸಿದ್ದಾರೆ. ಅಲ್ಲದೆ, ಕನಕಪುರದ ಕರ್ನಾಟಕ ಕಲಾಸಂಘಕ್ಕೂ ನಾಟಕಗಳನ್ನು ಆಯೋಜಿಸಿದ ಹೆಗ್ಗಳಿಕೆ ಈ ತಂಡದವರದು.

**3. ನೀನಾಸಂ ತರಬೇತಿ ಹೊಂದಿದವರ ರಂಗತಂಡ:** ಶಿವಮೊಗ್ಗ ಜಿಲ್ಲೆಯ ಹೆಗ್ಗೋಡಿನ 'ನೀನಾಸಂ' ತರಬೇತಿ ಕೇಂದ್ರದಲ್ಲಿ ತರಬೇತಿ ಹೊಂದಿದ ರಂಗ ಕಲಾವಿದರಿಂದ ಶ್ರೀ ಎಂ.ಸಿ. ನಾಗರಾಜು ಅವರು, ಶ್ರೀ ಬಸವಲಿಂಗಯ್ಯ, ಶ್ರೀ

ಸುರೇಶ್ ಆನಗಳ್ಳಿ, ಇಕ್ಬಾಲ್ ಅಹಮದ್ ಅವರಂತಹ ರಂಗ ನಿರ್ದೇಶಕರ ಗರಡಿಯಲ್ಲಿ ತರಬೇತಿ ಪಡೆದು ಪಳಗಿ, ರಂಗ ಶಿಕ್ಷಣದಲ್ಲಿ ಪದವಿ ಪಡೆದು ತಮ್ಮದೇ ಆದ ರಂಗ ಕಲಾ 'ಮಾಯ್ಕಾರ ರಂಗ' ತಂಡದ ಮೂಲಕ ಅನೇಕ ಸಾಮಾಜಿಕ ನಾಟಕಗಳನ್ನು ಅಭಿನಯಿಸುತ್ತಾ ಇಂದಿನ ಸಮಾಜದ ಅಂಕು-ಡೊಂಕುಗಳನ್ನು ಭಿತ್ತರಿಸಿ, ಅರಿವು ಮೂಡಿಸುವ ಕೆಲಸವನ್ನು ಶ್ರೀಯುತರು ಮಾಡುತ್ತಿದ್ದಾರೆ. ಅಲ್ಲದೆ ಅನೇಕ ಯುವಕರನ್ನು ಸಂಘಟಿಸಿ, ನಾಟಕಗಳನ್ನು ನಿರ್ದೇಶಿಸುತ್ತಿದ್ದಾರೆ.

ಶಿಕ್ಷಕರಾದ ಶ್ರೀ ಪ್ರಭಾಕರ, ಶ್ರೀಮತಿ ಮಂಜುಳಾ, ಶ್ರೀಮತಿ ಅನಂತಲಕ್ಷ್ಮಿ, ಶ್ರೀಮತಿ ಇಂದ್ರಾಣಿ, ಇನ್ನಿತರರ ಜೊತೆಗೂಡಿ ಅನೇಕ ನಾಟಕಗಳನ್ನು ಅಭಿನಯಿಸಿ, ಜಿಲ್ಲಾಮಟ್ಟ, ರಾಜ್ಯಮಟ್ಟ, ರಾಷ್ಟ್ರಮಟ್ಟದಲ್ಲಿ ಪ್ರಶಸ್ತಿ ಗಳಿಸಿರುತ್ತಾರೆ. ಈ ನಿಟ್ಟಿನಲ್ಲಿ ನಿರ್ದೇಶಕರಾದ ಶ್ರೀ ಎಂ.ಸಿ.ನಾಗರಾಜು ರವರ ಸೇವೆ ಅನನ್ಯವಾದುದು.

ಇವರಂತೆ 'ನೀನಾಸಂ'ನಲ್ಲಿ ರಂಗ ತರಬೇತಿ ಪಡೆದು ರಂಗಭೂಮಿಯಲ್ಲಿ ಕೆಲಸ ಮಾಡುತ್ತಿರುವ ಶ್ರೀ ನರೇಶ್‌ಮಯ್ಯ ಕೂಡ ಒಬ್ಬ ಅಪ್ಪಟ ರಂಗ ಕಲಾವಿದ. ಇವರು ಕೂಡ ರಂಗಕಲೆಯ ಉಳಿವಿಗಾಗಿ ಅಭಿನಯಿಸುತ್ತಾ, ತಾವು ಗಳಿಸಿರುವ ಪದವಿಗೆ ಚ್ಯುತಿ ಬಾರದಂತೆ ಯುವ ಪೀಳಿಗೆಯನ್ನು ಸಂಘಟಿಸಿ ಕಲೆಯ ಬೆಳವಣಿಗೆಗೆ ದುಡಿಯುವುದರ ಜೊತೆ ಜೊತೆಗೆ "ಈ ಟಿ.ವಿ.' ಹಾಗೂ 'ಸುವರ್ಣ ಚಾನಲ್'ನಲ್ಲಿ ಬರಹಗಾರರಾಗಿ ಕೆಲಸ ಮಾಡುತ್ತಾ ಶ್ರೀ ಎಂ.ಸಿ.ನಾಗರಾಜು ರವರ ಜೊತೆಗೆ ಕೈಗೂಡಿಸಿ ರಂಗಕಲೆಯ ಬೆಳವಣಿಗೆಗೆ ಪ್ರೋತ್ಸಾಹಿಸುತ್ತ, ದುಡಿಯುತ್ತಿದ್ದಾರೆ. ಇವರ ಧರ್ಮಪತ್ನಿ ಸಹ ರಂಗ ಕಲಾವಿದೆ ಎಂಬುದು ವಿಶೇಷ.

'ರಂಗ ಅಧ್ಯಯನ ಕೇಂದ್ರ' ಕುಂದಾಪುರದಲ್ಲಿ ರಂಗ ಶಿಕ್ಷಣವನ್ನು ಪಡೆದು ರಂಗಭೂಮಿಯಲ್ಲಿ ದುಡಿಯುತ್ತಿರುವ ಕನಕಪುರದ ಇನ್ನೊರ್ವ ವ್ಯಕ್ತಿ "ಶಂಭು". ಇವರು ತಮ್ಮ ವಿದ್ಯಾಭ್ಯಾಸವನ್ನು ಮುಗಿಸಿ ರಂಗಭೂಮಿಯಲ್ಲಿ ತರಬೇತಿ ಪಡೆದು ರಂಗಭೂಮಿಯಲ್ಲಿ ತೊಡಗಿಸಿಕೊಂಡಿರುವ ತಂಡವಾದ 'ಮಯ್ಕಾರ'ದಲ್ಲಿ ಸಕ್ರೀಯವಾಗಿ ತೊಡಗಿಸಿಕೊಂಡು, ರಂಗಭೂಮಿ, ಸಿನಿಮಾ, ದೂರದರ್ಶನ, ನಟನೆ ಜೊತೆಗೆ ತಂತ್ರಜ್ಞರಾಗಿ ಕೆಲಸ ಮಾಡುತ್ತಿದ್ದಾರೆ. ಈ ಎಲ್ಲಾ ಯುವಕರು ರಂಗಕಲೆಯನ್ನು ಬೆಳೆಸಿ ಉಳಿಸುವತ್ತಾ ಶ್ರಮಿಸುತ್ತಿದ್ದಾರೆ. ಅಲ್ಲದೆ, ಯುವ ಪೀಳಿಗೆಗೆ ರಂಗಭೂಮಿಯತ್ತ ಆಸಕ್ತಿ ಬೆಳೆಯುವಂತೆ, ತಮ್ಮಂಥಹ ರಂಗ ಪ್ರತಿಭೆಗಳು ಬೆಳೆಯುವಂತೆ ಪ್ರೋತ್ಸಾಹಿಸುತ್ತಿದ್ದಾರೆ.

ಕನಕಪುರ ತಾಲ್ಲೂಕಿನಲ್ಲಿ ರಂಗಭೂಮಿಗೆ ತಮ್ಮದೇ ಆದ ಸೇವೆಯನ್ನು ಸಲ್ಲಿಸಿ ಅಮರರಾಗಿರುವ ಅನೇಕ ಮಂದಿ ಇದ್ದಾರೆ. ಶ್ರೀ ವಿ.ಬಸವರಾಜು, ಶ್ರೀ ಎಂ.ನಂಜಪ್ಪ ರಂಗಭೂಮಿಗೆ ಮುಡಿಪಿಟ್ಟು ದುಡಿದು ಕಣ್ಮರೆಯಾಗಿದ್ದಾರೆ.

ಇವರಂತೆ ಶ್ರೀ ಮರಿಯಾಚಾರ್, ಶ್ರೀ ಗುರುಸೋಮಾರಾಧ್ಯ, ಶ್ರೀ ಎಸ್.ವಿ.ಮಹಾದೇವಸ್ವಾಮಿ, ಶ್ರೀ ಕಾಳಪ್ಪ, ಶ್ರೀ ಮಾದೇಗೌಡ, ಶ್ರೀ ಗೋಪಾಲಯ್ಯ, ಶ್ರೀ ನಾಗರಾಜೇಚಾರಿ, ಶ್ರೀ ಎಸ್.ಎಸ್. ಬಸವರಾಜಾಚಾರ್, ಶ್ರೀ ರಾಮಾಚಾರ್, ಶ್ರೀ ಬಿ.ಕೆ.ನಾಗರಾಜು, ಶ್ರೀ ಪಿ.ಅಂಕಾಚಾರ್, ಶ್ರೀ ಟಿ.ಶ್ರೀನಿವಾಸ, ಮುಂತಾದವರು ರಂಗಭೂಮಿಯನ್ನು ಹಳ್ಳಿ ಹಳ್ಳಿಗೆ ತಲುಪಿಸುವ ಮೂಲಕ ರಂಗಭೂಮಿಗೆ ಯುವಕರನ್ನು ಪ್ರೇರೇಪಿಸುವ ಕೆಲಸ ಮಾಡುತ್ತಾ ಹಗಲಿರುಳು ದುಡಿಯುತ್ತಿದ್ದಾರೆ. ಕಲೆಯ ಉಳಿವಿಗೆ ಜೀವ ತುಂಬುತ್ತಿದ್ದಾರೆ. ಇವರೆಲ್ಲರ ಶ್ರಮ, ದುಡಿಮೆ ರಂಗಭೂಮಿಯನ್ನು ಶ್ರೀಮಂತಗೊಳಿಸಿದೆ. ಜೊತೆಗೆ ತಾವೇ ಹಳ್ಳಿಹಳ್ಳಿಗೆ ತೆರಳಿ ನಾಟಕಗಳನ್ನು ಕಲಿಸುತ್ತಾ ರಂಗಕಲೆಯನ್ನು ಬೆಳೆಸುತ್ತಿದ್ದಾರೆ. ಮುಂದಿನ ಜನಾಂಗದಲ್ಲಿ ರಂಗಾಸಕ್ತಿ ಬೆಳೆಸುತ್ತಿದ್ದಾರೆ.

**4. ಮಾಯ್ಕಾರ ರಂಗತಂಡ:** ಆಧುನಿಕ ರಂಗಭೂಮಿಯ ಸಾಧ್ಯತೆಗಳನ್ನು ಮನನ ಮಾಡಿಕೊಂಡು, ರಂಗ ತರಬೇತಿ ತಾಲೀಮುಗಳನ್ನು ಸಿದ್ಧಪಡಿಸಿ ರಂಗ ಪ್ರಯೋಗಗಳನ್ನು ಮಾಡುತ್ತಿರುವ ತಂಡ, ಎರಡು ಬಾರಿ ರಾಜ್ಯಮಟ್ಟದಲ್ಲಿ ಸರ್ಕಾರಿ ನೌಕರ ಸಂಘದವರು ಏರ್ಪಡಿಸಿದಂತಹ ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಭಾಗವಹಿಸಿ ಪ್ರಶಸ್ತಿಯನ್ನು ಗಳಿಸಿಕೊಂಡಿದೆ. ಜೊತೆಗೆ ಅಲ್ಲಲ್ಲಿ ನಡೆಯುವ ನಾಟಕಗಳಲ್ಲಿ ಇಲ್ಲಿನ ಕಲಾವಿದರು ಭಾಗವಹಿಸುತ್ತಿದ್ದಾರೆ.

**5. ತಾಲ್ಲೂಕು ಶಿಕ್ಷಕರ ಹಾಗೂ ಪಕ್ಕವಾದ್ಯಗಾರರ ಸಂಘ:** ಸಂಘವನ್ನು ಪಿ.ತ್ಯಾಗರಾಜ್ ಅವರ ಅಧ್ಯಕ್ಷತೆಯಲ್ಲಿ ಕಾರ್ಯದರ್ಶಿ ಗುರುಸ್ವಾಮಾರಾಧ್ಯ, ಖಜಾಂಚಿ ಜಗದೀಶ್ವರಚಾರಿ ನೇತೃತ್ವದಲ್ಲಿ ನಡೆಯುತ್ತಿದ್ದು, 150 ಸದಸ್ಯರನ್ನು ಒಳಗೊಂಡಿದೆ.

ಸಂಪರ್ಕ: ಪುಟ್ಟಾಚಾರ್, ಸಂಗೀತ/ನಾಟಕ ನಿರ್ದೇಶಕರು
ಸರಸ್ವತಿ ವಾದ್ಯವೃಂದ, ನಂ.119, ರಾಮನಗರ ರಸ್ತೆ, ಕನಕಪುರ ಟೌನ್

**6. ಕರ್ನಾಟಕ ಸಂಘ:** ಮುಖ್ಯಸ್ಥರು: ಉಮಾಶಂಕರ್, ಅಧ್ಯಕ್ಷರು: ಜಗದೀಶ್ವರಚಾರ್, ಕಾರ್ಯದರ್ಶಿ: ಡಿ.ಎಸ್. ಸತೀಶ

## ಕೂ.ಗಿ. ಗಿರಿಯಪ್ಪ



**#88, 'ಮಾಧುರ್ಯ', ಭಾರತೀಯ ಜನಸಂಖ್ಯಾ ನಿಯಂತ್ರಣ ಯೋಜನೆ ಆಸ್ಪತ್ರೆ ಹಿಂಭಾಗ, 2ನೇ ತಿರುವು, ಕೂ.ಗಿ.ಗಿರಿಯಪ್ಪ ರಸ್ತೆ, ಕನಕಪುರ, ರಾಮನಗರ ಜಿಲ್ಲೆ ಮೊ: 9986696789**

ಶ್ರೀಯುತರು ಕೂನಮುದ್ದನಹಳ್ಳಿ ಕೂಟಗಲ್ ಹೋಬಳಿ ರಾಮನಗರಂ ತಾಲ್ಲೂಕು ರಾಮನಗರ ಜಿಲ್ಲೆಯ ಶ್ರೀ ಗಿರಿಯಪ್ಪಗೌಡ, ಶ್ರೀಮತಿ ಹನುಮಮ್ಮ ತವರ ಮೂರನೇ ಗಂಡುಮಗನಾಗಿ 14.04.1955 ರಂದು ಜನಿಸಿದರು. ಇವರು 08.01.1976 ರಲ್ಲಿ ಅಧ್ಯಾಪಕ ವೃತ್ತಿಗೆ ಪಾದಾರ್ಪಣೆ ಮಾಡಿದರು. ಮೈಸೂರು ವಿಶ್ವವಿದ್ಯಾಲಯದಿಂದ ಕನ್ನಡ ಎಂ.ಎ., ಬಿ.ಇಡಿ ಪದವಿಯ ನಂತರ ಪ್ರೌಢಶಾಲೆಗೆ ಬಡ್ತಿ ಹೊಂದಿ ಪ್ರಸ್ತುತ ಸರ್ಕಾರಿ ಎಕ್ಸ್ ಮುನ್ಸಿಪಲ್ ಶಾಲೆ ಪ್ರೌಢಶಾಲೆ, ತುಂಗಣಿ, ಕನಕಪುರದ ಸೇವೆ ಸಲ್ಲಿಸುತ್ತಿದ್ದಾರೆ.

1977 ರಿಂದ 1984 ರವೆಗೆ ರಾಮನಗರಂ ತಾಲ್ಲೂಕು ಕೈಲಾಂಚ ಹೋಬಳಿ ಕವಣಾಪುರ ಗ್ರಾಮದಲ್ಲಿ 7 ವರ್ಷಗಳ ಕಾಲ ಶಿಕ್ಷಕರಾಗಿದ್ದ ಸಂದರ್ಭದಲ್ಲಿ ರಂಗಕಲಾವಿದರಾಗಿ ನಾಲ್ಕು ನಾಟಕಗಳನ್ನು ಆಣಾಗ್ರಾಮದಲ್ಲಿ ಅಭಿನಯಿಸಿದ್ದಾರೆ. ಕುರುಕ್ಷೇತ್ರ, ವಿರಾಟಪರ್ವ, ರಾಮಾಯಣ ನಾಟಕಗಳಲ್ಲಿ ಸೂತ್ರದಾರನ ಪಾತ್ರ, ವಿರಾಟರಾಯ, ಗೋಪಾಲಕನ ಸೇನಾಪತಿ ಪಾತ್ರವನ್ನು ನಿರ್ವಹಿಸಿರುತ್ತಾರೆ. ಈ ಊರಿನಲ್ಲಿರುವಾಗಲೇ ಚನ್ನಮಾನಹಳ್ಳಿ ಕೆಂಚಪ್ಪ ಗುರುಗಳ ನೇತೃತ್ವದಲ್ಲಿ ಪಂಡರೀಭಜನೆಯನ್ನು ಕಲಿತು ನಾಲ್ಕು ಪ್ರದರ್ಶನಗಳನ್ನು ಆ ಊರಿನಲ್ಲೇ ಪ್ರದರ್ಶಿಸಿ ನಂತರ, ಕಾಡನಕುಪ್ಪೆ, ಚನ್ನಮಾನಹಳ್ಳಿ, ಕೂನಮುದ್ದನಹಳ್ಳಿ, ಹುಣಸನಹಳ್ಳಿ, ಅಂಕನಹಳ್ಳಿ, ನಂಜಾಪುರ, ಮಲ್ಲಂಗೆರೆ, ಹೊಸದೊಡ್ಡಿ ಗ್ರಾಮಗಳಲ್ಲಿ ಪ್ರದರ್ಶನ ನೀಡಿರುತ್ತಾರೆ. ಸಾಹಿತ್ಯ ಕ್ಷೇತ್ರದಲ್ಲಿ ಇವರ ಸೇವೆ ಮುಂದುವರಿಸಿ, ರಂಗಕಲೆಗೆ ತಮ್ಮದೇ ಆದ ಪ್ರೋತ್ಸಾಹವನ್ನು ಮುಂದುವರಿಸುತ್ತಾ 1995 ರಲ್ಲಿ ಕರ್ನಾಟಕ ಸಂಘದ ಕಾರ್ಯದರ್ಶಿಯಾಗಿದ್ದ ಸಂದರ್ಭದಲ್ಲಿ ಕನಕಪುರ ತಾಲ್ಲೂಕಿನ

ರಂಗಕಲಾ ಶಿಕ್ಷಕರನ್ನು, ಕಲಾವಿದರನ್ನು ಸಂಘಟಿಸಿ ತಾಲ್ಲೂಕು ಮಟ್ಟದ ರಂಗಕಲಾವಿದರ ಸಮ್ಮೇಳನವನ್ನು ಮಾಡಿದ್ದಾರೆ. ರಂಗಬಾಂಧವ್ಯದ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದಾರೆ.


## ಕನಕಪುರ ತಾಲ್ಲೂಕು ರಂಗಕಲಾ ಶಿಕ್ಷಕರು ಹಾಗೂ ಪಕ್ಕವಾದ್ಯಗಾರರ ಸಂಘ

### ಶ್ರೀ ವಿ. ಬಸವರಾಜು,

**ರಂಗ ಕಲಾ ಶಿಕ್ಷಕರು, ಗುರಿಕಾರ್ ರಂಗೇಗೌಡರ ಬೀದಿ, ರಾಮನಗರ ರಸ್ತೆ, ಕನಕಪುರ, ರಾಮನಗರ ಜಿಲ್ಲೆ**

ಶ್ರೀ ವಿ.ಬಸವರಾಜು ಅವರು ಕನಕಪುರ ತಾಲ್ಲೂಕು ರಂಗಕಲಾ ಶಿಕ್ಷಕರು ಹಾಗೂ ಪಕ್ಕವಾದ್ಯಗಾರರ ಸಂಘವನ್ನು ಸ್ಥಾಪಿಸಿದರು. ಅದರ ಅಧ್ಯಕ್ಷರನ್ನಾಗಿ ಇವರನ್ನು ಆರಿಸಿ, ಕಾರ್ಯದರ್ಶಿಯಾಗಿ ಪುಟ್ಟಾಚಾರ್ ಉರುಫ್ ಮರಿಯಾಚಾರ್‌ರವರನ್ನು ಆರಿಸಿ, ಸಂಘವನ್ನು ಮುನ್ನಡೆಸಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ ಸಾಕಷ್ಟು ಕಾರ್ಯಕ್ರಮಗಳು ಇವರ ಕಾಲದಲ್ಲಿ ನಡೆದಿವೆ. ಇವರ ಈ ಸಂಘದ ಸದಸ್ಯರಿಗೆ ಸುಮಾರು 35 ಮಂದಿಗೆ ಮಾಸಾಸನ ಮಾಡಿಸಿದ್ದಾರೆ. ಮಾನ್ಯ ಮಾಜಿ ಮಂತ್ರಿಗಳಾದ ಪಾಂಡುರಂಗ ಗಣೇಶರಾವ್ ಸಿಂಧ್ಯಾರವರು ಇವರ ಸಂಘಕ್ಕೆ 25 ಸಾವಿರ ರೂಪಾಯಿಗಳನ್ನು ದಾನ ಮಾಡಿದ್ದಾರೆ. ಇದನ್ನು ಬ್ಯಾಂಕಿನಲ್ಲಿಟ್ಟು ಈ 50 ಸಾವಿರ ರೂಪಾಯಿಗಳವರೆಗೆ ಬೆಳೆಸಿದ್ದಾರೆ. ಇವರ ಸೇವೆ ಶ್ಲಾಘನೀಯವಾದದ್ದು. ಇವರಿಗೆ ಈ ಸಂಘದ ಎಲ್ಲಾ ಸದಸ್ಯರು ಪ್ರೋತ್ಸಾಹ, ಸಹಕಾರವನ್ನು ನೀಡಿದ್ದಾರೆ. ಇವರ ಕಲೆಯು ಇನ್ನು ಎತ್ತರಕ್ಕೆ ಬೆಳೆಯಲೆಂದು ಹಾರೈಸೋಣ.

### ಪುಟ್ಟಾಚಾರ್ ಉರುಫ್ ಮರಿಯಾಚಾರ್,



**ಅಗರ ಗ್ರಾಮ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ**

ಶ್ರೀ ಮರಿಯಾಚಾರ್ ಒಬ್ಬ ಪ್ರತಿಭಾವಂತ ರಂಗಕಲಾವಿದರೂ, ಕ್ಲಾರಿಯೋನೆಟ್ ವಾದಕರು. ವಿಶ್ವಕರ್ಮ ಜನಾಂಗದಲ್ಲಿ 10.10.1936ನೇ ಇಸವಿಯಲ್ಲಿ ಅಗರ ಗ್ರಮದಲ್ಲಿ ಜನಿಸಿದರು. ಅಗರ ಗ್ರಾಮದಲ್ಲೇ ಪ್ರಾಥಮಿಕ ವಿದ್ಯಾಭ್ಯಾಸ. ನಂತರ ಮರಳವಾಡಿ ಮಾಧ್ಯಮಿಕ ಶಾಲೆಗೆ ಸೇರಿ 1950ರಲ್ಲಿ ಎಸ್.ಎಸ್.ಎಲ್.ಸಿ.ನಲ್ಲಿ ಉತ್ತೀರ್ಣರಾದರು. ಶಿಕ್ಷಕರಾಗಿ ಕೆಲಸ ಮಾಡಲು ಕರೆ. ಅದನ್ನು ಸೌಜನ್ಯದಿಂದಲೇ ತಿರಸ್ಕರಿಸಿ, ಕುಲ ಕಸುಬು ಹಾಗೂ ಸಂಗೀತ ಕಲಿಯಲು ತಮಿಳುನಾಡಿನ ಡೆಂಕಣಿಕೋಟೆಯಲ್ಲಿ ಐದು ವರ್ಷಗಳ ಕಾಲ ಅಭ್ಯಾಸ ಮಾಡಿ ಮತ್ತೆ ತೌರೂರಿಗೆ ಪ್ರಯಾಣ, ಊರಿನಲ್ಲಿ ಕುಲಕಸುಬು ಮುಂದುವರಿಸಿದರು. ರೈತರು ಎಲ್ಲಾ ಸೇರಿ ಕುರುಕ್ಷೇತ್ರ ನಾಟಕವನ್ನು ಆರಂಭಿಸಿದ್ದರು. ಅದನ್ನು ಈಗಿನ ಪುಟ್ಟಾಚಾರ್ ಕಲ್ಯಾಣ ಮಂಟಪದ ಮಾಲೀಕರಾದ ಶ್ರೀ ಪುಟ್ಟಾಚಾರ್ ಕಲಿಸುತ್ತಿದ್ದರು. ಈ ನಾಟಕದಲ್ಲಿ ಇವರಿಗೆ ಕೃಷ್ಣ ಪಾತ್ರವನ್ನು ಕೊಟ್ಟರು. ತುಂಬಾ ಚೆನ್ನಾಗಿ ಪಾತ್ರವಹಿಸಿದರು. ಇವರು ಊರಿನಲ್ಲಿಯೇ ಇದ್ದು ಬಿಡುವಿನ ವೇಳೆಯಲ್ಲಿ ಕುಲಕಸುಬನ್ನು ಮಾಡುತ್ತಿದ್ದರು. ಈ ಮಧ್ಯೆ ವಿಪರೀತ ಮಳೆಯಿಂದಾಗಿ ಮೂವತ್ತೂರು ಕೆರೆ ಹೊಡೆದು ಹೋಯಿತು. ಬರಗಾಲ ಬಂತು ಜೀವನ ಸಾಗಿಸುವುದು ಕಷ್ಟವಾಯಿತು. ಮಂಡ್ಯದ ಕೊತ್ತತ್ತಿಯನ್ನು ಸೇರಿದರು.

ಕೊತ್ತತ್ತಿಯನ್ನು ಸೇರಿ ಅಲ್ಲಿ 'ದಾನಶೂರಕರ್ಣ', 'ಮಹಾಭಾರತ' ಎರಡು ನಾಟಕಗಳನ್ನು ಕಲಿಸಿ ಎರಡು ವರ್ಷಗಳ ನಂತರ ಮತ್ತೆ ಕನಕಪುರ ಪಕ್ಕದ ಬರಡನ ಹಳ್ಳಿಗೆ ಬಂದು ಸೇರಿದರು. ನಂತರ ಎಲೆಕ್ಟ್ರಿಕಲ್ ವಾದ್ಯ ತಂದು ನುಡಿಸುವುದನ್ನು ಅಭ್ಯಾಸ ಮಾಡಿದರು. ಈ ಮೊದಲು ಇವರು ನಾಟಕ ಮಾಸ್ತರ ಆಗಿ 1957ನೇ ಇಸವಿಯಿಂದ ಪ್ರಾರಂಭಿಸಿ, ದಾನಶೂರ ಕರ್ಣ, ನಾರದರ ಸಂದಾನ, ಮಹಾಭಾರತ, ಕುರುಕ್ಷೇತ್ರ, ದಶಾವತಾರ, ಶಿವಭಕ್ತ ರಾವಣ, ಮಲೆಮಾದೇಶ್ವರ, ಸುಭದ್ರಾ ಕಲ್ಯಾಣ ನಾಟಕಗಳನ್ನು ಕಲಿಸಿರುತ್ತಾರೆ.

ಅಗರ, ಚಿಕ್ಕ ಸಾದೇನಹಳ್ಳಿ, ಗಾಣಾಳು, ದಿಂಬದಹಳ್ಳಿ, ಬರಡನಹಳ್ಳಿ, ಮಲ್ಲಿಗೆ ಮೆಟ್ಲು, ಅಜ್ಜೇಗೌಡನ ವಲಸೆ, ಕನಕಪುರದ ಮೇಗಳ ಬೀದಿ, ವಿರುಪಸಂದ್ರ, ಜವನಮ್ಮನದೊಡ್ಡಿ, ಚೀರಣಕುಪ್ಪೆ, ವೆಂಕಟರಾಯದೊಡ್ಡಿ. ಹೀಗೆ ನಾಟಕ ಕಲಿಸುವುದು, ವಾದ್ಯ ನುಡಿಸುವುದನ್ನು ನಡೆಸುತ್ತಾ ಇರಲು ಒಮ್ಮೆ ಒಂದು ನಾಟಕಕ್ಕೆ ಕನಕಪುರ ತಾಲ್ಲೂಕಿನ ರಾಜಕೀಯ ಧುರೀಣರೂ, ಶಾಸಕರೂ ಆದ ಮಾನ್ಯ ಶ್ರೀ ಪಿ.ಜಿ.ಆರ್.ಸಿಂಧ್ಯಾ ರವರು ಇವರನ್ನು ಭೇಟಿ ಮಾಡಿ ಎಲ್ಲಾ

ತಾಲ್ಲೂಕಿನಲ್ಲೂ ಕಲಾವಿದರ ಸಂಘಗಳಿವೆ. ನಮ್ಮ ತಾಲ್ಲೂಕಿನಲ್ಲಿ ನೀವು, ನಿಮ್ಮ ಗೆಳೆಯರು ಸೇರಿ ಏಕೆ ಒಂದು ಸಂಘ ಸ್ಥಾಪಿಸಬಾರದು. ಅದಕ್ಕೆ ಬೇಕಾಗುವ ನೆರವು ನಾನು ನೀಡುತ್ತೇನೆ ಎಂದರಂತೆ. ಅದರಂತೆ ಅವರ ಮಾತಿನಂತೆ ಬರಡನಹಳ್ಳಿಯಲ್ಲಿ ವಾಸಿಸುವುದನ್ನು ಬಿಟ್ಟು ಕನಕಪುರ ಪಟ್ಟಣಕ್ಕೆ ಬಂದು ನೆಲೆಸಿದರು. "ಬರಡನಹಳ್ಳಿ ನಾಟಕ ಮಾಸ್ಟರ್ ಮರಿಯಾಚಾರ್" ಎಂದು ಕರೆಯುವಂತಾಯಿತು. "ಕನಕಪುರ ತಾಲ್ಲೂಕು ರಂಗಕಲಾ ಶಿಕ್ಷಕರು ಹಾಗೂ ಪಕ್ಕವಾದ್ಯಗಾರರ ಸಂಘ" ಅಸ್ತಿತ್ವಕ್ಕೆ ಬಂತು. (ನೋಂದಣಿ ಸಂಖ್ಯೆ: ಎಸ್.ಓ.ಆರ್.139/93/94 ದಿನಾಂಕ: 16.02.1994) ಪ್ರಥಮವಾಗಿ ಶ್ರೀಯುತರೇ ಗೌರವ ಕಾರ್ಯದರ್ಶಿಗಳಾದರು.

ಕರ್ನಾಟಕ ಸರ್ಕಾರದ ಗೌರವಧನವನ್ನು ಹೃದಯ ತುಂಬಿ ಸ್ಮರಿಸಿಕೊಳ್ಳುತ್ತಾರೆ. 'ಸರಸ್ವತಿ ವಾದ್ಯವೃಂದ'ವನ್ನು ಕಟ್ಟಿ ಸುಖೀ ಸಂಸಾರದ ಜೀವನವನ್ನು ತಮ್ಮ ಕುಲ ಕಸುಬಿನ ಜೊತೆ ನಡೆಸುತ್ತಿದ್ದಾರೆ. ತಮ್ಮ ಸಂಘದ ಸದಸ್ಯರನ್ನು ಒಟ್ಟುಗೂಡಿಸಿಕೊಂಡು ರಾಮಾಯಣ, ದಾನಶೂರಕರ್ಣ, ನಾಟಕಗಳನ್ನು ಅವರೇ ಕಲಿಸಿ, ರಂಗಕಲಾವಿದರನ್ನು ಸಂಘಟಿಸುವ ಕೈಂಕರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ.

## ಶ್ರೀ ಪಿ.ಗುರುಸೋಮಾರಾಧ್ಯ, ರಂಗ ಕಲಾವಿದರು,

ತಿಗಳರ ಹೊಸಹಳ್ಳಿ, ಕಸಬಾ ಹೋಬಳಿ,
ತೊರೆಬೇಕುಪ್ಪೆ ಅಂಚೆ, ಕನಕಪುರ ತಾಲ್ಲೂಕು,
ರಾಮನಗರ ಜಿಲ್ಲೆ

ಶ್ರೀಯುತರು ದಿನಾಂಕ: 02.10.1952 ರಲ್ಲಿ ತಿಗಳರ ಹೊಸಹಳ್ಳಿ ಗ್ರಾಮದಲ್ಲಿ ತಂದೆ ಪುಟ್ಟಸ್ವಾಮರಾಧ್ಯ, ತಾಯಿ ಗೌರಮ್ಮ ಇವರ ಮಗನಾಗಿ ಜನಿಸಿದರು. ರಂಗಕಲೆ ಇವರ ತಾತನ ಕಾಲದಿಂದಲೂ ಬಂದ ಬಳುವಳಿ. ಅಜ್ಜಿಯವರು ಯಕ್ಷಗಾನ ಕಲಿಸುತ್ತಿದ್ದರಂತೆ, ತಂದೆಯವರು ಕೂಡ ಯಕ್ಷಗಾನ, ಶನಿಮಹಾತ್ಮೆ, ನಳದಮಯಂತಿ, ಸತ್ಯವ್ರತ ಮುಂತಾದ ಕಥೆಗಳನ್ನು ಓದುತ್ತಿದ್ದುದಲ್ಲದೆ ಪಿ.ಗುರುಸೋಮಾರಾಧ್ಯರ ಚಿಕ್ಕಪ್ಪನವರು ನಾಟಕ ಕಲೆಯಲ್ಲಿ ಪರಿಣತಿ ಹೊಂದಿದ್ದು, ಪೌರಾಣಿಕ ನಾಟಕಗಳನ್ನು ಕಲಿಸಿ, ಆ ಕಲೆಯನ್ನು ಅಣ್ಣನ ಮಗನಾದ ಇವರಿಗೆ ವರ್ಗಾಹಿಸಿದ್ದಾರೆ. ಇವರು ಸುಮಾರು ಮೂವತ್ತೈದು ವರ್ಷಗಳಿಂದ ಕಲಾರಾಧಕರಾಗಿ ರಂಗಕಲೆಗೆ ತಮ್ಮ ಜೀವನವನ್ನು ಮುಡುಪಾಗಿಟ್ಟಿದ್ದಾರೆ.

ಶ್ರೀಯುತರು ಕಲಿತಿದ್ದು ಕೇವಲ ನಾಲ್ಕನೇ ವರ್ಗ, 16ನೇ ವಯಸ್ಸಿನವರೆಗೂ ಅಲೆದಾಟ, ದನ ಮೇಯಿಸುವುದು, ಪಾತ್ರೆ ತೊಳೆಯುವ ಕೆಲಸ. ಸಂಜೆ ಊರಿನಲ್ಲಿ ನಾಟಕ ಕಲಿಸುವ ಸ್ಥಳಕ್ಕೆ ಓಡುತ್ತಿದ್ದರು. ಕೃಷ್ಣಲೀಲೆ ನಾಟಕದಲ್ಲಿನ ಪಾತ್ರಗಳು ಇವರ ಮನಸೆಳೆದವು. ಈತನ ಆಸಕ್ತಿ, ಅಭಿರುಚಿಯನ್ನು ಕಂಡ ನಾಟಕ ಮಾಸ್ತರು ಇವರಿಗೆ ಒಂದು ಚಿಕ್ಕ ಲಕ್ಷ್ಮಿ ಪಾತ್ರವನ್ನು ಕೊಟ್ಟರು. ಅದನ್ನು ತುಂಬಾ ಚೆನ್ನಾಗಿ, ಅಚ್ಚುಕಟ್ಟಾಗಿ ನಿರ್ವಹಿಸಿ ಊರಿನ ಹಿರಿಯರ ಪ್ರೀತಿಗೆ ಪಾತ್ರರಾದರು.

ಮುಂದೆ ಇವರಿಗೆ ಹಾರ್ಮೋನಿಯಂ ಕಲಿಯಲೇಬೇಕೆಂದು ಅನಿಸಿದಾಗ, ಹಾರ್ಮೋನಿಯಂ ಕಲಿತು ಅನಂತರ ಭಜನೆ ಹಾಡುಗಳಿಗೆ ಹಾರ್ಮೋನಿಯಂ ನುಡಿಸಿದರು. ನಂತರ ಗ್ರಾಮಸ್ಥರು ಶ್ರೀಯುತರಿಗೆ ಸತ್ಯಹರಿಶ್ಚಂದ್ರ ನಾಟಕದ ಪ್ರತಿಯನ್ನು ತಂದುಕೊಟ್ಟು, ನಾಟಕವನ್ನು ಕಲಿಸುವಂತೆ ಹೇಳಿದರು. ಇದರಲ್ಲಿ ಮುಂದಾಳತ್ವ ವಹಿಸಿದವರೆಂದರೆ ಶ್ರೀ ಪುಟ್ಟಮಾದಯ್ಯನವರು. ಅವರು ಈ ನಾಟಕದಲ್ಲಿ ವಿಶ್ವಾಮಿತ್ರನ ಪಾತ್ರವನ್ನು ವಹಿಸಿದರು. ನಂತರ ಗೆಜ್ಜೆಪೂಜೆಯನ್ನು ಸಹ ಕಲಿಸಿದರು. ಕಲೆಯೇ ಜೀವನದ ಉಸಿರು ಎಂದು ಜೀವನವನ್ನು ಸಾಗಿಸುತ್ತಲಿರುವ ಇವರು ಕಲಿಸಿದ ನಾಟಕಗಳು ಹಲವಾರು ಅವು ಇಂತಿವೆ. ಪಾಂಡು ವಿಜಯ, ಸತ್ಯಹರಿಶ್ಚಂದ್ರ(ಮೂರು ಸಾರಿ), ಕುರುಕ್ಷೇತ್ರ(ಎರಡು ಸಾರಿ), ಐರಾವತ, ತ್ರಿಜನ್ಮ, ಮೋಕ್ಷ, ಸುಭದ್ರ ಕಲ್ಯಾಣ, ಶಿವ ಜಲಂಧರ, ರಾಜ ವಿಕ್ರಮ, ತ್ರಿಪುರ ಸಂಹಾರ, ಮೂರುವರೆ ವಜ್ರಗಳು, ದಾನಶೂರಕರ್ಣ, ನಳದಮಯಂತಿ, ರಾಮಾಯಣ, ರಾಜಸುಯಾಗ, ಗಿರಿಜಾ ಕಲ್ಯಾಣ, ಅಹಿಮಹಿರಾವಣ, ಸಾಮ್ರಾಟ ಸುಯೋಧನ, ಕೃಷ್ಣಾರ್ಜುನ ಯುದ್ಧ, ಭೀಮಾರ್ಜುನರ ಯುದ್ಧ, ಹೀಗೆ ಸುಮಾರು ಇಪ್ಪತ್ತು ಹಳ್ಳಿಗಳಲ್ಲಿ ನಾಟಕವನ್ನು ಕಲಿಸಿ ರಂಗಕಲೆಗೆ ಜೀವ ಮೂಡಿಸಿದ್ದಾರೆ.

ಇವರು ಕಲಾವಿದರಾಗಿ ದುರ್ಯೋಧನ, ರಾವಣ, ಶ್ರೀಕೃಷ್ಣನ ಪಾತ್ರಗಳನ್ನು ನಿರ್ವಹಿಸಿದ್ದಾರೆ. ಪ್ರಸ್ತುತ ಕನಕಪುರದಲ್ಲಿರುವ ರಂಗಕಲಾ ಶಿಕ್ಷಕರು ಹಾಗೂ ಪಕ್ಕವಾದ್ಯ ಕಲಾ ಸಂಘದಲ್ಲಿ ಐದು ವರ್ಷ ಕೋಶಾಧ್ಯಕ್ಷರಾಗಿ, ಸದ್ಯ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.

## ಶ್ರೀ ಎಂ.ನಂಜಪ್ಪ, ರಂಗಕಲಾ ಶಿಕ್ಷಕರು,
### ಅತ್ತಿಗುಪ್ಪೆ, ಅತ್ತಿಗುಪ್ಪೆ ಅಂಚೆ,
### ಮರಳವಾಡಿ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ

ತಂದೆ ಪೂಜ್ಯ ಶ್ರೀ ಭಜನೆ ಮುದ್ದೇಗೌಡ, ತಾಯಿ ಶ್ರೀಮತಿ ಚಿಕ್ಕಮ್ಮ. ಈ

ದಂಪತಿಗಳ ಮಗನಾಗಿ 28.09.1915 ರಲ್ಲಿ ಜನಿಸಿದರು. ಕೂಲಿಮಠದಲ್ಲಿ ಪ್ರಾಥಮಿಕ ಶಿಕ್ಷಣ, ಹಾರೋಹಳ್ಳಿಯಲ್ಲಿ ಮಾಧ್ಯಮಿಕ ಶಿಕ್ಷಣ ಪಡೆದರು. ತಂದೆಯವರು ಭಜನೆ, ಕೀರ್ತನೆಗಳನ್ನು ಹಾಡುತ್ತಿದ್ದರು. ಇವರಿಂದ ಅವರಲ್ಲಿದ್ದ ಸೂಪ್ತ ಸಂಗೀತ ಹೊರಹೊಮ್ಮಲಾರಂಭಿಸಿತು. ಸಿದ್ಧಾಪುರದ ಶ್ರೀ ವೆಂಕಟಗಿರಿಯಪ್ಪನವರಲ್ಲಿ ಶಿಷ್ಯರಾಗಿದ್ದುಕೊಂಡು, 1937 ರಲ್ಲಿ ಹಿಂದಿರುಗಿ ನಾಟಕ ವೃತ್ತಿಯನ್ನು ಅವಲಂಭಿಸಿದರು.

1940 ರಲ್ಲಿ ಮದುವೆಯಾಗಿ 6 ಮಕ್ಕಳ ತಂದೆಯಾದರು. ಕಲೆಯ ಬಗೆಗೆ ಅತ್ಯಂತ ಅಭಿಮಾನವುಳ್ಳ ಇವರು "ಕಲೆಯನ್ನು ಕೇವಲ ಹೊಟ್ಟೆಯ ಪಾಡಿಗೋಸ್ಕರ ಬಳಸಿಕೊಳ್ಳಬಾರದು" ಎಂಬ ಅಭಿಪ್ರಾಯವನ್ನುವುಳ್ಳ ಇವರಿಗೆ 1959 ರಲ್ಲಿ "ಕಲಾ ಸೇವಾ ಪ್ರಶಸ್ತಿ"ಯನ್ನು ನೀಡಿ ಗೌರವಿಸಿದರು. "ಹಾರೋಹಳ್ಳಿಯ ಶ್ರೀ ಚಾಮುಂಡೇಶ್ವರಿ ಕಲಾ ಸಂಘ"ದ ವತಿಯಿಂದ ಶ್ರೀಯುತ ಮುಸುರಿ ಕೃಷ್ಣಮೂರ್ತಿ ರವರ ಅಧ್ಯಕ್ಷತೆಯಲ್ಲಿ "ನಾಟ್ಯ ಕಲಾ ರತ್ನ" ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ.

ಶ್ರೀಯುತರು ಕಲಿಸಿದ ನಾಟಕಗಳು ಹಲವಾರು, 1940 ರಲ್ಲಿ ಪ್ರಾರಂಭಗೊಂಡ ನಾಟಕ ಕಲಿಸುವ ಕಲೆಯಲ್ಲಿ ಪೌರಾಣಿಕ, ಸಾಮಾಜಿಕ, ಐತಿಹಾಸಿಕ ನಾಟಕಗಳನ್ನು ಪ್ರಯೋಗಿಸಿದ್ದಾರೆ. ಅವು ಸತ್ಯಹರಿಶ್ಚಂದ್ರ, ನಳದಮಯಂತಿ, ಸಂಪೂರ್ಣ ರಾಮಾಯಣ, ಕುರುಕ್ಷೇತ್ರ, ದಾನಶೂರಕರ್ಣ, ಕೃಷ್ಣಲೀಲಾ, ಸುಭದ್ರ ಪರಿಚಯ, ಸಾನಂದ ಗಣೇಶ, ಪಾಂಡವ ವಿಜಯ, ಮಂಡೋದರಿ, ರಾಜವಿಕ್ರಮ, ತ್ರಿಜನ್ಮ ಮೋಕ್ಷ, ಭಕ್ತ ಪ್ರಹ್ಲಾದ, ಎಚ್ಚಮ ನಾಟಕ, ದೇವದಾಸಿ, ಕಾಳಿದಾಸ ಮುಂತಾದವುಗಳನ್ನು ಕಲಿಸಿ ಆಡಿಸಿದ್ದಾರೆ.

ಶ್ರೀಯುತರು ಗೊಟ್ಟಿಗೆಹಳ್ಳಿ, ಕಾಡುಜಕ್ಕಸಂದ್ರ, ಕೋನಸಂದ್ರ, ಚಿಕ್ಕನದೊಡ್ಡಿ, ಅತ್ತಿಗುಪ್ಪೆ, ಕಗ್ಗಲಹಳ್ಳಿ, ಮಲ್ಲಿಗೆ ಮೆಟ್ಲು, ಮಲಗನಹಳ್ಳಿ, ಗಬ್ಬಾಡಿ, ರಾಂಪುರ, ಹಾರೋಹಳ್ಳಿ, ರವೀಂದ್ರ ಕಲಾಕ್ಷೇತ್ರ, ದೊಡ್ಡ ಮರಳವಾಡಿ, ಕೊಳ್ಳಿಗನಹಳ್ಳಿ, ಗುಬ್ಬಿ ತಾಲ್ಲೂಕು ಕಡಬ, ಚಿಕ್ಕ ಮರಳವಾಡಿ, ಬೈರಮಂಗಲ, ಹೊಸೂರು, ಜಾನಪದ ಲೋಕ, ಗೋದೂರು, ಟಿ.ಮಣಿಯಂಬಾಳಿ ಕಡೆಗಳಲ್ಲಿ ನಾಟಕ ಕಲಿಸಿ ರಂಗಕಲೆಯನ್ನು ಬೆಳೆಸಿದ್ದಾರೆ.

## ಶ್ರೀ ಹೆಚ್.ಕೆ.ಕಾಳಪ್ಪ, ರಂಗಕಲಾ ಶಿಕ್ಷಕರು,

### ಹುಣಸನಹಳ್ಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ

ಶ್ರೀಯುತರು ಹುಣಸನಹಳ್ಳಿ ಗ್ರಾಮ, ಕೋಡಿಹಳ್ಳಿ ಹೋಬಳಿಯಲ್ಲಿ ತಂದೆ ಕಿಟ್ಟಯ್ಯ, ತಾಯಿ ಲಕ್ಷ್ಮಿದೇವಮ್ಮ ನವರ ದಂಪತಿಗಳ ಮಗನಾಗಿ ಜನಿಸಿದ ಶ್ರೀ ಹೆಚ್.ಕೆ.ಕಾಳಪ್ಪನವರು ಕೊಳ್ಳೇಗಾಲ ತಾಲ್ಲೂಕಿನ ಕಳ್ಳಿಗ್ರಾಮದ ಶಿವಪ್ಪನವರು, ಕುಂತೂರು ಸಿದ್ದಪ್ಪಶಾಸ್ತ್ರಿಗಳಿಂದ ಹಾರ್ಮೋನಿಯಂ ಕಲಿತು ಅವರ ಸಂಗಡವೇ ಜಗಜ್ಯೋತಿ ಬಸವೇಶ್ವರ ಹಾಗೂ ಪ್ರಭುಲಿಂಗಲೀಲೆ ನಾಟಕಗಳನ್ನು ಕಲಿಸಿ ನಂತರ ಕನಕಪುರ ತಾಲ್ಲೂಕಿಗೆ ಬಂದರು.

ಅನಂತರ ಶ್ರೀಯುತ ಕಾಳಪ್ಪನವರು ಜಗಜ್ಯೋತಿ ಬಸವೇಶ್ವರ, ಸತ್ಯಹರಿಶ್ಚಂದ್ರ, ದೇವದಾಸಿ, ಗುರುಭಕ್ತಿ, ಪಾಂಡುವಿಜಯ, ಸುಪ್ರಭಾವ ವಿಲಾಸ, ಸಂಪೂರ್ಣ ರಾಮಾಯಣ, ಪ್ರಭುಲಿಂಗಲೀಲೆ, ಮುಂತಾದ ನಾಟಕಗಳನ್ನು ದೇಗುಲ ಮಠಾದೀಶರು, ಮರಳೇಗವಿ ಮಠಾದೀಶರು, ಬೇಲಿ ಮಠಾದೀಶರು, ಶಂಕರೇಗೌಡ, ಹೆಚ್.ಡಿ.ದೇವೆಗೌಡ, ಪಿ.ಜಿ.ಆರ್.ಸಿಂಧ್ಯಾ, ಕೆ.ಜಿ.ತಿಮ್ಮೇಗೌಡ ಮುಂತಾದವರ ಅಧ್ಯಕ್ಷತೆಯಲ್ಲಿ ನಾಟಕವಾಡಿಸಿದ್ದಾರೆ.

ಇವರು ಕಲಿಸಿದ ನಾಟಕಗಳನ್ನು ರಾಜ್ಯದ ನಾನಾ ಭಾಗಗಳಿಗೆ ಉಣಬಯಸಿದ್ದಾರೆ. ಹುಣಸನಹಳ್ಳಿ, ಗೊಲ್ಲರದೊಡ್ಡಿ, ಗಂಗನಹಳ್ಳಿ, ನೇರಲಹಟ್ಟಿ, ಚಿಕ್ಕಮುಕ್ಕೊಡ್ಲು, ದೇವರ ಶಿವನಹಳ್ಳಿ, ಸಾತನೂರು, ದೊಡ್ಡಮುದುವಾಡಿ, ಗೂಗಾರೆದೊಡ್ಡಿ, ಚನ್ನಪಟ್ಟಣ ತಾಲ್ಲೂಕಿನ ಮಡೇನಹಳ್ಳಿ, ಹೊನ್ನಾಯಕನಹಳ್ಳಿ, ಮಳವಳ್ಳಿ ತಾಲ್ಲೂಕಿನ ಹಾಡ್ಲಿ, ಸಾಯಳ್ಳಿ, ಮೇಗಲಪುರ, ಕರಿಸಾಗರ, ಅಗಸನಪುರ, ತಮಿಳುನಾಡಿನ ಉರಿಗ್ಯಂ ಗ್ರಾಮದಲ್ಲಿ ಉಡುಬರಾಣೆ, ಥಳಿ, ತರ್ಪು, ನಾಗಸಂದ್ರ ಮಠಗಳಲ್ಲಿ ಕಲಿಸಿದ್ದಾರೆ. ಭಕ್ತಿಧಾರೆಯನ್ನು ಹರಿಸಿದ ಇವರು ರಂಗಕರ್ಮಿಗಳಲ್ಲಿ ಒಂದು ಕಲಾರತ್ನವೇ ಸರಿ.

## ಶ್ರೀ ಎಸ್.ವಿ.ಮಹದೇವಸ್ವಾಮಿ, ರಂಗ ಕಲಾವಿದರು,

### ಸಾತನೂರು, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ

ಶ್ರೀಯುತರಾದ ಶ್ರೀ ಎಸ್.ವಿ.ಮಹದೇವಸ್ವಾಮಿಯವರು ಕನಕಪುರ ತಾಲ್ಲೂಕಿನ ಸಾತನೂರಿನವರು. ತಂದೆ ವೀರಪ್ಪನವರು, ತಾಯಿ ಪಾರ್ವತಮ್ಮ.

ಇವರು ಸಾತನೂರಿನಲ್ಲಿ 1952 ರಲ್ಲಿ ಜನಿಸಿದರು. ಅವರು ತಮ್ಮ 13ನೇ ವಯಸ್ಸಿನಲ್ಲಿ ನಾಟಕ ಮಾಡುವ ಹವ್ಯಾಸವನ್ನು ರೂಢಿಸಿಕೊಂಡರು.

ಮಹದೇವಸ್ವಾಮಿಯವರು ಹೆಚ್ಚು ಪೌರಾಣಿಕ ನಾಟಕಗಳನ್ನು ಮಾಡಿದ್ದಾರೆ. ಭಕ್ತಿ ಪ್ರಧಾನವಾದ ಪಾತ್ರಗಳು ಇವರಿಗೆ ತುಂಬಾ ಇಷ್ಟ. ಇವರು ಬಸವೇಶ್ವರ ನಾಟಕ, ಪಾಂಡವ ವಿಜಯ, ರಾಮಾಯಣ, ಶ್ರೀಕೃಷ್ಣಲೀಲೆ ನಾಟಕ, ಕುರುಕ್ಷೇತ್ರ, ಪ್ರಭುಲಿಂಗಲೀಲೆ, ಮುಂತಾದ ನಾಟಕಗಳಲ್ಲಿ ಭಾಗವಹಿಸುವುದರ ಜೊತೆಗೆ ತಾವೇ ನಿಂತು ನಾಟಕ ಮಾಡಿಸುತ್ತಿದ್ದರು.

ಇವರು ತಮ್ಮ 13–14ನೇ ವಯಸ್ಸಿನಲ್ಲಿಯೇ ಮಾದಲಾಂಬಿಕೆ, ಅಕ್ಕಮಹಾದೇವಿ, ಶರ್ವಾಣಿ, ದೇವಶರ್ಮ, ಭಟ್ಟನಪಾತ್ರ, ತಮ್ಮ 15–16ನೇ ವಯಸ್ಸಿನಲ್ಲಿ ಧರ್ಮರಾಯನ ಪಾತ್ರ, ರಾಮಾಯಣ ನಾಟಕದಲ್ಲಿ ಕೌಸಲ್ಯ ಮತ್ತು ಭರತನ ಪಾತ್ರ, ಕೃಷ್ಣಲೀಲೆ ನಾಟಕದಲ್ಲಿ ವಾಸುದೇವನ ಪಾತ್ರ, ಕೃಷ್ಣಲೀಲೆ ನಾಟಕದಲ್ಲಿ ಕಂಸನ ಪಾತ್ರ, ಚಾಂದ್‌ಖಾನ್ ಪಾತ್ರ, ದಾನಶೂರಕರ್ಣ ನಾಟಕದಲ್ಲಿ ಕರ್ಣನಪಾತ್ರ, ಕುರುಕ್ಷೇತ್ರ ನಾಟಕದಲ್ಲಿ ಕೃಷ್ಣನಪಾತ್ರ, ಶರಣ ಹರಳಯ್ಯ ನಾಟಕ, ಕೃಷ್ಣಗಾರುಡಿ ನಾಟಕದಲ್ಲಿ ಅಶ್ವತ್ಥಾಮನ ಪಾತ್ರ, ಹರಳಯ್ಯನ ಪಾತ್ರಗಳನ್ನು ಮಾಡಿ ಭಕ್ತಿ ಪ್ರಧಾನ ಪಾತ್ರಗಳಲ್ಲಿ ಅಭಿನಯಿಸಿ ಜನಾನೂರಾಗಿಯಾಗಿದ್ದಾರೆ.

ಇವರ ಸಹಪಾಠಿಗಳಾಗಿ, ಶಿವಬಸಪ್ಪ, ಎಸ್.ಎಸ್. ಪರಶಿವಯ್ಯ, ರಾಜಶೇಖರಯ್ಯ, ತಮ್ಮಿಶೆಟ್ಟರು, ಹೊಟ್ಟಪ್ಪ, ಬೆಟ್ಟೇಗೌಡ, ದೊಡ್ಡಣ್ಣ, ತಮ್ಮಯ್ಯ, ಚಿಕ್ಕಣ್ಣ, ಪುಟ್ಟಸ್ವಾಮಿಗೌಡ, ನಾರಾಯಣರಾವ್ ಪಿಸ್ಸೆ, ಪುಟ್ಟರಾಜಪ್ಪ, ಪ್ರೇಮಕುಮಾರ್, ಜಟ್ಟಪ್ಪ, ಮಹೇಶ್, ಶಿವನಂಜಪ್ಪ, ಪುಟ್ಟೇಗೌಡ, ಎಸ್.ಶಂಕರ್, ರಾಮಕೃಷ್ಣಪ್ಪ, ಡಿ.ಸುಶೀಲ, ಕೆ.ಟಿ.ತಿಮ್ಮೇಗೌಡರು, ಶಿವಶಂಕರ, ದುಂಡಪ್ಪ, ರಾಮು, ಲಿಂಗಪ್ಪ(ಜೋಗಪ್ಪ), ಕಬ್ಬಾಳು ಪಾಪಣ್ಣ, ಕೆ.ಇ.ಬಿ.ವೀರಭದ್ರಯ್ಯ, ಹಾಸ್ಯದ ಲಿಂಗಾಚಾರ್, ನಿಜಲಿಂಗಪ್ಪ, ಚಿಕ್ಕ ಆಲಹಳ್ಳಿ ನಾಗಯ್ಯ ಹೀಗೆ ಹಲವಾರು ರಂಗಕಲಾವಿದರ ಜೊತೆಯಲ್ಲಿ ಅಭಿನಯಿಸಿರುವುದನ್ನು ಮನತುಂಬಿ ಸ್ಮರಿಸಿಕೊಳ್ಳುತ್ತಾರೆ.

ಹಾಗೆಯೇ ನಾಟಕ ಕಲಿಸಿದ ಗುರುಗಳಾದ ಬಸಪ್ಪನವರೂ ಪುಟ್ಟಾಚಾರ್‌ರವರು, ಪುಟ್ಟಸ್ವಾಮಿ ಆಚಾರ್, ಕಾಳಪ್ಪ, ಎನ್.ನರಸಿಂಹಯ್ಯ, ಪುಟ್ಟವೀರಪ್ಪ, ಲಿಂಗಪ್ಪ, ಮುಂತಾದವುಗಳನ್ನು ಸ್ಮರಿಸಿಕೊಳ್ಳುತ್ತಾರೆ. ಪಟೇಲ್

ಸಂಬೇಗೌಡರು ಇವರ ನಾಟಕ ನೋಡಿ, ಅಭಿನಯಕ್ಕೆ ಮೆಚ್ಚಿ ಬೆಳ್ಳಿಪದಕವನ್ನು ನೀಡಿದ್ದಾರೆ. ಮುಸ್ಲಿಂ ಬಾಂಧವರಾದ ಅಚ್ಚಲು ಚೋಟುಸಾಬ್ ಇವರ ಪಾತ್ರವನ್ನು ಮೆಚ್ಚಿ ಪ್ರೋತ್ಸಾಹಿಸಿದ್ದಾರೆ.

## ಶ್ರೀ ಮಾದೇಗೌಡ, ಡ್ರಾಮಾ ಮಾಸ್ಟರ್

**ತಿಪ್ಪೂರು, ಏರೆಂದ್ಯಾಪನಹಳ್ಳಿ ಅಂಚೆ, ಕೋಡಿಹಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ**

ಶ್ರೀಯುತರಾದ ಮಾದೇಗೌಡರು ತಮ್ಮ ಹತ್ತೊಂಬತ್ತನೇ ವಯಸ್ಸಿನಲ್ಲಿಯೇ ಕೂನೂರು ಪುಟ್ಟೇಗೌಡರು, ಚನ್ನಂಕಚಾರ್ ಬನ್ನಿಮುಕ್ಕೋಡ್ಲು ಇವರ ಗುರುಗಳು, ಇವರು ಸ್ವತಃ ತಾವೇ ಕೈಕೆ, ಶಕುನಿ, ದ್ರೌಪದಿ ಪಾತ್ರಗಳನ್ನು ಮಾಡಿ, ಮುಂದೆ ತಾವೇ ಒಬ್ಬ ರಂಗಕಲಾಶಿಕ್ಷಕನಾಗಿ ರೂಪುಗೊಂಡರು. ಅನಂತರ ಇವರು ಕೊರಟಗೆರೆದೊಡ್ಡಿ, ಕಲ್ಲಿಗೌಡನದೊಡ್ಡಿ, ಕೊಕ್ಕರೆ ಹೊಸಹಳ್ಳಿ, ಚಲ್ಲಿಪುರದೊಡ್ಡಿ, ಮಾರಸಂದ್ರ, ಕಾಡು ಜಕ್ಕಸಂದ್ರ, ತಿಪ್ಪೂರು, ಬೊಮ್ಮಸಂದ್ರ, ಬಿಜ್ಜಹಳ್ಳಿ, ಕೂತಗಳೆ, ಹೊನಗನಹಳ್ಳಿ, ರಾಗಳ್ಳಿ, ಈ ಗ್ರಾಮಗಳಲ್ಲಿ ನಾಟಕ ಕಲಿಸಿದ್ದಾರೆ. ಕುರುಕ್ಷೇತ್ರ ಪಾಂಡುವಿಜಯ, ರಾಮಾಯಣ ಈ ನಾಟಕಗಳನ್ನು 15 ಬಾರಿ ಪ್ರದರ್ಶಿಸಿದ್ದಾರೆ.

## ಶ್ರೀ ಗೋಪಾಲಯ್ಯ, ರಂಗಕಲಾ ಶಿಕ್ಷಕರು

**ಬೊಮ್ಮನಹಳ್ಳಿ, ಅಚ್ಚಲು ಅಂಚೆ, ಸಾತನೂರು ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ**

ಶ್ರೀಯುತರಾದ ಗೋಪಾಲಯ್ಯನವರು ಬೊಮ್ಮನಹಳ್ಳಿಯಲ್ಲಿ 23.05.1953 ರಲ್ಲಿ ಜನಿಸಿದರು. 1965 ರಲ್ಲಿ ಬೊಮ್ಮನಹಳ್ಳಿಗೆ ಬಂದು ಅರ್ಚಕ ವೃತ್ತಿಯನ್ನು ಮಾಡುತ್ತಿದ್ದರು. 1968 ರಲ್ಲಿ ಅಚ್ಚಲು ದಿ// ಸಿ.ವೀರಪ್ಪನವರು ಶಿವಭಕ್ತ ರಾವಣ ಎಂಬ ನಾಟಕವನ್ನು ಕಲಿಸಿದರು. ಆ ನಾಟಕದಲ್ಲಿ ಸೀತೆ ಪಾತ್ರದಲ್ಲಿ ಅಭಿನಯಿಸಿ ಆಸಕ್ತಿ ಹೊಂದಿದರು. ಮುಂದೆ ಇವರಿಗೆ ಸಿ.ವೀರಪ್ಪನವರೇ ಗುರುಗಳಾದರು. ಮುಂದೆ ಇವರೇ ಸ್ವತಃ ನಾಟಕ ಕಲಿಸಲು ಮುಂದಾದರು.

ಇವರು ಕುರುಕ್ಷೇತ್ರ ಸಂಪೂರ್ಣ ರಾಮಾಯಣ, ಭೀಷ್ಮ ಪ್ರತಿಜ್ಞೆ, ತ್ರಿಜನ್ಮ, ಮೋಕ್ಷ, ತ್ರಿಪುರ ಸಂಹಾರ, ನಾರದ ಲೀಲೆ, ಮಹಾಭಾರತ, ಕಕಾಸುರನ ವಧೆ, ಶಿವಭಕ್ತ ರಾವಣ, ಮಲೆಮಹಾದೇಶ್ವರ, ಕಾಲಭೈರವೇಶ್ವರ, ರಾಜವಿಕ್ರಮ, ರಾಜ

ಸತ್ಯವ್ರತ ಮುಂತಾದ ನಾಟಕಗಳನ್ನು ಬೊಮ್ಮನಹಳ್ಳಿ, ಅಚ್ಚಲು, ನೆಹರುದೊಡ್ಡಿ, ಜಕ್ಕೇಗೌಡನದೊಡ್ಡಿ, ಯಡಮಾರನಹಳ್ಳಿ, ಮಲೆಮಹಾದೇಶ್ವರಬೆಟ್ಟ, ಹೊಕುಂದ, ಅತ್ತಿಹಳ್ಳಿ, ಗೊಲ್ಲರದೊಡ್ಡಿ, ಸಾಸಲಾಪುರ, ಆದಿಚುಂಚನಗಿರಿ, ಈ ಕ್ಷೇತ್ರಗಳಲ್ಲಿ ನಾಟಕ ಆಡಿಸಿದರು.

ಇವರು 02.03.1997 ರಲ್ಲಿ ರಂಗಕಲಾ ಶಿಕ್ಷಕರು ಹಾಗೂ ಪಕ್ಕವಾದ್ಯಗಾರರ ಸಂಘದವತಿಯಿಂದ ಆಡಿದ ನಾಟಕದಲ್ಲಿ ದ್ರೋಣನ ಪಾತ್ರ ಮಾಡಿದರು. 06.11.1996 ರಲ್ಲಿ ಡಾ.ರಾಜ್‌ಕುಮಾರ್ ಸಂಘದಿಂದ, ಸಾತನೂರಿನಲ್ಲಿ ಪ್ರಥಮ ಪ್ರಶಸ್ತಿಯನ್ನು ಪಡೆದರು.

## ಶ್ರೀ ಜಿ.ಎ. ನಾಗರಾಜಾಚಾರಿ, ರಂಗಕಲಾ ಶಿಕ್ಷಕರು

### ಗುಳಗನಹಳ್ಳಿ, ಏರಂದ್ಯಾಪನಹಳ್ಳಿ ಅಂಚೆ, ಕೋಡಿಹಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ

ಮಾನ್ಯಶ್ರೀ ಜಿ.ಎ. ನಾಗರಾಜಾಚಾರಿಯವರು ಗುಳಗನಹಳ್ಳಿಯಲ್ಲಿ ಜನಿಸಿದರು. ಇವರ ಹಾರ್ಮೋನಿಯಂ ಗುರುಗಳು ಸ್ವತಃ ಅವರ ತಂದೆಯವರೇ. ಶಾಲೆಯಿಂದ ಬಂದ ಕೂಡಲೇ ನಮ್ಮ ತಂದೆಯವರೇ ಹಾರ್ಮೋನಿಯಂ ಕೊಟ್ಟು ಸರಿಗಮ ಪದನಿಸ, ಸರಳ ಪಾಠವನ್ನು ಅಭ್ಯಾಸ ಮಾಡಿಕೊಟ್ಟರು ಜೊತೆ ಜೊತೆಯಲ್ಲೇ, ಪೌರಾಣಿಕ ನಾಟಕದ ಪದಗಳು ಹಾಗೂ ವೃತ್ತ (ಕೇಂದ್ರ)ಗಳನ್ನು ಹೇಳಿಕೊಟ್ಟರು.

ರಾಮಾಯಣ ನಾಟಕವನ್ನು ಕಲಿಸಬೇಕೆಂಬ ಕುತೂಹಲ, ನನ್ನೊಳಗಿರುವ ಕಲೆ ನನ್ನನ್ನು ತುಡಿಯುತ್ತಿತ್ತು. ನನ್ನ ಊರಾದ ಗುಳಗನ ಹಳ್ಳಿಯಲ್ಲಿಯೇ ನಾಟಕವನ್ನು ಕಲಿಸಬೇಕೆಂದು ನಿರ್ಧರಿಸಿದೆ ಎನ್ನುವ ಇವರು ನಾಟಕಗಳನ್ನು ಕಲಿಸಿ ನಾಟಕದಿಂದಲೇ ಇವರ ಜೀವನ ನಡೆಯುತ್ತಿತ್ತು.

ಹದಿಮೂರನೇ ವಯಸ್ಸಿನಲ್ಲಿ ಪ್ರಾರಂಭಿಸಿದ ಈ ನಾಟಕ ಕಲೆಯು ಎಪ್ಪತ್ತೈದು ವರ್ಷವಾದರೂ ಮುಂದುವರಿಯುತ್ತಿದೆ. ಇವರು ಅಭಿನಯಿಸಿರುವ ನಾಟಕಗಳು ಸತ್ಯವಾನ್ ನಾಟಕದಲ್ಲಿ ಸತ್ಯಸಾವಿತ್ರಿ, ಮಲ್ಲನಪಾತ್ರ, ಅರ್ಜುನ, ಸುಗ್ರೀವ ಪಾತ್ರಗಳನ್ನು ಮಾಡಿದ್ದಾರೆ. ಇವರು ರಾಮಾಯಣ, ಮಹಾಭಾರತ, ದಾನಶೂರಕರ್ಣ, ರಾಜಸೂಯ ಯಾಗ, ಕುರುಕ್ಷೇತ್ರ, ಕೌಂಡ್ಲೀಕನವಧೆ, ರಾಜಾವಿಕ್ರಮ, ಹೀಗೆ ಸುಮಾರು ಸಾಮಾಜಿಕ ನಾಟಕ ಮುರಿದ ಮನೆ ಸೇರಿದಂತೆ

ಒಂದು ನೂರ ಹದಿನಾಲ್ಕು ನಾಟಕಗಳನ್ನು ಕಲಿಸಿದ್ದಾರೆ. ಕಾಡು ಕೆಂಬತ್ತಹಳ್ಳಿ, ಕನಕಪುರ, ಪಟ್ಟಣ, ಕೋಟಿಹಳ್ಳಿ, ರಾಮಾಪುರ ದೊಡ್ಡಿ, ಕಮಲಾಪುರ, ತಟ್ಟಗುಪ್ಪೆ, ಸುಂಢಘಟ್ಟ, ಬೆಟ್ಟೇಗೌಡನದೊಡ್ಡಿ, ಹಾಡ್ಲಿ, ಹುಸ್ಕೂರು, ಕೋಡಿಹಳ್ಳಿ ಆರಕ್ಷಕ ಠಾಣಾ ಸಿಬ್ಬಂದಿ, ಅರಕೆರೆ, ಕೋಟೆಕೊಪ್ಪ, ತಗಡೇಗೌಡನದೊಡ್ಡಿ, ತಿಪ್ಪೂರು ಮುಂತಾದ ಸ್ಥಳಗಳಲ್ಲಿ ನಾಟಕಗಳನ್ನು ಕಲಿಸಿ, ಹಾಡಿಸಿ, ಒಳ್ಳೆಯ ಹೆಸರನ್ನು ಪಡೆದಿದ್ದಾರೆ.

**ಶ್ರೀ ಸಿದ್ದಾಚಾರ್, ತಬಲ ಶಿಕ್ಷಕರು**
**ಬನ್ನಿ ಮುಕ್ಕೋಡ್ಲು, ಕೋಡಿಹಳ್ಳಿ ಹೋಬಳಿ,**
**ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ**

ಶ್ರೀಯುತ ಸಿದ್ದಾಚಾರ್‌ರವರು ಬನ್ನಿಮುಕ್ಕೋಡ್ಲು ಗ್ರಾಮದಲ್ಲಿ ವಾಸವಾಗಿದ್ದ ದಿವಂಗತ ತಬಲ ಮಾಸ್ಟರ್ ಪುಟ್ಟಾಚಾರ್ ಹಾಗೂ ನೀಲಮ್ಮ ದಂಪತಿಗಳ ಮಗನಾಗಿ ಜನಿಸಿದರು. ತಂದೆಯವರಿಂದಲೇ ತಬಲ ನುಡಿಸುವುದನ್ನು ಅಭ್ಯಾಸ ಮಾಡಿದರು. ಈ ಕಲೆಯನ್ನು ಸುಮಾರು 40 ವರ್ಷಗಳಿಂದ ನಡೆಸಿಕೊಂಡು ಬಂದಿದ್ದಾರೆ. ಇದೆ ಅವರ ವೃತ್ತಿಯಾಗಿದೆ. ಜೊತೆಗೆ ಕುರುಕ್ಷೇತ್ರ ನಾಟಕದಲ್ಲಿ ವಿದುರನ ಪಾತ್ರವನ್ನು ಕೂಡ ಮಾಡಿದ್ದಾರೆ. ಶ್ರೀಯುತರು ಕುರುಕ್ಷೇತ್ರ, ತ್ರಿಪುರ ಸಂಹಾರ, ದಕ್ಷಯಾಗ, ರಾಮಾಯಣ, ದಾನಶೂರಕರ್ಣ, ರಾಜವಿಕ್ರಮ, ಸತ್ಯವ್ರತ, ನಳದಮಯಂತಿ, ಈ ನಾಟಕಗಳಿಗೆ ತಬಲ ನುಡಿಸಿದ್ದಾರೆ.

ಇವರು ಬನ್ನುಮಿಕ್ಕೋಡ್ಲು, ತಮಿಳುನಾಡಿನ ಉರಿಗ್ಯಂ, ಕೋಟೆ ಊರು, ಬಿಳಿಕಲ್ಲು, ಮತ್ತಿಕೆರೆ, ಅರತಕ್ಕಲು, ಕೋಡಿಹಳ್ಳಿ, ಹುಣಸನಹಳ್ಳಿ, ಚಿಕ್ಕಮುಕ್ಕೋಡ್ಲು, ತಟ್ಟೇಕೆರೆ, ಹೊನ್ನಿಗನಹಳ್ಳಿ, ಮೂಗ್ಗೂರು, ನೇರಳೆಹಟ್ಟಿ, ದಿಂಬದಹಳ್ಳಿ, ಇರಲ್‌ಪೋಡು, ಆಲನತ್ತ, ಚೆನ್ನಸಂದ್ರ, ಸಂತೆ ಕೋಡಿಹಳ್ಳಿ, ಹೂಕುಂದ, ಮುಳ್ಳಳ್ಳಿ, ಈ ಗ್ರಾಮಗಳಲ್ಲದೆ ಇನ್ನು ಮುಂತಾದ ಹಲವಾರು ಗ್ರಾಮಗಳಲ್ಲಿ ನಡೆದ ನಾಟಕಗಳಿಗೆ ತಮ್ಮ ಕರಕೌಶಲ್ಯದಿಂದ ಇಂಪಾದ ತಬಲ ನುಡಿಸಿದ್ದಾರೆ. ಇಂತಹ ತಬಲ ವಾದಕರು ಇನ್ನು ನಮ್ಮ ನಾಡಿನಲ್ಲಿ ಹಲವಾರು ಮಂದಿ ಇದ್ದಾರೆ. ಈ ಕಲೆ ಇನ್ನೂ ಬೆಳೆಯಲಿ ಎಂದು ಆಶಿಸೋಣ.

**ಶ್ರೀ ಎಸ್.ಎಸ್.ಬಸವರಾಜಾಚಾರ್**
**ಶಿವನೇಗೌಡನದೊಡ್ಡಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ**

ಶ್ರೀಯುತ ಎಸ್.ಎಸ್.ಬಸವರಾಜಾಚಾರ್‌ರವರು 1966 ರಲ್ಲಿ

ಶಿವನೇಗೌಡನದೊಡ್ಡಿಯಲ್ಲಿ ಶ್ರೀ ಸಿದ್ದಾಚಾರ್ ಶ್ರೀಮತಿ ನಿಂಗಮ್ಮನವರ ಮಗನಾಗಿ ಜನಿಸಿದರು. ಅರೆಕೊಪ್ಪದಲ್ಲಿ ಪ್ರಾಥಮಿಕ ಶಿಕ್ಷಣ ಇಲ್ಲಿಗೆ ಇವರ ವಿದ್ಯಾಭ್ಯಾಸ ಮೊಟಕು, ನಂತರ ವಿದ್ಯಾಭ್ಯಾಸ ಮುಂದುವರಿಸಲಾಗಲಿಲ್ಲ. ಅನಂತರ ತಮ್ಮನ್ನು ಪೂರ್ಣವಾಗಿ ರಂಗಕಲೆಗೆ ತೊಡಗಿಸಿಕೊಂಡರು. ಹುಣಸನ ಕೋಡಿಹಳ್ಳಿಯ ಶ್ರೀ ಹೆಚ್.ಪುಟ್ಟವೀರಪ್ಪ ಹಾಗೂ ಬೆಂಗಳೂರಿನ ಶ್ರೀ ಬಿ.ಲಿಂಗರಾಜುರವರ ಮಾರ್ಗದರ್ಶನದಿಂದ ಅವರಲ್ಲಿದ್ದ ಸುಪ್ತ ಪ್ರತಿಭೆ ಹೊರ ಹೊಮ್ಮಲು ಕಾರಣವಾಯಿತು ಎಂದು ತಮ್ಮ ಗುರುಗಳನ್ನು ಹೃದಯತುಂಬಿ ಸ್ಮರಿಸಿಕೊಳ್ಳುತ್ತಾರೆ.

ಶ್ರೀಯುತರು ಸಂಪೂರ್ಣ ರಾಮಾಯಣದಲ್ಲಿ ಲಕ್ಷ್ಮಣ ಪಾತ್ರವಹಿಸಿ ಪ್ರಶಸ್ತಿಯನ್ನು ಪಡೆದಿರುತ್ತಾರೆ. ಕುರುಕ್ಷೇತ್ರ, ವಿರಾಟಪರ್ವ, ಸಾಮ್ರಾಟ ದುರ್ಯೋಧನ, ಶಬರ ಶಂಕರ ವಿಲಾಸ, ಧರ್ಮರಾಯನ ಅಶ್ವಮೇಧಯಾಗ, ದಾನಶೂರಕರ್ಣ, ಶ್ರೀ ಸಿದ್ದಪ್ಪಾಜಿಯ ಪವಾಡ, ಶನಿಪ್ರಭಾವ, ಜಗಜ್ಯೋತಿ ಬಸವೇಶ್ವರ, ಕೌಂಡ್ಲಿಕನ ವಧೆ, ದಕ್ಷಯಜ್ಞ, ರಜ ಸತ್ಯವ್ರತ, ಭೀಮಾರ್ಜುನರ ಯುದ್ಧ, ನಾಟಕಗಳನ್ನು ಕಲಿಸಿದ್ದಾರೆ. ಇವರು 65 ನಾಟಕಗಳನ್ನು ನಿರ್ದೇಶಿಸಿದ್ದು, ಕನಕಪುರ, ರಾಮನಗರ, ಮದ್ದೂರು, ಮಳವಳ್ಳಿ, ಮಂಡ್ಯ ಹಾಗೂ ಬೆಂಗಳೂರು ಮುಂತಾದ ಕಡೆ ನಾಟಕಗಳನ್ನು ಆಡಿಸಿದ್ದಾರೆ. ಅನೇಕ ಸಂಘ–ಸಂಸ್ಥೆಗಳು ಇವರನ್ನು ಪ್ರಶಸ್ತಿ ನೀಡಿ ಗೌರವಿಸಿದೆ. ಕನಕಪುರದ ಸಾಂಸ್ಕೃತಿಕ, ಸಾಹಿತ್ಯಿಕ ಸಂಸ್ಥೆಯಾದ ಕರ್ನಾಟಕ ಸಂಘ 1995 ರಲ್ಲಿ ಸನ್ಮಾನಿಸಿದೆ. ಕನಕಪುರದ ರಂಗಬಾಂಧವ್ಯ ಕಲಾ ಸಂಘದವರು ಇವರ ರಂಗಸೇವೆಯನ್ನು ಮೆಚ್ಚಿ, ಪ್ರಶಸ್ತಿ ನೀಡಿ ಸನ್ಮಾನಿಸಿದ್ದಾರೆ.

### ಶ್ರೀ ನಾರಾಯಣರಾವ್ ಪಿಸ್ಸೆ (ಹವ್ಯಾಸಿ),
### ಅರುಣ ಕ್ಲಿನಿಕ್ ಪಕ್ಕ, ಮಹಾತ್ಮ ಗಾಂಧೀಜಿ ಮಾರ್ಗ, ಕನಕಪುರ,
### ರಾಮನಗರ ಜಿಲ್ಲೆ

ಶ್ರೀಯುತ ನಾರಾಯಣರಾವ್ ಪಿಸ್ಸೆಯವರು ದಿನಾಂಕ: 01.02.1950 ರಲ್ಲಿ ಪಿ.ವಿ.ಕೃಷ್ಣೋಜಿರಾವ್, ತಾಯಿ ರುಕ್ಮಿಣಿ ಬಾಯಿಯವರ ಮಗನಾಗಿ ಜನಿಸಿದರು. ವೃತ್ತಿಯಲ್ಲಿ ಟೈಲರ್ ಆಗಿರುವ ಇವರು ಹವ್ಯಾಸಿ ರಂಗಕಲಾವಿದರಾಗಿ (ಹಾಸ್ಯ ಕಲಾವಿದರು) 1965 ಜನವರಿ 26 ರಂದು ಪ್ರವೇಶಿಸಿದರು.

ಇವರು 'ವರದಕ್ಷಿಣೆ ವ್ಯಾಮೋಹ' ನಾಟಕದಲ್ಲಿ 'ನೆಲ್ಲಿಕಾಯಿ ನರಸಿಂಹನ ಪಾತ್ರ'ದಲ್ಲಿ ನಟಿಸಿದರು. ನಂತರ 'ಲಲಿತ ಕಲಾರಂಗ' ಸ್ಥಾಪನೆಗೊಂಡು, ಬೇಲೂರು

ಕೃಷ್ಣಮೂರ್ತಿಯವರ 'ಆಹುತಿ' ನಾಟಕ. ಈ ನಾಟಕ ಅಭಿನಯಕ್ಕೆ ದ್ವಿತೀಯ ಹಾಗೂ ತೃತೀಯ ಬಹುಮಾನ ಪಡೆದರು. ಈ ನಾಟಕಕ್ಕೆ ನಿರ್ದೇಶಕರಾಗಿ, ನಟರಾಗಿ, ನಾಯಕರಾಗಿ 21.11.1981 ರಲ್ಲಿ ರಾಜ್ಯೋತ್ಸವ ಪ್ರಶಸ್ತಿ ಪಡೆದಿರುತ್ತಾರೆ. "ಅಭಿನಯ ರಂಗ' ದಡಿಯಲ್ಲಿ ಹತ್ತಾರು ವರ್ಷ ಸೇವೆ ಸಲ್ಲಿಸಿ, ಕಂಪನಿ ನಾಟಕಗಳಿಂದ ಬಸ್ ಕಂಡಕ್ಟರ್, ಬಂಜೆ ತೊಟ್ಟಿಲು, ಮುದುಕನ ಮದುವೆ, ರತ್ನ ಮಾಂಗಲ್ಯ, ಸದಾರಮೆ ಮುಂತಾದ ಸಾಮಾಜಿಕ, ಪೌರಾಣಿಕ, ಐತಿಹಾಸಿಕ ನಾಟಕಗಳಲ್ಲಿ ಹಾಸ್ಯ ಕಲಾವಿದರಾಗಿ ಪಾತ್ರ ನಿರ್ವಹಿಸಿದರು. ವೀರ ಎಚ್ಚಮನಾಯಕನ ನಾಟಕದಲ್ಲಿ "ಗಿಡ್ಡು ಬುಡನ್‌ಶಾಸ್ತ್ರಿ" ಪಾತ್ರ ಇವರಿಗೆ ಯಶಸ್ಸು ತಂದುಕೊಟ್ಟಿತು. "ನೀನಾಸಂ" (ನೀಲಕಂಠೇಶ್ವರ ನಾಟಕ ಸಂಘ) ಸಂಸ್ಥೆಯ ಹೆಸರಾಂತ ನಿರ್ದೇಶಕರಾದ "ಇಕ್ಬಾಲ್ ಅಹಮದ್" ನೇತೃತ್ವದಲ್ಲಿ ಕನಕಪುರದಲ್ಲಿ ನಡೆದ "ರಂಗ ತರಬೇತಿ" ಶಿಬಿರದಲ್ಲಿ ಎಂಟು ವಾರಗಳ ಕಾಲ ತರಬೇತಿ ಪಡೆದರು.

"ಸಾಹೇಬರು ಬರುತ್ತಾರೆ" ನಾಟಕದಲ್ಲಿ ಗಾಯಕರಾಗಿ ಸೇವೆ ಪ್ರಾರಂಭಿಸಿದರು. ನಂತರ 1999 ಮಾರ್ಚ್ 18, 19 ರಂದು "ರಾಜಧಾನಿ ದೆಹಲಿ"ಯಲ್ಲಿ ನಡೆದ ಅಖಿಲ ಭಾರತ ಕನ್ನಡ ನಾಟಕ ಸ್ಪರ್ಧೆಯಲ್ಲಿ ಭಾಗವಹಿಸಿ "ಉತ್ತಮ ನಟ" ಪ್ರಶಸ್ತಿಯನ್ನು ತನ್ನದಾಗಿಸಿಕೊಂಡರು. ನಂತರ ಇವರು ರಂಗಕಲಾವಿದರಾಗಿ, ಸುಗಮ ಸಂಗೀತ, ಭಕ್ತಿಗೀತೆ ಹಾಗೂ ಜಾನಪದ ಗೀತೆಗಳ ಗಾಯಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

## ಶ್ರೀ ಹೆಚ್.ಸಿ.ರಾಮಾಚಾರ್, ರಂಗಕಲಾ ಶಿಕ್ಷಕರು
## ಹೊಸದುರ್ಗ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ

ಶ್ರೀಯುತರ ತಂದೆ ಚೆನ್ನಾಚಾರ್, ತಾಯಿ ಚೆನ್ನಮ್ಮ. ಈ ದಂಪತಿಗಳ ಮಗನಾಗಿ 08 ಏಪ್ರಲ್ 1940 ರಲ್ಲಿ ಜನ್ಮ ತಾಳಿದರು. ಇವರು ಮುನಿವೆಂಕಟಪ್ಪ ಅವರಿಂದ ಸಂಗೀತ ಅಭ್ಯಾಸವನ್ನು ವೆಂಕಟರಮಣಾಚಾರ್, ಚೆನ್ನಾಚಾರ್‌ರವರಿಂದ ನಾಟಕ ಕಲಿಸುವ ಅಭ್ಯಾಸವನ್ನು ಪಡೆದರು. ಅವರೇ ಪ್ರಥಮವಾಗಿ ಕೃಷ್ಣನ ಪಾತ್ರ ಅಭಿನಯಿಸಿದರು. ನಾಟಕ ಕಲೆಯನ್ನು, ರಂಗಭೂಮಿಯನ್ನು ಅವರ ವೃತ್ತಿಯನ್ನಾಗಿ ಆಯ್ಕೆ ಮಾಡಿಕೊಂಡಿದ್ದು ಅವರಲ್ಲಿನ ಕಲಾವಂತಿಕೆಗೆ ಸಾಕ್ಷಿಯಾಗಿದೆ.

1965 ರಲ್ಲಿ ಸಂಪೂರ್ಣವಾಗಿ ತಮ್ಮನ್ನು ಈ ವೃತ್ತಿಗೆ ತೊಡಗಿಸಿಕೊಂಡು

ರಾಮಾಂಜನೇಯ ಯುದ್ಧ, ತಾರಕವಧೆ, ಮಹಾಭಾರತ, ಕುರುಕ್ಷೇತ್ರ, ಶಿವಜಲಂಧರ, ಪ್ರಭುಲಿಂಗಲೀಲೆ, ರಕ್ತರಾತ್ರಿ, ಮಹಿಷಾಸುರ ಮರ್ಧಿನಿ, ಶನಿಪ್ರಭಾವ, ದಶಾವತಾರ, ಸುಭದ್ರ ಕಲ್ಯಾಣ, ರಾಜಾಸತ್ಯವ್ರತ, ಭಕ್ತ ಮಹಾಂಧತ, ಕೃಷ್ಣಾರ್ಜುನರ ಯುದ್ಧ, ಶಿವಭಕ್ತ, ರಾವಣ, ಗಜಗೌರಿ ವ್ರತ, ಮುಂತಾದ ನಾಟಕಗಳನ್ನು ಕಲಿಸಿದ್ದಾರೆ.

ಹೊಸದುರ್ಗ, ಗೌಡಯ್ಯನದೊಡ್ಡಿ, ಮಂಡ್ಯಜಿಲ್ಲೆ, ಮೈಸೂರು ಪುರಭವನ, ರಾವಂದೂರು ಪಿರಿಯಾಪಟ್ಟಣ, ಕೆ.ಆರ್.ನಗರ, ಕನಕಪುರ ಪಟ್ಟಣ, ರವೀಂದ್ರ ಕಲಾಕ್ಷೇತ್ರ, ಬೆಂಗಳೂರು, ಪಿ.ರಾಂಪುರ, ಬೊಮ್ಮಸಂದ್ರ, ಬಿಳಿದಾಳೆ, ತಟ್ಟುಗುಪ್ಪೆ, ಬಾಳೆಪುರದೊಡ್ಡಿ, ಮರಳದೊಡ್ಡಿ, ಟಿ.ಗೊಲ್ಲಹಳ್ಳಿ, ಕೆಬ್ಬೆದೊಡ್ಡಿ, ದೊಡ್ಡೇರಂಗೆರೆ, ಮಾರಸಂದ್ರ, ಮುಂತಾದ ಗ್ರಾಮಗಳಲ್ಲಿ ನಾಟಕಗಳನ್ನು ಕಲಿಸಿ ರಂಗಕಲೆಯನ್ನು ಉಳಿಸಿ, ಬೆಳೆಸುವ ಕೈಂಕರ್ಯದಲ್ಲಿ ತೊಡಗಿಸುವ ಶ್ರೀಯುತ ಹೆಚ್.ಸಿ.ರಾಮಾಚಾರ್ ಅವರ ರಂಗಸೇವೆ ಸ್ಮರಣೀಯ.

## ಶ್ರೀ ಬಿ.ಕೆ.ನಾಗರಾಜು, ರಂಗಕಲಾ ಶಿಕ್ಷಕರು

**ಜೆ.ಸಿ.ಬಡಾವಣೆ, ಗಡ್ಡದ ಲಿಂಗಣ್ಣ ಬೀದಿ, ಪ್ರಜ್ವಲ್ ಸಾಫ್ಟ್ ಡ್ರಿಂಕ್ಸ್, ಕನಕಪುರ, ರಾಮನಗರ ಜಿಲ್ಲೆ**

ಶ್ರೀಯುತರು ತಮ್ಮ ಬಾಲ್ಯದ ಹತ್ತನೇ ವಯಸ್ಸಿನಲ್ಲಿ ನಾಟಕದಲ್ಲಿ ಅಭಿನಯಿಸಲು ಆರಂಭಿಸಿದರು. ಅವರು ಪೂರ್ಣವಾಗಿ ತೊಡಗಿಸಕೊಂಡದ್ದು ರಮಾಯಣ ನಾಟಕದಲ್ಲಿ ತಮ್ಮ ಹದಿನಾರನೇ ವಯಸ್ಸಿನಲ್ಲಿ ಅಭಿನಯಿಸಿದ್ದು ಮೈಸೂರು ಜಿಲ್ಲೆ ಚಾಮರಾಜನಗರ ತಾಲ್ಲೂಕು ಜೋಡಿಲಿಂಗನಪುರದಲ್ಲಿ. ಇವರ ತಂದೆ ದಾಸೇಗೌಡರೇ ಗುರು. ಅವರು ಕೂಡ ಕಲಾವಿದರು. ಅವರ ಮರ್ಗದರ್ಶನದಲ್ಲಿ ನಾಟಕ ಕಲಿಸುವ ಕಲೆಯನ್ನು ಕರಗತಮಾಡಿಕೊಂಡರು.

ಶ್ರೀಯುತರು ರಾಮಾಯಣ, ಸದಾರಮೆ, ಭಕ್ತ ಪ್ರಹ್ಲಾದ, ರಾಮಾಂಜನೇಯ ಯುದ್ಧ, ಕವಿರತ್ನ ಕಾಳಿದಾಸ, ಕುರುಕ್ಷೇತ್ರ, ಸತ್ಯ ಹರಿಶ್ಚಂದ್ರ, ದಾನಶೂರಕರ್ಣ, ಮುಂತಾದ ಪೌರಾಣಿಕ ನಾಟಕಗಳನ್ನು, 1964 ರಲ್ಲಿ ಕೊಡಗು ಜಿಲ್ಲೆ ಮಾರ್ಗೋಲಿ ಎಸ್ಟೇಟ್, 1966 ರಲ್ಲಿ ಕೊಡಗು ಜಿಲ್ಲೆ ಕಾನಂಗಾಡ ಎಸ್ಟೇಟ್, 1967 ರಲ್ಲಿ ಕೊಡಗು ಜಿಲ್ಲೆಯ ಮರೋಪ ಎಸ್ಟೇಟ್, 1968 ರಲ್ಲಿ ಕೊಡಗು ಜಿಲ್ಲೆಯ ಅಂದಾನಿ ಫಾರಂನಲ್ಲಿ ಕಲಿಸಿ, ಕನಕಪುರ ತಾಲ್ಲೂಕಿಗೆ ಬಂದು ಮತ್ತಿಕುಂಟೆ, ಚನ್ನಪಟ್ಟಣ ತಾಲ್ಲೂಕು ವಳಗೆರೆದೊಡ್ಡಿ, ಮೇಡಮಾರನಹಳ್ಳಿ, ರಾಮನಗರ

ತಾಲ್ಲೂಕಿನ ಪರಗೋಡನಪಾಳ್ಯ, ನೆಲಮಂಗಲ ತಾಲ್ಲೂಕಿನ ಲಕ್ಷ್ಮೀಪುರ, ಹೊಸಕೋಟೆ ತಾಲ್ಲೂಕಿನ ಮುತ್ತುಗನಹಳ್ಳಿ, ತಾಮಸಂದ್ರ, ಆನೇಕಲ್ಲು ತಾಲ್ಲೂಕು ಬಿದರಹಳ್ಳಿ, 1984–85 ರಲ್ಲಿ ಕೊನೆ ನಾಟಕವಾದ ಸಂಪೂರ್ಣ ರಾಮಾಯಣ ವನ್ನು ಹೊಸಕೋಟೆ ತಾಲ್ಲೂಕಿನ ಅನುಗೊಂಡನಹಳ್ಳಿಯಲ್ಲಿ ಕಲಿಸಿ ಆಡಿಸಲಾಯಿತು.

## ಶ್ರೀ ಪಿ.ಅಂಕಾಚಾರ್,
## ಗೊಲ್ಲರದೊಡ್ಡಿ, ಹುಣಸನಹಳ್ಳಿ ಅಂಚೆ, ಕೋಡಿಹಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ

ಶ್ರೀಯುತ ಪಿ.ಅಂಕಾಚಾರ್ ಹುಟ್ಟಿದ್ದು 1934 ರಲ್ಲಿ. ತಂದೆ ಪುಟ್ಟಾಚಾರ್, ತಾಯಿ ಶ್ರೀಮತಿ ರುದ್ರಮ್ಮ ನವರು. ಇವರ ಸಂಗಡ ಹುಟ್ಟಿದವರು ಎರಡು ಹೆಣ್ಣು ಮಕ್ಕಳು. ಇವರನ್ನು ಸೇರಿ ಮೂರು ಗಂಡು ಮಕ್ಕಳು. ತಂದೆಯವರು ನೂರು ವರ್ಷ ಬದುಕಿದ್ದರು. ತಾಯಿಯವರು ನೂರಹತ್ತು ವರ್ಷ ಬದುಕಿದ್ದರು.

ಶ್ರೀಯುತರಿಗೆ ಮೊದಲ ಗುರು ಅವರ ತಂದೆಯವರೆ. ಅವರೆ ಅಕ್ಷರ ಕಲಿಸಿ, ನಂತರ ಗಂಗನಹಳ್ಳಿ ಪಾಠಶಾಲೆಗೆ ಸೇರಿಸಿದರು. 1949–50 ರಲ್ಲಿ ಹಾರ್ಮೋನಿಯಂ ಕಲಿಯಲು ಆರಂಭಿಸಿದರು. ಅದೇ ಊರಿನಲ್ಲಿದ್ದ ಶ್ರೀ ರಾಮದೇವರ ಗುಡಿಯಲ್ಲಿದ್ದ ಹಾರ್ಮೋನಿಯಂನಿಂದ ಪ್ರತಿ ಶನಿವಾರ ಊರ ಭಜನೆ ಮಾಡುವಾಗ ನುಡಿಸುತ್ತಿದ್ದರು. ಅವರ ತಂದೆಯವರು ಮದ್ದಲೆ ಬಾರಿಸುತ್ತಿದ್ದರು. ಆಗ ಇವರು ಹಾರ್ಮೋನಿಯಂಗೆ ಶೃತಿ ಇಟ್ಟು ಹಾಡು ಹಾಡುತ್ತಿದ್ದರು. ಮೊದ ಮೊದಲು ಸುಮಾರಾಗಿ ನುಡಿಸುತ್ತಿದ್ದರು. ನಂತರ 15 ರಿಂದ 16 ವರ್ಷಗಳವರೆಗೆ ಹಾರ್ಮೋನಿಯಂ ಅಭ್ಯಾಸ ಮಾಡಿದರು. ಒಮ್ಮೆ ರಾಮಾಯಣ ನಾಟಕವಾಡಲು ಕೋಡಿಹಳ್ಳಿಯಿಂದ ಪುಟ್ಟಸ್ವಾಮಾಚಾರ್ ಎಂಬ ಶಿಕ್ಷಕರನ್ನು ಕರೆತಂದರು ಹುಡುಗರಿಗೂ ನಾಟಕ ಮಾಸ್ತರಿಗೂ ಮನಸ್ತಾಪ ಬಂದು ನಾಟಕವು ಮಧ್ಯದಲ್ಲೇ ನಿಂತುಹೋಯಿತು. ಆಗ ಅವರೆಲ್ಲಾ ಬಂದು ಇವರನ್ನೇ ನಾಟಕ ಕಲಿಸುವಂತೆ ಕೇಳಿಕೊಂಡರು. ಅದರಂತೆ ಇವರ ನಾಟಕ ವೃತ್ತಿಯ ಯಾತ್ರೆ ಆರಂಭವಾಯಿತು.

ಶ್ರೀಯುತರು ರಾಮಾಯಣ, ಮಹಾಭಾರತ, ದಾನಶೂರಕರ್ಣ, ಸುಭದ್ರ ಕಲ್ಯಾಣ, ಮುಂತಾದ ನಾಟಕಗಳನ್ನು ವಡ್ಡರದೊಡ್ಡಿ, ಗೊಲ್ಲರದೊಡ್ಡಿ, ಮುಂತಾದ

ಕಡೆ ಹೋಗಿ ಕಲಿಸುತ್ತಿರುವಾಗಲೇ ಪಾರ್ಶ್ವವಾಯುವಿಗೆ ತುತ್ತಾದರು. ಆಗ ಇವರು ನಾಟಕ ಆಡಿಸುವುದನ್ನು ಬಿಟ್ಟು ಹರಿಕಥೆಗೆ ಹಾರ್ಮೋನಿಯಂ ನುಡಿಸಲು ಪ್ರಾರಂಭಿಸಿದರು.

ಶ್ರೀಯುತರು ಬೆಂಗಳೂರು, ಮೈಸೂರು, ಚೆನ್ನಪಟ್ಟಣ, ರಾಮನಗರ, ಕನಕಪುರ, ಥಳಿ, ಡೆಂಕಣಿಕೋಟೆ, ತಮಿಳುನಾಡಿನ ನಾನಾ ಭಾಗಗಳಿಗೆ ಹೋಗುತ್ತಿದ್ದುದ್ದಲ್ಲದೆ ಸುಮಾರು ನೂರು ಮೈಲಿ ದೂರದವರೆಗೆ ಹೋಗುತ್ತಿದ್ದರು. ಧನುರ್ಮಾಸದ ದಿನಗಳಲ್ಲಿ ಬೆಳಿಗ್ಗೆ ನಾಲ್ಕು ಗಂಟೆಗೆ ಹೋಗಿ ಭಜನೆ ಮಾಡುತ್ತಿದ್ದರು.

## ಶ್ರೀ ಟಿ. ಶ್ರೀನಿವಾಸ, ಕಲಾ ಶಿಕ್ಷಕರು

**ಕಸಬಾ ಹೋಬಳಿ, ಕಲ್ಲಹಳ್ಳಿ ಅಂಚೆ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ**

ಶ್ರೀಯುತರಾದ ಟಿ.ಶ್ರೀನಿವಾಸರವರು ಕಸಬಾ ಕಲ್ಲಹಳ್ಳಿಯಲ್ಲಿ ಡ್ರಾಮಾಮಾಸ್ಟರ್ ತಿಮ್ಮಯ್ಯ ಹಾಗೂ ಶ್ರೀಮತಿ ಭೈರಮ್ಮನವರ ಏಕೈಕ ಪುತ್ರರಾಗಿ 1985 ರಲ್ಲಿ ಜನಿಸಿದರು. ತಮ್ಮ ತಂದೆಯಂತೆಯೇ ತಾವು ಕೂಡ ರಂಗಭೂಮಿಯಲ್ಲಿ ದುಡಿಯಬೇಕು, ತಮ್ಮ ಸೇವೆಯನ್ನು ಕಲೆಗೆ ಅರ್ಪಿಸಬೇಕೆಂಬ ಆಸೆಯಿಂದ ತಾವೂ ಕೂಡ ಇದೇ ವೃತ್ತಿಯನ್ನು ಆಯ್ದುಕೊಂಡರು. ಇವರು ಅನೇಕ ನಾಟಕಗಳನ್ನು ಕಲಿಸಿದ್ದಾರೆ. ಕುರುಕ್ಷೇತ್ರ, ಸಂಪೂರ್ಣ ರಾಮಾಯಣ, ವಿರಾಟಪರ್ವ, ಪಾಂಡುವಿಜಯ, ರಾಜವಿಕ್ರಮ, ರಾಜಾ ಸತ್ಯವ್ರತ, ಭಕ್ತಪೂರೂರವ, ಭಕ್ತ ಮಾರ್ತಾಂಡ, ದೇವಿ ಮಾಹಾತ್ಮೆ, ಹೀಗೆ ಹಲವಾರು ನಾಟಕಗಳನ್ನು ಕಲಿಸಿ, ಆದಷ್ಟು ಒಳ್ಳೆಯ ಹೆಸರು ಗಳಿಸಿದ್ದಾರೆ. ಇವರ ಪ್ರತಿಭೆಯನ್ನು ಗುರುತಿಸಿ ಅನೇಕ ಸಂಘ–ಸಂಸ್ಥೆಗಳು ಸನ್ಮಾನಿಸಿವೆ.

## ಶ್ರೀ ಚಂದ್ರಶೇಖರಯ್ಯ (ರಂಗಬಾಂಧವ್ಯ),

**ಕೇರ್ ಆಫ್ ಎಣ್ಣೆ ಶಿವಣ್ಣ, 2ನೇ ಬೀದಿ, ವಿವೇಕಾನಂದ ನಗರ, ಕನಕಪುರ, ರಾಮನಗರ ಜಿಲ್ಲೆ**

ಶ್ರೀಯುತರಾದ ಚಂದ್ರಶೇಖರಯ್ಯನವರು ದಿನಾಂಕ:03.02.1943 ರಂದು ತಂದೆ ಸಿದ್ದಪ್ಪ, ತಾಯಿ ನೀಲಮ್ಮ ಇವರ ಮಗನಾಗಿ ದೊಡ್ಡಮರಳವಾಡಿಯಲ್ಲಿ ಜನಿಸಿದರು. ನಂತರ ಹೋಟೆಲ್ ಮಾಲೀಕರಾದರು. ಜೊತೆಗೆ ಅರಣ್ಯ ಇಲಾಖೆಗೆ ಅರಣ್ಯ ರಕ್ಷಕನಾಗಿ ಕರ್ತವ್ಯವನ್ನು ನಿರ್ವಹಿಸಿ ಈ ವೃತ್ತಿಯ ಜೊತೆಗೆ ನಾಟಕದಲ್ಲಿ ಅಭಿನಯಿಸುವ ಪ್ರವೃತ್ತಿಯನ್ನು ಬೆಳೆಸಿಕೊಂಡು ಅಭಿನಯಿಸುತ್ತಾ, ಅನೇಕ ಸಂಘ–

ಸಂಸ್ಥೆಗಳಲ್ಲಿ ಸಕ್ರೀಯ ಕಾರ್ಯಕರ್ತರಾಗಿ ಪ್ರಾಮಾಣಿಕವಾಗಿ ಕಾರ್ಯ ನಿರ್ವಹಿಸುತ್ತಿರುವ ಒಬ್ಬ ಸಮಾಜ ಸೇವಕರಾಗಿದ್ದಾರೆ.

ಇವರು ನಿರ್ವಹಿಸಿದ ಪಾತ್ರಗಳು ಅಸಂಖ್ಯಾತ ಸುಭದ್ರಾ ಕಲ್ಯಾಣದಲ್ಲಿ ಘಟೋದ್ಗಜನ ಪಾತ್ರ, ಕುರುಕ್ಷೇತ್ರದಲ್ಲಿ ಶಿಖಂಡಿಪಾತ್ರ ಸದಾರಮೆ ನಾಟಕದಲ್ಲಿ ಕಳ್ಳನ ಪಾತ್ರ, ಭೀಷ್ಮನ ಪಾತ್ರ, ಲಂಕದಹನದಲ್ಲಿ ಲಂಕಿಣಿಯ ಪಾತ್ರ, ದುಶ್ಯಾಸನ, ಅತಿರಥ, ಪೂತನಿ, ದೇವೇಂದ್ರನ ಪಾತ್ರಗಳು, ಮೂರುವರೆ ವಜ್ರದಲ್ಲಿ ದೊರ್ಯೋಧನ ಪಾತ್ರ, ದಶರಥ, ಕರಾಸುರ ಪಾತ್ರೆಗಳನ್ನು ಮಾಡಿದ್ದಾರೆ.

ಇವರು ತಮ್ಮ ಗುರುಗಳಾದ ಸುಂಕದಕಟ್ಟೆ ರಾಮಕೃಷ್ಣಪ್ಪ, ಕುಂಬಳಗೂಡು ನಂಜಾಚಾರ್ಯರು, ಇವರಿಂದ ಕಲಾವಿದನಾದೆ ಎಂದು ಸಮರಿಸಿಕೊಳ್ಳುತ್ತಾ, ಆನಂತರದ ದಿನದ ಗುರುಗಳಾದ ಶ್ರೀ ಜಗದೀಶ್ವರಚಾರ್ಯರನ್ನು ನೆನೆಯುತ್ತಾರೆ. ರಂಗಬಾಂಧವ್ಯ ಎಂಬ ಸಂಸ್ಥೆ ಹುಟ್ಟುಹಾಕಿ ಸುಮಾರು ನಾಲ್ಕು ವರ್ಷಗಳಿಂದ ಸತತವಾಗಿ ರಂಗಕಲೆಯನ್ನು ಬೆಳೆಸುವ ಕೈಂಕರ್ಯದಲ್ಲಿ ತೊಡಗಿರುವ ಈ ಸಂಸ್ಥೆಯ ಜೊತೆ ಒಡನಾಟವನ್ನು ಇಟ್ಟುಕೊಂಡು, ಈ ಸಂಘದಲ್ಲಿ ಒಬ್ಬ ಸಕ್ರೀಯ ಕಾರ್ಯಕರ್ತರಾಗಿ ಸೇವೆಸಲ್ಲಿಸಿದ್ದಾರೆ.

## ಶ್ರೀ ಹೆಚ್.ಜೆ. ಸಿದ್ದರಾಜಯ್ಯ

ಮೊ: 9448073472

ಕನಕಪುರ ಕಸಬ, ಹುಲೆಬೆಲೆ ಗ್ರಾಮದ ಶ್ರೀ ಜೋಗಯ್ಯ ನವರ ಮಗನಾದ ಶ್ರೀ ಹೆಚ್.ಜೆ. ಸಿದ್ದರಾಜಯ್ಯ ಅವರು 08.06.1952 ರಲ್ಲಿ ಜನಿಸಿದ್ದಾರೆ. 1970 ರಲ್ಲಿ ಬೆಂಗಳೂರಿನ ಶ್ರೀರಾಮಪುರದ ಸ್ವತಂತ್ರ ಪಾಳ್ಯದಲ್ಲಿ ದಿ॥ ಬಿ. ಆರ್. ನಾಯುಡು, ಶಾಸಕರು ಇವರ ಅಧ್ಯಕ್ಷತೆಯಲ್ಲಿ ನಡೆದ ಮಹಾಭಾರತ ಪೌರಾಣಿಕ ನಾಟಕದಲ್ಲಿ ನಾರದ ಪಾತ್ರದೊಂದಿಗೆ ರಂಗಭೂಮಿ ಪ್ರವೇಶ ಮಾಡಿ ಇಂದಿನವರೆವಿಗೆ ಸುಮಾರು 500 ರಷ್ಟು ಪೌರಾಣಿಕ ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಇವರು ನಟನೆಯ ಜೋತೆಗೆ ರಂಗ ಸಂಗೀತ, ನಿರ್ದೇಶನ, ರಂಗ ಸಂಘಟನೆಯಲ್ಲಿ ತೋಡಗಿಕೊಂಡಿದ್ದಾರೆ. 106 ಬಾರಿ ಶ್ರೀ ರಾಮನ ಪಾತ್ರವನ್ನು, 60 ಬಾರಿ ಶ್ರೀಕೃಷ್ಣನ ಪಾತ್ರವನ್ನು, 25 ಬಾರಿ ಅರ್ಜುನನ ಪಾತ್ರವನ್ನು ಹೀಗೆ ವಿವಿಧ ಪಾತ್ರಗಳನ್ನು ಯಶಸ್ವಿಯಾಗಿ ನಿರ್ವಹಿಸಿದ್ದಾರೆ. ಇವರ ಅಭಿನಯದ ಹಾಗೂ

ರಂಗ ಸಂಗೀತದ ಪೌರಾಣಿಕ ನಾಟಕಗಳು ರಾಜ್ಯದ ವಿವಿಧ ಭಾಗಗಳಲ್ಲದೆ, ಹೊರ ರಾಜ್ಯಗಳಾದ ಮುಂಬೈ, ಕಲ್ಕತ್ತ, ಕಾಶಿ (ವಾರಣಾಸಿ), ಅಮೇರಿಕಾದ ನ್ಯೂ ಜೆರ್ಸಿ, ಮುಂತಾದ ಕಡೆ ಪ್ರಯೋಗವಾಗಿವೆ. ಅಲ್ಲದೆ ದೂರದರ್ಶನ ಹಾಗೂ ಆಕಾಶವಾಣಿಯಲ್ಲಿ ಇವರ ರಂಗಗೀತೆ, ಜಾನಪದ ಗೀತೆಗಳ ಕಾರ್ಯಕ್ರಮ ಪ್ರಸಾರವಾಗಿವೆ. 'ಹುಬ್ಬಳ್ಳಿ' ಎಂಬ ಚಲನ ಚಿತ್ರದಲ್ಲಿ ಶ್ರೀರಾಮನಾಗಿ ಅಭಿನಯಿಸಿದ್ದಾರೆ. ಇವರ ರಂಗ ಸಂಘಟನೆಯಲ್ಲಿ ಪೌರಾಣಿಕ, ಸಾಮಾಜಿಕ, ಐತಿಹಾಸಿಕ, ಬೀದಿ ನಾಟಕಗಳು ಸೇರಿ 1500 ಕ್ಕೂ ಹೆಚ್ಚು ಪ್ರದರ್ಶನಗಳು ಕಂಡಿವೆ.

ಇವರ ಸಾಧನೆ ಗುರುತಿಸಿ ಕರ್ನಾಟಕ ನಾಟಕ ಅಕಾಡೆಮಿ 2011 ರಲ್ಲಿ ಪ್ರಶಸ್ತಿ ನೀಡಿ ಗೌರವಿಸಿದೆ. ಅಲ್ಲದೆ ನಾಟಕ ಅಕಾಡೆಮಿವತಿಯಿಂದ ಹೂವಿನ ಹಡಗಲ್ಲಿಯಲ್ಲಿ ನಡೆದ ರಂಗಭಾರತಿ ಎಂಬ ಸುವರ್ಣ ವರ್ಷಾ ಚರಣೆಯ ಸಂದರ್ಭದಲ್ಲಿ ಸುವರ್ಣ ರಂಗ ಸನ್ಮಾನ ನೀಡಿ ಗೌರವಿಸಿದೆ. ಹೀಗೆ ಹಲವಾರು ಸಂಘ ಸಂಸ್ಥೆಗಳು ಇವರನುನ ಪ್ರಶಸ್ತಿ ನೀಡಿ ಗೌರವಿಸಿವೆ.

## ಶ್ರೀ ಕೆ.ಬಿ.ರಾಜಣ್ಣ, (ಸಾಮಾಜಿಕ ನಾಟಕ)
## ಕಗ್ಗಲಹಳ್ಳಿ ಗ್ರಾಮ, ಹಾರೋಹಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ

ಶ್ರೀ ಕೆ.ಬಿ.ರಾಜಣ್ಣನವರು ಕಗ್ಗಲಹಳ್ಳಿಯಲ್ಲಿ ಶ್ರೀ ಕೆ.ಬೈರಪ್ಪ ಶ್ರೀಮತಿ ಜಯಮ್ಮ ನವರ ಮುದ್ದಿನ ಮಗನಾಗಿ 01.06.1965 ರಲ್ಲಿ ಜನಿಸಿದರು. ವಿದ್ಯಾರ್ಥಿ ದಿಶೆಯಿಂದಲೇ ಸಾಮಾಜಿಕ ನಾಟಕಗಳಲ್ಲಿ ಅಭಿನಯ, ಏಕಪಾತ್ರಾಭಿನಯ ಮಾಡುತ್ತಿದ್ದ ಶ್ರೀಯುತರು ನಂತರ ನಾಟಕದಲ್ಲಿ ಅಭಿನಯಿಸುವುದರಲ್ಲಿ ಸಂಪೂರ್ಣ ತೊಡಗಿಸಿಕೊಂಡರು. ಇವರು ಚಿಕ್ಕವಯಸ್ಸಿನಲ್ಲಿಯೇ ನಳದಮಯಂತಿ, ತ್ಯಾಗಿ, ರತ್ನಮಾಂಗಲ್ಯ, ರಂಗಣ್ಣನ ರಾದ್ಧಾಂತ, ಕುರುಕ್ಷೇತ್ರ, ದಾನಶೂರಕರ್ಣ, ಸಂಪೂರ್ಣ ರಾಮಾಯಣ, ಸತ್ಯಹರಿಶ್ಚಂದ್ರ, ರಾಜಾವಿಕ್ರಮ, ಈ ನಾಟಕಗಳಲ್ಲಿ ಇಂದ್ರಸೇನಾ, ರಘುವೀರ, ರಂಗಣ್ಣ, ಕರ್ಣ, ಲಕ್ಷ್ಮಣ, ದೇವೇಂದ್ರ, ದೇಶ ಋಷಿ ನಳಮಹಾರಾಜ, ದುರ್ಯೋಧನ, ವಿಕ್ರಮರಾಜ ಹೀಗೆ ಸುಮಾರು ಹಲವು ಪ್ರಯೋಗಗಳಲ್ಲಿ ಅಭಿನಯಿಸಿದ್ದಾರೆ. ಗ್ರಾಮಾಂತರ ಪ್ರೌಢಶಾಲೆ, ಸಾತನೂರು, ಕಗ್ಗಲಹಳ್ಳಿ, ಏಡಮಡು, ತೊಪ್ಪಗನಹಳ್ಳಿ, ಕಲ್ಲಹಳ್ಳಿ ಗ್ರಾಮದಲ್ಲಿ ಆಡಿದ ನಾಟಕಗಳಲ್ಲಿ ಅಭಿನಯಿಸಿದ್ದಾರೆ.

## ಶ್ರೀ ಡಿ.ಆರ್.ರುದ್ರಕುಮಾರ್, (ತಬಲ ವಾದಕರು)

**36, ಕೋಟೆ ಆಚಾರ್ ಬೀದಿ, ಕನಕಪುರ, ರಾಮನಗರ ಜಿಲ್ಲೆ**

ಶ್ರೀಯುತರಾದ ಡಿ.ಆರ್. ರುದ್ರಕುಮಾರ್ 12.08.1940ನೇ ಇಸವಿಯಲ್ಲಿ ತಂದೆ ಮದ್ದಲೆ ದೊಡ್ಡಾಚಾರ್ ತಾಯಿ ಪಾರ್ವತಮ್ಮ ಇವರ ಮಗನಾಗಿ ಕನಕಪುರ ಕೋಟೆಯ ವಿಶ್ವಕರ್ಮ ವಂಶಸ್ಥರಲ್ಲಿ ಜನಿಸಿದರು. 1949 ರಲ್ಲಿ ಸರ್ಕಾರಿ ಬಾಲಕನ ಕನ್ನಡ ಮಾಧ್ಯಮಿಕ ಶಾಲೆಯಲ್ಲಿ ಐದನೇ ತರಗತಿಯವರೆಗೆ ಅಭ್ಯಾಸ ಮಾಡಿದರು. ಆನಂತರ ಅವರೇ ಯಕ್ಷಗಾನಕ್ಕೆ ಮೃದಂಗ ನುಡಿಸುತ್ತಿದ್ದರು. ಆಗ ಅವರೇ ಇವರಿಗೆ ತಬಲ ಅಭ್ಯಾಸವನ್ನು ಮೂರು ವರ್ಷಗಳ ಕಾಲ ಕಲಿಸಿದರು. ಮುಂದೆ ಜೀವನ ಸಾಗಿಸಲು ಒಂದು ಹುರಿಮಿಷನ್ನಿಗೆ ಸೇರಿಸಿದರು.

ಚಿಕ್ಕಪೇಟೆ ಆಂಜನೇಯ ದೇವಾಲಯದಲ್ಲಿ ಪ್ರತಿ ಶನಿವಾರ ಭಜನೆ ನಡೆಯುತ್ತಿತ್ತು. ಅದನ್ನು ನೋಡಲು ಇವರು ಹೋಗುತ್ತಿದ್ದರು. ಇವರಿಗೆ ಕಲಾ ಆಸಕ್ತಿ ಇತ್ತು. ಇದನ್ನು ಗಮನಿಸಿದ ರಾಮಣ್ಣನವರು ಪುಟ್ಟಾಚಾರ್ ಹತ್ತಿರ ಅಭ್ಯಾಸ ಮಾಡಲು ಸೇರಿಸಿದರು. ಚೆನ್ನಾಗಿ ತಬಲ ನುಡಿಸುವುದನ್ನು ಕಲಿತರು. ಇವರು ಬಾಂಬೆ ಷೋ ಸೇರಿದರು. ಮುಂದೆ ಬಾಗಲಕೋಟೆ, ಬಾದಾಮಿ, ಬನಶಂಕರಿ, ಪೂನ, ಉತ್ತರ ಕರ್ನಾಟಕದಲ್ಲಿ ಸುತ್ತಾಡಿದರು. ಮುಂದೆ ಹುಬ್ಬಳ್ಳಿ ಉಳುಗೆರೆ ಬಸವರಾಜು ಕಂಪನಿಯಲ್ಲಿ ಸೇರಿ ಐದು ವರ್ಷ ತಬಲ ನುಡಿಸಿ, ನಂತರ ಚಾಮುಂಡೇಶ್ವರಿ ಕಂಪನಿಯಲ್ಲಿ ಎರಡು ವರ್ಷ, ಸ್ತ್ರೀ ನಾಟಕ ಮಂಡಲಿ, ಬೆಂಗಳೂರು ಎರಡು ವರ್ಷ, ಮಾಸ್ಟರ್ ಹೀರಣ್ಣಯ್ಯ ಮಿತ್ರ ಮಂಡಲಿಯಲ್ಲಿ ಮೂರು ವರ್ಷ, ಪುನಃ ಹುಬ್ಬಳ್ಳಿ ಮೂರು ಸಾವಿರ ಮಠದಲ್ಲಿ ಹಿಂದೂಸ್ತಾನಿ ಪಾಠ ಕಲಿತು, ಆನಂತರ ಬೆಂಗಳೂರು, ಬೆಂಗಳೂರು ಗ್ರಾಮಾಂತರ, ಮೈಸೂರು, ಮೈಸೂರು ಗ್ರಾಮಾಂತರ, ಮಂಡ್ಯ ನಗರ, ಗ್ರಾಮಾಂತರ ಈ ಭಾಗದಲ್ಲಿ ತಬಲನುಡಿಸಿ ಜನರ ಮನದಲ್ಲಿ ಮನೆಮಾತಾಗಿದ್ದಾರೆ. ತಬಲ ನುಡಿಸುವ ಒಬ್ಬ ಒಳ್ಳೆಯ ಕಲಾವಿದರು ಡಿ.ಆರ್.ರುದ್ರಕುಮಾರ್. ಇವರು ನಾಟಕ, ಹರಿಕಥೆಗಳಿಗೆ ಮಾಗಡಿ, ಕುಣಿಗಲ್, ಕನಕಪುರ ತಾಲ್ಲೂಕುಗಳಲ್ಲಿ ತಬಲ ನುಡಿಸಿದ್ದಾರೆ. ಇವರ ಜೀವನ ಪರಿಸ್ಥಿತಿ ತುಂಬಾ ಕಠಿಣವಾದುದಾಗಿದೆ.

## ಶ್ರೀ ರೇವಾಚಾರ್, (ರಂಗಕಲಾ ಶಿಕ್ಷಕರು)

**4ನೇ ರಸ್ತೆ, ನಿರ್ವಾಣೇಶ್ವರ ನಗರ, 373ನೇ ಮನೆ,**
**ಕನಕಪುರ, ರಾಮನಗರ ಜಿಲ್ಲೆ**

ಇವರು ದಿನಾಂಕ 08.01.1942 ರಲ್ಲಿ ತಂದೆ ವೆಂಕಟರಮಣಚಾರ್,

ತಾಯಿ ನಿಂಗಮ್ಮ ಇವರ ಮಗನಾಗಿ ಆನೇಕಲ್ ತಾಲ್ಲೂಕು ಕಾಡು ಜಕ್ಕನಹಳ್ಳಿಯಲ್ಲಿ ಹುಟ್ಟಿದರು. ಕಾಡುಜಕ್ಕನಹಳ್ಳಿಯಲ್ಲಿಯೇ ಪಿ.ಜಿ.ಎನ್. ನಾರಾಯಣಸ್ವಾಮಿನಾಯ್ಡು ರವರ ಹತ್ತಿರ ನಾಲ್ಕು ವರ್ಷ ಸಂಗೀತ ಪಾಠ ಅಭ್ಯಾಸ ಮಾಡಿ, ನಂತರ ಪಂಡರಿಭಜನೆ, ಕಾರ್ಯಕ್ರಮದಲ್ಲಿ ಹಾರ್ಮೋನಿಯಂ ನುಡಿಸಿ, ಕೆಲವು ಕೀರ್ತನೆಗಳನ್ನು ಹಾಡುತ್ತಾ ಹಾರ್ಮೋನಿಯಂ ನುಡಿಸುತ್ತಿದ್ದರು. ಹಾಗೆಯೇ ನಾಟಕಗಳಲ್ಲಿ ಪಾತ್ರವನ್ನು ಅಭ್ಯಾಸ ಮಾಡಿ ಕೃಷ್ಣ, ನಾರದ, ಲಕ್ಷ್ಮಣ ಅಂಗದ ಮೊದಲಾದ ಪಾತ್ರಗಳನ್ನು ನಿರ್ವಹಿಸಿದರು. ಇವರು ಶ್ರೀಮತಿ ಔರಮ್ಮನವರನ್ನು ಮದುವೆಯಾಗಿದ್ದಾರೆ.

ಹೀಗೆ ಹಾರ್ಮೋನಿಯಂ, ಸಂಗೀತ ಕಲಿತ ಇವರು ತಾವೇ ಸ್ವತಃ ನಾಟಕ ಕಲಿಸಲು ತೊಡಗಿದರು. ಸಂಪೂರ್ಣ ರಾಮಾಯಣ, ದಾನಶೂರಕರ್ಣ, ಪಾಂಡುವಿಜಯ, ನಾಟಕಗಳನ್ನು ರಾಗಳ್ಳಿ, ಶಿವನಹಳ್ಳಿ, ಕಾಡು ಜಕ್ಕನಹಳ್ಳಿ, ಸಿದ್ದೈಯ್ಯನಪಾಳ್ಯ, ಆನೇಕಲ್ ತಾಲ್ಲೂಕಿನ ಪ್ರತಿ ಹಳ್ಳಿಗಳಲ್ಲೂ, ಕನಕಪುರ ತಾಲ್ಲೂಕಿನ ಚಿಕ್ಕೇನಹಳ್ಳಿ, ದ್ಯಾಪೇಗೌಡನದೊಡ್ಡಿ, ಹೊಸಕೋಟೆ, ಕನಕಪುರ ಪಟ್ಟಣ ಹೀಗೆ ಪೌರಾಣಿಕ ನಾಟಕಗಳನ್ನು ಕಲಿಸಿದ್ದಾರೆ.

## ಶ್ರೀ ವೆಂಕಟೇಶ್, ರಂಗಕಲಾ ಶಿಕ್ಷಕರು
## ತೊಪ್ಪಗನಹಳ್ಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ

ಶ್ರೀಯುತರು ದಿನಾಂಕ: 15.12.1948 ರಲ್ಲಿ ಚಿಕ್ಕನರಸಿಂಹಯ್ಯ ಮತ್ತು ಜಯಮ್ಮ ಇವರ ಮಗನಾಗಿ ತೊಪ್ಪಗನಹಳ್ಳಿಯಲ್ಲಿ ಜನಿಸಿದರು. ಇವರು ಐದನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿ ನಾಟಕ ಕಲೆಗೆ ಆಕರ್ಷಿತರಾಗಿ ಪಂಡಿತ್ ರಾಮಾನುಜಾಚಾರ್ಯರು ಇವರ ಗುರುಗಳ ಮಾರ್ಗದರ್ಶನದಲ್ಲಿ ಹಾರ್ಮೋನಿಯಂ ಅಭ್ಯಾಸ ಮಾಡಿ, ಆನಂತರ ಪೂರ್ಣವಾಗಿ ನಾಟಕ ರಂಗಕ್ಕೆ ತಮ್ಮನ್ನು ತಾವು ತೊಡಗಿಸಿಕೊಂಡರು.

ಸಂಪೂರ್ಣ ರಾಮಾಯಣ, ದಕ್ಷಯಜ್ಞ, ಕುರುಕ್ಷೇತ್ರ ಮುಂತಾದ ಪೌರಾಣಿಕ ನಾಟಕಗಳನ್ನು ಹಾರೋಹಳ್ಳಿ, ಯಲಬನಾಥ, ಏರಿಂದ್ಯಾಪನಹಳ್ಳಿ, ಯಲಚವಾಡಿ, ಅರಳಿಮರದದೊಡ್ಡಿ, ಚಿಕ್ಕಮರಳವಾಡಿ, ಜವನಮ್ಮನದೊಡ್ಡಿ, ರಾಮನಗರ ತಾಲ್ಲೂಕಿನ ಹಾಗಲಹಳ್ಳಿ ಮುಂತಾದ ಕಡೆಗಳಲ್ಲಿ ನಾಟಕಗಳನ್ನು ಕಲಿಸಿದ್ದಾರೆ. 20.08.1999 ರಲ್ಲಿ ನಡೆದ ದಿವಂಗತ ಎಸ್.ಕರಿಯಪ್ಪನವರ ಸ್ಮರಣಾರ್ಥ ಟಾನ್ ಟೆನಿಸ್

ಕೋರ್ಟಿನಲ್ಲಿ ನಡೆದ ಜಿಲ್ಲಾಮಟ್ಟದ ನಾಟಕೋತ್ಸವದಲ್ಲಿ ಇವರ ಸೇವೆಯನ್ನು ಗುರುತಿಸಿ ಸನ್ಮಾನಿಸಿ ಪತ್ರವನ್ನು ನೀಡಿದ್ದಾರೆ.

## ಶ್ರೀ ಜಗದೀಶ್ವರಾಚಾರ್, (ರಂಗಬಾಂಧವ್ಯ),

**ಮಹಾರಾಜರ ಕಟ್ಟೆ ಮಾರ್ಗ, ಕನಕಪುರ, ರಾಮನಗರ ಜಿಲ್ಲೆ,**

**ಮೊ: 9845631981**

ಶ್ರೀ ಜಗದೀಶ್ವರಾಚಾರ್ಯರು ದಿನಾಂಕ 02.08.1941 ರಲ್ಲಿ ತಂದೆ ನಾಟಕ ಶಿಕ್ಷಕರಾದ ಕೆಂಪಾಚಾರ್, ತಾಯಿ ಶ್ರೀಮತಿ ಲಕ್ಷ್ಮೀದೇವಮ್ಮ ಇವರ ಮಗನಾಗಿ ಸುಂಢಘಟ್ಟ ಗ್ರಾಮದಲ್ಲಿ ಜನ್ಮ ತಾಳಿದರು. ಶ್ರೀಯುತರು ತಮ್ಮ 15ನೇ ವರ್ಷಕ್ಕೆ ರಂಗಕಲೆಗೆ ಪಾದಾರ್ಪಣೆ ಮಾಡಿದಾಗ ಸ್ತ್ರೀಪಾತ್ರಗಳನ್ನೇ ಹೆಚ್ಚು ಮಾಡುತ್ತಿದ್ದರು. ದ್ರೌಪದಿ, ರುಕ್ಮಿಣಿ, ಸೀತೆ ಈ ಎಲ್ಲಾ ಪಾತ್ರಗಳನ್ನು ತುಂಗಣಿ ಗ್ರಾಮದಲ್ಲೇ ಅಭಿನಯಿಸಿದ್ದಾರೆ. ಆನಂತರ 1954–55ನೇ ಇಸವಿಯಲ್ಲಿ ಗುಬ್ಬಿ ಕಂಪನಿ ನಂಜುಂಡಾರಾಧ್ಯರು, ಕೌಲಂದೆ ಶಿವಣ್ಣ, ವಂಡರಬಾಳು ಲಿಂಗರಾಜೇ ಅರಸ್, ತಂದೆ ಕೆಂಪಾಚಾರ್ ಇವರ ಮಾರ್ಗದರ್ಶನದಲ್ಲಿ ಹಾರ್ಮೋನಿಯಂ ಅಭ್ಯಾಸ ಮಾಡಿದರು. ನಾಟಕ ರಂಗದ ಶಿಕ್ಷಕರಾದ ಮೇಲೂ ರಂಗ ಶಿಕ್ಷಕರ ಜೊತೆಗೂಡಿ ನಾರದ, ಸೂತ್ರಧಾರಿ, ಪರಶುರಾಮ, ದ್ರೋಣಾಚಾರ್ಯ, ಶಕುನಿ, ಭರತ, ಮುಂತಾದ ಪಾತ್ರಗಳನ್ನು ನಿರ್ವಹಿಸಿ ಪಾತ್ರಗಳಿಗೆ ಜೀವ ತುಂಬಿದರು.

ನಂತರ ಇವರು ಪೂರ್ಣವಾಗಿ ನಾಟಕ ಕಲಿಸಲು ತೊಡಗಿಸಿಕೊಂಡರು. ಪೌರಾಣಿಕ, ಐತಿಹಾಸಿಕ, ಸಾಮಾಜಿಕ ನಾಟಕಗಳನ್ನು ರಂಗಮಂಟಪದಲ್ಲಿ ಮೆರೆಸಿದರು. ರಾಮಾಯಣ, ಮಹಾಭಾರತ, ಕುರುಕ್ಷೇತ್ರ, ಪ್ರಚಂಡ ರಾವಣ, ಕೃಷ್ಣಲೀಲೆ, ಶ್ರೀಕೃಷ್ಣ ರಾಯಭಾರ, ಕಾಳಿದಾಸ, ಕರುಣಾಮಯಿ, ಅಯ್ಯಪ್ಪಸ್ವಾಮಿ, ದುರಂತ ಕುರುಕ್ಷೇತ್ರ, ಮುಂತಾದವುಗಳನ್ನು ಎಚ್ಚಮನಾಯಕ, ಟಿಪ್ಪುಸುಲ್ತಾನ್, ಜಗಜ್ಯೋತಿ ಬಸವೇಶ್ವರ, ಸಾಮ್ರಾಟ್ ಅಶೋಕ ಇತ್ಯಾದಿ. ಜೊತೆಗೆ ತ್ಯಾಗಿ, ಕಂಬನಿ, ರತ್ನಮಾಂಗಲ್ಯ, ಸಂಸಾರನೌಕೆ, ಗೌಡರ ಗದ್ದಲ ಇವುಗಳನ್ನು ಕಲಿಸಿ ಪ್ರದರ್ಶಿಸಿದ್ದಾರೆ. ಇವರು ಬ್ಲಾಸಮ್ ಶಾಲೆಯಲ್ಲಿ ಸಂಗೀತ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಾ ರಂಗಬಾಂಧವ್ಯ ಎಂಬ ರಂಸಸಂಸ್ಥೆಯಲ್ಲಿ ಸಂಚಾಲಕರಾಗಿ, ಕನ್ನಡ ಸಾಹಿತ್ಯ ಪರಿಷತ್ತು ಕರ್ನಾಟಕ ಸಂಘ ಸಂಸ್ಕಾರ ಭಾರತಿ ಸಂಸ್ಥೆಯಲ್ಲಿ ಗೌರವಾಧ್ಯಕ್ಷರಾಗಿ, ವಿಶ್ವಕರ್ಮ ಸೇವಾಪ್ರತಿಷ್ಠಾನ, ಕನಕಪುರ. ಈ ಜನಾಂಗದ ಅಭಿವೃದ್ಧಿಗೆ ತೊಡಗಿಸಿಕೊಂಡಿದ್ದಾರೆ. ಇವರ ರಂಗ ಸೇವೆ ಅನನ್ಯವಾದುದು.

## ಶ್ರೀ ಎಂ.ಸಿ.ರಾಮಕೃಷ್ಣಪ್ಪ, (ರಂಗಬಾಂಧವ್ಯ),
## ರಾಮನಗರ ಮುಖ್ಯರಸ್ತೆ, ರಾಮನಗರ ಜಿಲ್ಲೆ

ಶ್ರೀಯುತರು ಕನಕಪುರ ಪಟ್ಟಣದಲ್ಲಿ ದಿನಾಂಕ:18.10.1938 ರಲ್ಲಿ ತಂದೆ ಚಿಕ್ಕಯ್ಯಶೆಟ್ರು, ತಾಯಿ ನರಸಮ್ಮ ನವರ ಮಗನಾಗಿ ಜನಿಸಿದರು. ಶ್ರೀಯುತರು ತಮ್ಮ ವೃತ್ತಿಯ ಜೊತೆಗೆ ರಂಗಕಲೆಯ ಹವ್ಯಾಸವನ್ನು 1974 ರಿಂದ ರೂಢಿಸಿಕೊಂಡು ಬಂದಿದ್ದಾರೆ. ಅನೇಕ ನಾಟಕಗಳಲ್ಲಿ ರಂಗ ಕಲಾವಿದರಾಗಿ, ಅನೇಕ ಸಂಘಗಳ ಪೋಷಕರಾಗಿ, ಖಜಾಂಚಿಯಾಗಿ, ಕೊಡುಗೈದಾನಿಯಾಗಿ ತೊಡಗಿಸಿಕೊಂಡಿದ್ದಾರೆ. ಪೌರಾಣಿಕ ನಾಟಕ, ಐತಿಹಾಸಿಕ ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಸಂಪೂರ್ಣ ರಾಮಾಯಣದಲ್ಲಿ ಆಂಜನೇಯ ಪಾತ್ರ, ತ್ರಿಜನ್ಮ ಮೋಕ್ಷದಲ್ಲಿ ಆಂಜನೇಯ, ಕುರುಕ್ಷೇತ್ರ ನಾಟಕದಲ್ಲಿ ಕೃಷ್ಣ, ವಿದುರ, ಕರ್ಣ, ಪ್ರಚಂಡ ರಾವಣ, ಶ್ರೀಕೃಷ್ಣ ಸಂಧಾನ ನಾಟಕಗಳಲ್ಲಿ ಅಭಿನಯಿಸಿದ್ದಾರೆ.

ಜಗಜ್ಯೋತಿ ಬಸವೇಶ್ವರ ನಾಟಕದಲ್ಲಿ ನಾರದನ ಪಾತ್ರ, ಕರುಣಾಮಯಿ ಅಯ್ಯಪ್ಪ ನಾಟಕದಲ್ಲಿ ಪಂಜಳ ರಾಜನ ಪಾತ್ರಗಳನ್ನು ತುಂಬಾ ಯಶಸ್ವಿಯಾಗಿ ನಿರ್ವಹಿಸಿ ಪ್ರೇಕ್ಷಕರ ವಿಶ್ವಾಸಗಳಿಸಿದ್ದಾರೆ. ರಂಗ ಬಾಂಧವ್ಯ ರಂಗಕಲಾ ಸಂಘದ ಸಂಸ್ಥಾಪಕ ಅಧ್ಯಕ್ಷರೂ ಪ್ರಧಾನ ಪೋಷಕರಾಗಿ ತುಂಬಾ ಶ್ರದ್ದೆಯಿಂದ, ಆಸಕ್ತಿಯಿಂದ ಕಾರ್ಯನಿರ್ವಹಿಸುತ್ತಾ, ರಂಗಬಾಂಧವ್ಯವು ನಡೆಸಿಕೊಂಡು ಬರುತ್ತಿರುವ ತಿಂಗಳಿಗೊಂದು ಕಾರ್ಯಕ್ರಮವನ್ನು ತಮ್ಮ ಸ್ವತಃ ಖರ್ಚಿನಿಂದ 50 ಕಾರ್ಯಕ್ರಮಗಳನ್ನು ಮಾಡಿ ಯಶಸ್ಸು ಕಂಡಿದ್ದಾರೆ. ರಂಗಕಲೆಯಲ್ಲಿ ವಿಶಿಷ್ಟ ಸೇವೆಗೈದ ಕಲಾವಿದರನ್ನು ಕರೆಸಿ ಸನ್ಮಾನಿಸಿದ್ದಾರೆ. ಅಂತ ಕಲಾವಿದರಲ್ಲಿ ಆರ್.ನಾಗರತ್ನಮ್ಮ ಶ್ರೇಷ್ಠ ರಂಗ ಕಲಾವಿದೆ. ಎ.ಎಸ್.ಮೂರ್ತಿ, ಚಂದ್ರಶೇಖರ ಪಾಟೀಲ ಮುಂತಾದವರು ಮುಖ್ಯರಾದವರು.

## ಶ್ರೀ ಎಲ್ಲೇಗೌಡ ಬೆಸಗರಹಳ್ಳಿ, (ರಂಗಬಾಂಧವ್ಯ),
## ಸವಿಗನ್ನಡ ಬಾಣಂತ ಮಾರಮ್ಮ ಬಡಾವಣೆ, ಕನಕಪುರ, ರಾಮನಗರ ಜಿಲ್ಲೆ

ಶ್ರೀಯುತರಾದ ಬೆಸಗರಹಳ್ಳಿ ಎಲ್ಲೇಗೌಡರವರು ಹುಟ್ಟಿದ್ದು ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕಿನ ಬೆಸಗರಹಳ್ಳಿಯಲ್ಲಿ ತಂದೆ ದೊಡ್ಡತಿಮ್ಮಯ್ಯ ತಾಯಿ ಚಿಕ್ಕತಿಮ್ಮಮ್ಮನವರ ಮಗನಾಗಿ 1952 ಮಾರ್ಚ್ 6 ರಂದು. ಶ್ರೀ ದೇಗುಲ ಮಠದಲ್ಲಿರುವ ನಿರ್ವಾಣ ಮಹಾಲಿಂಗ ಸ್ವಾಮಿಗಳ ವಸತಿ ಪ್ರೌಢಶಾಲೆಯಲ್ಲಿ

ಅಧ್ಯಾಪಕರಾಗಿದ್ದುಕೊಂಡು. ಅಧ್ಯಾಪಕ ವೃತ್ತಿಯ ಜೊತೆಗೆ ನಾಟಕಗಳಲ್ಲಿ ಅಭಿನಯಿಸುವ ಪ್ರವೃತ್ತಿಯನ್ನು ಬೆಳೆಸಿಕೊಂಡು ರಂಗಕಲೆಗೆ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ. ಪೌರಾಣಿಕ, ಐತಿಹಾಸಿಕ, ಸಾಮಾಜಿಕ ನಾಟಕಗಳಲ್ಲಿ ಅಭಿನಯಿಸಿದ್ದಾರೆ. 1967 ರಿಂದ ಪ್ರಾರಂಭಗೊಂಡು ಈವರೆವಿಗೆ ತಮ್ಮ ರಂಗಕಲೆಯನ್ನು ಮುಂದುವರಿಸಿಕೊಂಡು ಬರುತ್ತಿದ್ದಾರೆ. ಕುರುಕ್ಷೇತ್ರ, ದಾನಶೂರಕರ್ಣ, ನಾಟಕಗಳಲ್ಲಿ ಉತ್ತರೆಯ ಸಖಿ ಪಾತ್ರ, ಗಿರಿಜೆಯ ಪಾತ್ರ, ಪರಶು ವಿಜಯ ನಾಟಕದಲ್ಲಿ ರೇಣುಕೆಯ ಪಾತ್ರ ಭೀಮನ ಪಾತ್ರ ಧುರ್ಯೋಧನನ ಪಾತ್ರಗಳಲ್ಲಿ ಪಾತ್ರ ಮಾಡಿ ಪಾತ್ರಗಳಿಗೆ ಜೀವ ತುಂಬಿದ್ದಾರೆ.

ಗೆಳೆಯರ ಬಳಗ, ಬೆಸಗರಹಳ್ಳಿ, ಬಸವ ಸಮಿತಿ ಬೆಸಗರಹಳ್ಳಿ ಈ ಸಮಿತಿಗಳಲ್ಲಿ ಸಾಮಾಜಿಕ ಣಾಟಕಗಳು ಸುಮಾರು 25ಕ್ಕೆ ಹೆಚ್ಚು ನಾಟಕಗಳಲ್ಲಿ ನಟಿಸಿದ್ದಾರೆ. 1986 ರಲ್ಲಿ "ಕನ್ನಡ ನಾಟಕ ಪರಂಪರೆ"ಯನ್ನು ಕುರಿತ ನಾಟಕ ಕಮ್ಮಟ ಹತ್ತು ದಿನಗಳ ಕನಾಟಕ ಸಾಹಿತ್ಯ ಅಕಾಡೆಮಿ ವತಿಯಿಂದ, 'ನಿರಂತರ ನಾಟಕದ ಸಹ ರಚನೆ ಮತ್ತು ಸಹ ನಿರ್ದೇಶನದೊಂದಿಗೆ ಮುಖ್ಯಮಂತ್ರಿ' ಪಾತ್ರ, ಶಂಖವಾದ್ಯ ಕೊಂಡುತಂದ ಗಂಡ, ಬಸ್ ಕಂಡಕ್ಟರ್, ಏರುಪೇರು, ದೇವದಾಸಿ, ಪ್ರತಿಫಲ ಮುಂತಾದ ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಜೊತೆಗ ರಂಗಗೀತೆಗಳನ್ನು ಹಾಡಿದ್ದಾರೆ.

ಜಿಲ್ಲಾ ಗಮಕ ಕಲಾ ಪರಿಷತ್ತಿನ ಅಧ್ಯಕ್ಷರಾಗಿ, ಅಖಿಲ ಕರ್ನಾಟಕ ವಚನ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ.

## ಶ್ರೀ ಎಂ.ಡಿ.ವಿಜಯದೇವ್, ರಂಗ ಕಲಾವಿದರು

**1ನೇ ಮುಖ್ಯರಸ್ತೆ, ರಂಗನಾಥ ಬಡಾವಣೆ, ಕನಕಪುರ, ರಾಮನಗರ ಜಿಲ್ಲೆ**

ಶ್ರೀಯುತರಾದ ಮಹಿಮನಹಳ್ಳಿ ಪಟೇಲ್ ದ್ಯಾವೇಗೌಡ ಶ್ರೀಮತಿ ದೇವಮ್ಮನವರ ಮಗನಾಗಿ ದಿನಾಂಕ:21.01.1961 ರಲ್ಲಿ ಜನಿಸಿದರು. ಕನಕಪುರದ ಸಾಂಸ್ಕೃತಿಕ, ಸಂಘ-ಸಂಸ್ಥೆಗಳ ಒಡನಾಟಕ್ಕೆ ಒಳಗಾಗಿ ಕನಕಪುರ ಪಟ್ಟಣಕ್ಕೆ ಬಂದರು. ಕನಕಪುರದಲ್ಲಿರುವ ರೋಟರಿ ಸಂಸ್ಥೆಯ ಅಧ್ಯಕ್ಷರಾಗಿ, ಟ್ರಸ್ಟಿಯಾಗಿ, ಕರ್ನಾಟಕ ಸಂಘದ ಅಧ್ಯಕ್ಷರಾಗಿ, ಭಾರತ ಸೇವಾದಲದ ಅಧ್ಯಕ್ಷರಾಗಿ ಟೌನ್, ಟೆನಿಸ್ ಸಂಸ್ಥೆಯ ಕಾರ್ಯದರ್ಶಿಯಾಗಿ, ಇವೆಲ್ಲದರ ನಡುವೆ ಅವರು ತಮ್ಮನ್ನು ರಂಗಕಲೆಗೆ ತೊಡಗಿಸಿಕೊಂಡಿರುವುದು ನಿಜಕ್ಕೂ ಮೆಚ್ಚಬೇಕಾದ್ದು.

ಇವರು ಕುರುಕ್ಷೇತ್ರ ರಾಮಾಯಣ, ಪ್ರಚಂಡ ರಾವಣ, ಕೃಷ್ಣ ಸಂಧಾನ, ತ್ಯಾಗಿ, ಪಂಚ ಭೂತಗಳು, ಎಚ್ಚಮನಾಯಕ, ಸಾಮ್ರಾಟ ಅಶೋಕ ಮುಂತಾದ ಪೌರಾಣಿಕ, ಸಾಮಾಜಿಕ ನಾಟಕಗಳಲ್ಲಿ ಇವರು ಪಾಲ್ಗೊಂಡಿದ್ದಾರೆ. ಉತ್ತರೆಪಾತ್ರ, ಕುಂತಿ, ಭೀಮ, ಕರ್ಣ, ರಾವಣ ಮುಂತಾದ ಮುಖ್ಯಪಾತ್ರಗಳನ್ನು ನಿರ್ವಹಿಸಿ ಪೌರಾಣಿಕ ಪಾತ್ರಗಳಿಗೆ ಜೀವ ತುಂಬಿದ್ದಾರೆ.

## ಶ್ರೀ ಮರಳವಾಡಿ ಉಮಾಶಂಕರ್, (ರಂಗಬಾಂಧವ್ಯ),
### ಕೋಡಿಹಳ್ಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ

ಶ್ರೀಯುತ ಮರಳವಾಡಿ ಉಮಾಶಂಕರ್‌ರವರು ದೊಡ್ಡ ಮರಳವಾಡಿ ಗ್ರಾಮದಲ್ಲಿ ದಿವಂಗತ ತಂದೆ ಮಹದೇವಯ್ಯ, ತಾಯಿ ಶಿವಮ್ಮನವರ ದಂಪತಿಗಳ ಮಗನಾಗಿ ದಿನಾಂಕ: 04.02.1961 ರಲ್ಲಿ ಜನಿಸಿದರು. ಇವರು ದೀಪಾ ಆಫ್‌ಸೆಟ್ ಮುದ್ರಣಾಲಯವನ್ನು ನಡೆಸುತ್ತಿದ್ದಾರೆ. ಜೊತೆಗೆ ಶ್ರೀಯುತರು ಕರ್ನಾಟಕ ಸಂಘದ ಅಧ್ಯಕ್ಷರಾಗಿ, ರೋಟರಿ ಸಂಸ್ಥೆಯ ಅಧ್ಯಕ್ಷರಾಗಿ, ಚೇತನ ಸದಸ್ಯರಾಗಿ ರಂಗಬಾಂಧವ್ಯ ಸಂಘದಲ್ಲಿ ಅಲ್ಲದೆ ಇನ್ನೂ ಹತ್ತಾರು ಸಂಘ-ಸಂಸ್ಥೆಗಳ ಒಡನಾಟವನ್ನು ಇಟ್ಟುಕೊಂಡಿದ್ದಾರೆ. ಇವರು ಸುಭದ್ರ ಪರಿಣಯ, ಕುರುಕ್ಷೇತ್ರ, ವಿಷಜ್ವಾಲೆ, ಸಾಮ್ರಾಟ ಅಶೋಕ, ಪ್ರಚಂಡ ರಾವಣ, ಕೃಷ್ಣ ಸಂಧಾನ, ಕೀಚಕವಧೆ, ಮುಂತಾದ ಪೌರಾಣಿಕ ನಾಟಕಗಳನ್ನು ಮಂತ್ರಕ್ಕೆ ಮಾವಿನಕಾಯಿ ಅಂಗಿ, ಬಟ್ಟೆ, ತ್ಯಾಗಿ, ಮಹಾತ್ಯಾಗಿ ಮುಂತಾದ ಸಾಮಾಜಿಕ ನಾಟಕಗಳಲ್ಲಿ ಪಾತ್ರಗಳನ್ನು ಮಾಡಿ ಜನಮನ್ನಣೆ ಗಳಿಸಿದ್ದಾರೆ. ಯಾವುದೇ ಜನಪರ, ಸಾಹಿತ್ಯಿಕ, ಕಾರ್ಯಗಳಲ್ಲಿ ಉಚಿತವಾಗಿ ಕರಪತ್ರಗಳನ್ನು ಮುದ್ರಿಸಿಕೊಡುವ ಕೈಂಕರ್ಯವನ್ನು ಮಾಡಿದ್ದಾರೆ.

## ಶ್ರೀ ಹೆಚ್.ಶಿವರಾಮಯ್ಯ, ರಂಗಕಲಾವಿದರು
### ಕೃಷಿ ಸಹಾಯಕರು, ಏಳಿಗೆಹಳ್ಳಿ ಕಾಲೋನಿ (ವೈ.ಜಿ.ಗುಡ್ಡ) ಮಾಡಬಾಳ್ ಹೋಬಳಿ, ಮಾಗಡಿ ತಾಲ್ಲೂಕು, ರಾಮನಗರ ಜಿಲ್ಲೆ
### ಮೊ: 9008379618

ಶ್ರೀಯುತ ಹೆಚ್.ಶಿವರಾಮಯ್ಯನವರು ಒಬ್ಬ ಅಪ್ಪಟ ರಂಗಕಲಾವಿದರು, ಒಳ್ಳೆಯ ಹಾಡುಗಾರರು. ಇವರಿಂದ ಜಾನಪದಗೀತೆ, ಭಕ್ತಿಗೀತೆ, ರಂಗಗೀತೆಗಳನ್ನು ಕೇಳುವುದೇ ಒಂದು ಕರ್ಣಾನಂದ. ಇವರು ಹನುಮಯ್ಯ ತಿಮ್ಮಕ್ಕ ಎಂಬ ದಂಪತಿಗಳ ಮಗನಾಗಿ ಜನಿಸಿದರು. ದಿನಾಂಕ:12.10.1962 ರಲ್ಲಿ ಜನಿಸಿದ

ಇವರಿಗೆ ರವಿಕುಮಾರ್ ಎಂಬ ತಮ್ಮನ್ನೂ ಸಹ ಇದ್ದಾರೆ. ಇವರ ವೃತ್ತಿಯ ಜೊತೆಗೆ ರಂಗಕಲೆಯನ್ನು ಪ್ರವೃತ್ತಿಯನ್ನಾಗಿ ಬೆಳೆಸಿಕೊಂಡಿದ್ದಾರೆ. ಹರ್ಷಿತ ಯುವ ಕಲಾವೃಂದ, ಕನಕ ಜ್ಯೋತಿ ಕಲಾ ಸಂಘದ ಜೊತೆ ಒಡನಾಟವನ್ನು ಹೊಂದಿರುವ ಇವರು ಗೀತಗಾಯನ, ಜಾನಪದ ಗೀತಗಾಯನ, ನಾಟಕಾಭಿನಯ, ರಂಗಗೀತೆ ಗಾಯನ, ಸುಗಮ ಸಂಗೀತ ಗಾಯನ, ಸಾಂಸ್ಕೃತಿಕ ಕಾರ್ಯಕ್ರಮಗಳು, ಮುಖ್ಯ ಅತಿಥಿ ಗಾಯನಗಳನ್ನು ನಡೆಸಿಕೊಟ್ಟಿದ್ದಾರೆ.

ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಗೀತಗಾಯನ, ಜನಪದ ಗೀತಗಾಯನಗಳನ್ನು ನಡೆಸಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಾರೆ. ಈ ಎಲ್ಲರದ ಜೊತೆಗೆ ರಂಗಕಲೆಯಲ್ಲೂ 'ಸೈ' ಎನಿಸಿಕೊಂಡಿರುವ ಇವರು ಸಾಮಾಜಿಕ, ಪೌರಾಣಿಕ, ಐತಿಹಾಸಿಕ ನಾಟಕಗಳಲ್ಲಿ ಅಭಿನಯಿಸಿದ್ದಾರೆ. ನಂಜುನುಂಗಿದವರು, ಕಂಬನಿ, ಮಾಗಡಿ ಕೆಂಪೇಗೌಡರು, ಸಾಮ್ರಾಟ್ ಅಶೋಕ, ಶ್ರೀ ಕೃಷ್ಣ ಸಂಧಾನ, ಕುರುಕ್ಷೇತ್ರ, ಪ್ರಚಂಡ ರಾವಣ ಈ ನಾಟಕಗಳಲ್ಲಿ ಬಲರಾಮ, ಸೈಂಧವಮಂತ್ರಿ, ಅಂಗದ, ವಿದುರ, ವಿಚಿತ್ರಾಸುರ, ಅರ್ಜುನ, ಕರ್ಣನ ಪಾತ್ರಗಳಿಗೆ ಜೀವತುಂಬಿ ಅಭಿನಯಿಸಿದ್ದಾರೆ.

## ಶ್ರೀ ಕೆಂಚ ನರಸಿಂಹಯ್ಯ, ರಂಗಕಲಾವಿದರು
## ಮಾಳಗಾಳು, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ

ಇವರು ಕನಕಪುರ ಪಟ್ಟಣದ ಪಕ್ಕದಲ್ಲೇ ಇರುವ ಮಾಳಗಾಳುವಿನಲ್ಲಿ 01.08.1959 ರಲ್ಲಿ ದಿವಂಗತ ಕುಂಬಯ್ಯ, ನಾಗಮ್ಮ ಇವರ ಮಗನಾಗಿ ಜನಿಸಿದರು. ಇವರು ತಮ್ಮ ವೃತ್ತಿಯ ಜೊತೆಗೆ ನಾಟಕ ಕಲೆಯನ್ನು ಮೈಗೂಡಿಸಿಕೊಂಡಿದ್ದಾರೆ. ಕುರುಕ್ಷೇತ್ರ, ರಾಮಾಯಣ, ರಾಜಾ ಕೆಂಪೇಗೌಡ, ಸಾಮ್ರಾಟ್ ಅಶೋಕ, ಟಿಪ್ಪುಸುಲ್ತಾನ, ರತ್ನಮಾಂಗಲ್ಯ, ಲಚ್ಚಿ, ಅಂಗಿಬಟ್ಟೆ, ಬಸ್ ಕಂಡಕ್ಟರ್, ಅಣ್ಣ-ಅತ್ತಿಗೆ, ಬಂಜೆ ತೊಟ್ಟಿಲು, ಗೌಡ್ರಗದ್ದಲ, ಪ್ರಚಂಡ ರಾವಣ, ಮೀನಿನ ಹೆಜ್ಜೆ ಮುಂತಾದ ಪೌರಾಣಿಕ, ಐತಿಹಾಸಿಕ, ಸಾಮಾಜಿಕ ನಾಟಕಗಳಲ್ಲಿ ಸಹದೇವ, ಶಿಖಂಡಿ, ಏಕನೇತ್ರಾಸುರ, ರಾಜಾವೈದ್ಯ, ಚಾಂದ್‌ಖಾನ್ ಮುಂತಾದ ವಿವಿಧ ಪಾತ್ರಗಳನ್ನು ಸುಸೂತ್ರವಾಗಿ, ತುಂಬ ಅಚ್ಚುಕಟ್ಟಾಗಿ ನಿರ್ವಹಿಸಿ ನೋಡುಗರ ಮನಗೆದ್ದಿದ್ದಾರೆ.

## ಶ್ರೀ ಬಿ.ಎಸ್.ನಾಗರಾಜು, ರಂಗ ಕಲಾವಿದರು
## 'ತಲೆ ಮ್ಯಾಲೊಂದ್ ಸೂರು' ತೊಟ್ಟಿರಾಮಯ್ಯ ಬೀದಿ ಕೋಟೆ, ಕನಕಪುರ, ರಾಮನಗರ ಜಿಲ್ಲೆ

ಶ್ರೀಯುತರಾದ ಬಿ.ಎಸ್.ನಾಗರಾಜುರವರು ಬೆಂಗಳೂರಿನ ಯಲಹಂಕದಲ್ಲಿ ತಂದೆ ಬಿ.ಕೆ.ಸುಬ್ಬರಾವ್ ತಾಯಿ ಜಾನಕಮ್ಮ ಇವರ ಮಗನಾಗಿ 19.10.1948 ರಲ್ಲಿ ಜನಿಸಿದರು. ಇವರು ತಮ್ಮ ವೃತ್ತಿಯ ಜೊತೆಗೆ ರಂಗಕಲೆ, ಸುಗಮ ಸಂಗೀತ, ಜಾನಪದ ಗೀತೆಯನ್ನು ಹಾಡುವುದನ್ನು ಮೈಗೂಡಿಸಿಕೊಂಡು ಉತ್ತಮ ಕಲಾವಿದರಾಗಿ ಸುಪ್ರಸಿದ್ಧರಾಗಿದ್ದಾರೆ. ಪೌರಾಣಿಕ, ಸಾಮಾಜಿಕ, ಐತಿಹಾಸಿಕ ನಾಟಕಗಳನ್ನು ಅಭಿನಯಿಸಿದ್ದಾರೆ. ರಾಜಸೂಯಯಾಗ, ಶಿಶುಪಾಲ, ಜಲಾಸಂಧ್ರ, ಕೃಷ್ಣಸಂಧಾನ, ಪ್ರಚಂಡ ರಾವಣ ಈ ನಾಟಕಗಳಲಿ ದುರ್ಯೋಧನ ವಿಭೀಷಣ ಪಾತ್ರಗಳನ್ನು ಮಾಡಿದ್ದಾರೆ. ರಾಜಾ ಕೆಂಪೇಗೌಡ ನಾಟಕದಲ್ಲಿ ವಿಕ್ರಮ ಜನದೇವರಾಯನ ಪಾತ್ರಗಳು ಸಾಮ್ರಾಟ ಅಶೋಕ ನಾಟಕದಲ್ಲಿ ಬುಂದುಸಾರ ಪಾತ್ರಗಳನ್ನು ಪಂಚಭೂತ, ಹೆಣ್ಣಿಗೊಂದು ಗಂಡು, ಲಕ್ಷಂಭಕ್ಷಯಾಮಿ, ಮಕ್‌ಮಲ್ ಟೋಪಿ, ಮಾವ ಮಾವ ಕತೆ ಹೇಳು ಎಂಬ ಸಾಮಾಜಿಕ ನಾಟಕಗಳಲ್ಲಿ ಅಭಿನಯಿಸಿದ್ದಾರೆ.

ಇವರು ಒಳ್ಳೆಯ, ಮಧುರವಾದ ಕಂಠವುಳ್ಳವರಾಗಿದ್ದು ಸುಶ್ರಾವ್ಯವಾಗಿ ಹಾಡಬಲ್ಲರು.

## ಶ್ರೀ ಕೆ.ಆರ್.ಕಾಂತರಾಜು, ಸಾಮಾಜಿಕ ನಾಟಕ ಕಲಾವಿದರು
## ರಾಮನಗರ ರಸ್ತೆ, ಕನಕಪುರ, ರಾಮನಗರ ಜಿಲ್ಲೆ

ಶ್ರೀಯುತ ಕೆ.ಆರ್.ಕಾಂತರಾಜುರವರು ತಮ್ಮ ತಂದೆಯ ದಾರಿಯಲ್ಲೇ ಬೆಳೆಯುತ್ತಿರುವ ಒಬ್ಬ ಭರವಸೆಯ ರಂಗಕಲಾವಿದರು. ಇವರು ದಿನಾಂಕ: 10.07.1972 ರಲ್ಲಿ ರಾಮಕೃಷ್ಣಪ್ಪ ಮತ್ತು ಕಮಲಮ್ಮ ನವರ ಕಿರಿಯ ಮಗನಾಗಿ ಜನಿಸಿದರು. ತಮ್ಮ ವೃತ್ತಿಯ ಜೊತೆಗೆ ಪ್ರವೃತ್ತಿಯನ್ನು ಬೆಳೆಸಿಕೊಂಡು ತಮ್ಮ ಬಿಡುವಿನ ವೇಳೆಯಲ್ಲಿ ರಂಗಕಲೆಗೆ ಮೀಸಲಾಗಿಟ್ಟಿದ್ದಾರೆ. ಇವರು ಸಾಮ್ರಾಟ ಅಶೋಕ, ಕೃಷ್ಣ ಸಂಧಾನ, ಕರುಣಾಮಯಿ ಅಯ್ಯಪ್ಪ, ಪ್ರಚಂಡ ರಾವಣ, ಸಂಪೂರ್ಣ ರಾಮಾಯಣ, ಈ ನಾಟಕಗಳಲ್ಲಿ ನಾರದ, ಕೃಷ್ಣ, ಅರ್ಜುನ, ವಿಧುರ, ಇಂದ್ರಜಿತು, ಋಷಿಕೇತು, ಭರತನ ಪಾತ್ರಗಳನ್ನು ಮಾಡಿದ್ದಾರೆ. ಈ ನಾಟಕಗಳನ್ನು ಬೆಂಗಳೂರು, ಕನಕಪುರ ಪಟ್ಟಣದಲ್ಲಿ ಪ್ರದರ್ಶನ ನೀಡಿದ್ದಾರೆ.

## ಶ್ರೀ ಆರ್.ವಿ.ನಾರಾಯಣ, ರಂಗ ಕಲಾವಿದರು

**ಅವರೆಮಾಳ ರಾಂಪುರ, ಹಾರೋಹಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ**

ಶ್ರೀಯುತ ಆರ್.ನಾರಾಯಣ ಅವರು 22.06.1959 ರಲ್ಲಿ ವೆಂಕಟಪ್ಪ-ದೇವಮ್ಮ ದಂಪತಿಗಳಿಗೆ ಮಗನಾಗಿ ಜನಿಸಿದರು. ವಿದ್ಯಾರ್ಥಿ ದಿಶೆಯಲ್ಲಯೇ ಇವರಲ್ಲಿದ್ದ ಕಲೆ ವಿಕಾಸಗೊಳ್ಳುತ್ತಾ ಹೋಯಿತು. ವೀರಭದ್ರೇಗೌಡ ಎಂಬ ನಾಟಕ ಮಾಸ್ಟರ್ ರಾಂಪುರದಲ್ಲಿ 1979 ರಲ್ಲಿ ಸಂಪೂರ್ಣ ರಾಮಾಯಣ ನಾಟಕ ಕಲಿಸುತ್ತಿರುವಾಗ ಇವರಿಗೆ ಆಂಜನೇಯನ ಪಾತ್ರವನ್ನು ನೀಡಿದರು. ಅಂದಿನಿಂದ ಕುರುಕ್ಷೇತ್ರದಲ್ಲಿ ಅಭಿಮನ್ಯು, ವಿಧುರನ ಪಾತ್ರ, ಶ್ರೀ ಕೃಷ್ಣ ಸಂಧಾನದಲ್ಲಿ ಕರ್ಣನ ಪಾತ್ರ, ಯಮನ ಸೋಲು ನಾಟಕದಲ್ಲಿ ಯಮಧರ್ಮನ ಪಾತ್ರವನ್ನು ನಿರ್ವಹಿಸಿದ್ದಾರೆ. ಇವರ ರಂಗಕಲೆ ಹೀಗೆಯೇ ಮುಂದುವರಿಯಲಿ.

## ಶ್ರೀ ನಂ.ವೆಂ.ರಂಗನಾಥ

**'ಸೌರಭ' ಎ.ವಿ.ಆರ್. ರಸ್ತೆ, ಕನಕಪುರ, ರಾಮನಗರ ಜಿಲ್ಲೆ**

ಶ್ರೀಯುತರಾದ ನಂಜನಗೂರು ವೆಂಕಟಸುಬ್ಬಯ್ಯ ರಂಗನಾಥರವರು 1967 ಡಿಸೆಂಬರ್ 26 ರಂದು ವೆಂಕಟಸುಬ್ಬಯ್ಯ, ಸುಮಿತ್ರಮ್ಮ ದಂಪತಿಗಳ ಮಗನಾಗಿ ನಂಜನಗೂಡಿನಲ್ಲಿ ಜನಿಸಿದರು. ಇವರು 1996 ರಲ್ಲಿ ರಂಗ ಪ್ರವೇಶ ಮಾಡಿದರು. ಇವರ ಗುರುಗಳಾದ ಶ್ರೀ ಎ.ಎಸ್.ಮೂರ್ತಿ, ಅಶೋಕ ಬಾದರದಿನ್ನಿ, ನಾಣಿ, ಜಗದೀಶ್ವರಚಾರ್, ಆರ್.ಟಿ.ರಮಾ ಇವರ ಜೊತೆ ಪೌರಾಣಿಕ, ಸಾಮಾಜಿಕ ನಾಟಕಗಳನ್ನು ಅಭಿನಯಿಸಿದ್ದಾರೆ.

ಮೃಚ್ಛಕಟಿಕ, ಹಾಮ್ಲೆಟ್, ಅಂತಿಕೊನೆ ನಾಟಕಗಳು. ಪ್ರಪಂಚ ರಾವಣ, ಸಾಮ್ರಾಟ್ ಅಶೋಕ, ಶ್ರೀಕೃಷ್ಣ ಸಂಧಾನ ಮುಂತಾದ ಪೌರಾಣಿಕ ನಾಟಕಗಳಲ್ಲಿ ಬ್ರಹ್ಮ, ಶಕುನಿ, ಚಾಣಕ್ಯ, ಆಂಜನೇಯ ಪಾತ್ರಗಳನ್ನು ಮಾಡಿ, ಒರಿಸ್ಸಾದ ಕಟಕ್, ಮೈಸೂರು, ಶಿವಮೊಗ್ಗ, ಶಿಕಾರಿಪುರ, ಬೆಂಗಳೂರು, ಕನಕಪುರಗಳಲ್ಲಿ ಅಭಿನಯಿಸಿದ್ದಾರೆ. ಶ್ರೀರಮಣ ಮಹರ್ಷಿ ಅಂಧರ ಸಂಸ್ಥೆಯಲ್ಲಿ ಅಧಿಕಾರಿಗಳಾಗಿ ಸೇವೆಸಲ್ಲಿಸಿದ್ದಾರೆ.

## ಶ್ರೀ ಪ್ರಸನ್ನ ಕುಮಾರ್ ತೊ.ವೆಂ.

### ತೊಪ್ಪಗನಹಳ್ಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ

ಕುಮಾರ ತೊ.ವೆಂ.ಪ್ರಸನ್ನ ಒಬ್ಬ ಪ್ರತಿಭಾನ್ವಿತ, ವಾಗ್ಮೀಯಾಗಿದ್ದು, ತಂದೆ ವೆಂಕಟೇಶ, ತಾಯಿ ಗಾಯಿತ್ರಿಯವರ ಮಗನಾಗಿ 1995 ರಲ್ಲಿ ತೊಪ್ಪಗನಹಳ್ಳಿಯಲ್ಲಿ ಜನಿಸಿದರು. ತಂದೆಯ ವೃತ್ತಿಯಾದ ನಾಟಕ ಕಲಿಸುವ ಕಲೆ ಮಗುವಿನ ಮೇಲೆ ಪ್ರಭಾವ ಬೀರಿತು. ತಂದೆ ಕಲಿಸುತ್ತಿದ್ದ ನಾಟಕಗಳನ್ನು ನೋಡುತ್ತಿದ್ದರು. ಹೀಗಾಗಿ ತಾನು ಕೂಡ ನಾಟಕಗಳಲ್ಲಿ ಭಾಗವಹಿಸುವ ಅವಕಾಶ ದೊರೆಯಿತು ಎನ್ನುತ್ತಾರೆ.

ದಕ್ಷಯಜ್ಞ ನಂದೀಶ, ಷಣ್ಮುಖ, ಬೃಂಗೀಶ, ಜಟಾಯಿ ಪಾತ್ರಗಳನ್ನು ಅಭಿನಯಿಸುವುದರ ಜೊತೆಗೆ ಅನೇಕ ಸಾಮಾಜಿಕ ನಾಟಕಗಳಲ್ಲಿ ಏಕಪಾತ್ರಾಭಿನಯಗಳನ್ನು ಮಾಡಿದ್ದಾರೆ. ಟಿ.ಹೊಸಹಳ್ಳಿ, ಜೈಪುರದೊಡ್ಡಿ, ಬಳೆಚೆನ್ನವಲಸೆ, ಕಲ್ಲನಕುಪ್ಪೆ, ಬೆಂಗಳೂರಿನ ಅಂಜನಾಪುರ ಮುಂತಾದ ಈ ಕಡೆಗಳಲ್ಲಿ ಅಭಿನಯಿಸಿದ್ದಾರೆ.

## ಶ್ರೀ ರಾಜಣ್ಣಾಚಾರ್, ಪಿಟೀಲು ವಾದಕರು

### ಬೈರಾಪಟ್ಟಣ, ಚನ್ನಪಟ್ಟಣ ತಾಲ್ಲೂಕು, ರಾಮನಗರ ಜಿಲ್ಲೆ

ಶ್ರೀಯುತರಾದ ಬಿ.ರಾಜಣ್ಣಾಚಾರ್ ಬೈರಾಪಟ್ಟಣದಲ್ಲಿ ತಂದೆ ಬಸವಾಚಾರ್, ತಾಯಿ ಯಶೋಧಮ್ಮನವರ ಪುತ್ರರಾಗಿ ದಿನಾಂಕ: 02.06.1958 ರಲ್ಲಿ ಜನಿಸಿದರು. ವೃತ್ತಿಯ ಜೊತೆಗೆ ಪ್ರವೃತ್ತಿಯಾದ ಪಿಟೀಲುವಾದ್ಯವನ್ನು ಶೆಟ್ಟಿಹಳ್ಳಿಯ ಹೆಸರಾಂತ ಪಿಟೀಲು ವಾದಕರಾದ ಸುಜ್ಞಾನ ಪ್ರಭುಗಳಲ್ಲಿ ಆರು ವರ್ಷ ಅಭ್ಯಾಸ ಮಾಡಿದರು. ನಂತರ ತಮ್ಮ ಬಿಡುವಿನ ವೇಳೆಯಲ್ಲಿ ನಾಟಕ, ಹರಿಕಥೆ, ಲಘುಸಂಗೀತ, ಜನಪದಗೀತೆ ಕಾರ್ಯಕ್ರಮಗಳಲ್ಲಿ ಸಕ್ರೀಯವಾಗಿ ತೊಡಗಿಸಿಕೊಂಡಿದ್ದಾರೆ.

ಇವರು ಕುರುಕ್ಷೇತ್ರ, ದಾನಶೂರಕರ್ಣ, ಪಾಂಡುವಿಜಯ, ರಾಜಾವಿಕ್ರಮ, ರಾಜಾಸತ್ಯವ್ರತ, ಭಕ್ತಪುರೂರವ ಕೃಷ್ಣಾರುಡಿ, ಮುಂತಾದ ನಾಟಕಗಳಿಗೆ ಪಿಟೀಲು ನುಡಿಸಿರುತ್ತಾರೆ. ವೃತ್ತಿಯ ಜೊತೆಗೆ ರಂಗಭೂಮಿಯಲ್ಲಿ ತೊಡಗಿಸಿಕೊಂಡಿರುವುದು ಶ್ಲಾಘನೀಯವಾದದ್ದು.

## ಶ್ರೀ ಜಯರಾಮಾಚಾರಿ

**#311, ಶ್ರೀ ಬಾಲಾಜಿ ನಿಲಯ, ನಿಸರ್ಗ ಬಡಾವಣೆ, ಐ.ಬಿ.ರಸ್ತೆ, ಕೋರ್ಟ್ ಪಕ್ಕ, ಕನಕಪುರ**

ಶ್ರೀಯುತರು ಮರಳೇಗ್ರಾಮದಲ್ಲಿ ದಿನಾಂಕ: 10.10.1958 ರಲ್ಲಿ ತಂದೆ ಜಯ ವೆಂಕಟಾಚಾರಿ, ತಾಯಿ ಗೌರಮ್ಮ ನವರ ಮಗನಾಗಿ ಜನಿಸಿ, ಮರಳೆಗವಿಮಠದ ಪ್ರೌಢಶಾಲೆಯಲ್ಲಿ ಹತ್ತನೇ ತರಗತಿಯವರೆಗೆ ವ್ಯಾಸಂಗ ಮಾಡಿರುತ್ತಾರೆ. ಚಿಕ್ಕಂದಿನಿಂದಲೂ ನಾಟಕ ನೋಡುವ ಆಸಕ್ತಿ ಹೊಂದಿದ್ದು, ಕುತೂಹಲ ಮೂಡಿ ನಾನು ಕೂಡ ನಾಟಕಗಳಲ್ಲಿ ಅಭಿನಯಿಸಬೇಕೆಂಬ ಆಸೆ ಬೇರೂರಿತು, ಎನ್ನುತ್ತಾರೆ.

ಇದರ ಫಲವಾಗಿ ಹವ್ಯಾಸಿ ರಂಗಭೂಮಿಗೆ ಪಾದಾರ್ಪಣೆ ಮಾಡಿ, ಶಕುನಿ, ಕುಂತಿ, ಭೀಮ, ಗಾಂಧಾರಿ, ಭೀಷ್ಮ, ದ್ರೋಣ, ದುಶ್ಯಾಸನ, ಹೀಗೆ ಹಲವಾರು ಪಾತ್ರಗಳನ್ನು ಮಾಡಿ ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರರಾಗಿರುತ್ತಾರೆ. ಇವರು ಕನಕಪುರ ತಾಲ್ಲೂಕಿನಲ್ಲದೆ ಬೆಂಗಳೂರು ರವೀಂದ್ರ ಕಲಾಕ್ಷೇತ್ರ, ಆದಿಚುಂಚನಗಿರಿ, ಗುಡೇಮಾರನಹಳ್ಳಿ, ಮುಂತಾದ ಕಡೆ ನಾಟಕ ಅಭಿನಯಿಸಿ ಪ್ರಶಂಸಾ ಪತ್ರವನ್ನು ಪಡೆದಿರುತ್ತಾರೆ. ಶ್ರೀಕಾಳಿಕಾಂಬ ಕಲಾರಂಗದ ಸದಸ್ಯರಾಗಿ ರಂಗಕಲಾ ಸೇವೆಗೆ ತೊಡಗಿಸಿಕೊಂಡಿದ್ದಾರೆ.

## ಶ್ರೀ ನಂಜುಂಡೇಗೌಡ,

**ದೊಡ್ಡೇಗೌಡನಕೊಪ್ಪಲು**

ಶ್ರೀಯುತ ನಂಜುಂಡೇಗೌಡರು ಮಂಡ್ಯ ಜಿಲ್ಲೆಯ ದೊಡ್ಡೇಗೌಡನ ಕೊಪ್ಪಲಿನಲ್ಲಿ ಜವರೇಗೌಡ, ಕೆಂಪಮ್ಮ ದಂಪತಿಗಳ ಮಗನಾಗಿ 12.04.1953 ರಲ್ಲಿ ಜನಿಸಿದರು. ಗಯ ಚರಿತ್ರೆಯಲ್ಲಿ ಮಹೇಂದ್ರ, ಬಲರಾಮ, ದುರ್ಯೋಧನ ಪಾತ್ರ, ಶ್ರೀ ಕೃಷ್ಣಲೀಲೆಯಲ್ಲಿ ನಾರದರ ಪಾತ್ರ, ಶ್ರೀ ಕೃಷ್ಣ ಸಂಧಾನದಲ್ಲಿ ಕರ್ಣನ ಪಾತ್ರ, ನಿರ್ವಹಿಸಿ ಅಭಿನಯಕ್ಕೆ ಬಹುಮಾನ ಪಡೆದಿದ್ದಾರೆ. ರಾಮಾಯಣ ನಾಟಕದಲ್ಲಿ ಆಂಜನೇಯನ ಪಾತ್ರವನ್ನು ಇವರು ತುಂಬು ಅಭಿಮಾನದಿಂದ

ಹೇಳುತ್ತಾರೆ. ಕುರುಕ್ಷೇತ್ರದಲ್ಲಿ ದ್ರೋಣರ ಪಾತ್ರ, ಪ್ರಚಂಡ ರಾವಣ ನಾಟಕದಲ್ಲಿ ಜಾಂಬವಂತನ ಪಾತ್ರಗಳನ್ನು ನಿರ್ವಹಿಸಿದ್ದಾರೆ.

**ಶ್ರೀ ಎಂ.ಪರಮೇಶ್,**

**ರಂಗನಟ, ಮಳಗಾಳು ಮೊ: 9448488005**

ಕನಕಪುರ ತಾಲ್ಲೂಕಿನ ಎಂ.ಪರಮೇಶ್ ಅವರು ಮಳಗಾಳು ಗ್ರಾಮದ, ಎಂ.ಮುನಿಲಿಂಗಯ್ಯ ಹಾಗೂ ರಂಗಮ್ಮ ಅವರ ಪುತ್ರರಾಗಿ 08.10.1961 ರಲ್ಲಿ ಜನಿಸಿದ್ದಾರೆ. ಶ್ರೀಯುತ ಪರಮೇಶ್ ಅವರು ರಂಗಭೂಮಿ, ಸಿನಿಮಾ ನಟನೆಯಲ್ಲಿ ಅಭಿರುಚಿಯುಳ್ಳವರಾಗಿದ್ದಾರೆ. ಇವರು ಅಭಿನಯಿಸಿರುವ ಪ್ರಮುಖ ನಾಟಕ– ಕುರುಕ್ಷೇತ್ರ, ಮುಂತಾದವು. ಕುರುಕ್ಷೇತ್ರ ಒಂದೇ ನಾಟಕವನ್ನು ಹತ್ತಾರು ಬಾರಿ ಅಭಿನಯಿಸಿದ್ದಾರೆ. ಇವರು ಅಭಿನಯಿಸಿರುವ ಚಲನಚಿತ್ರಗಳೆಂದರೇ, ವೀರಪ್ಪನ್, ಪ್ರೀತಿ ಏಕೆ ಭೂಮಿ ಮೇಲಿದೆ, ಅಭಯ್ ಮತ್ತು ಶ್ರೀರಾಮ್, ಮುಂತಾದವು.

**ಶ್ರೀ ಲಕ್ಷ್ಮೀ ನಾರಾಯಣಸ್ವಾಮಿ.ಹೆಚ್.ವಿ.**

**ಹನುಮನಹಳ್ಳಿ, ಶಿವನಹಳ್ಳಿ ಅಂಚೆ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ**

ಶ್ರೀಯುತರಾದ ಇವರು ಹನುಮನಹಳ್ಳಿಯಲ್ಲಿ ತಿರುವೆಂಕಟಯ್ಯ, ತಾಯಿ ನಾಂಚಾರಮ್ಮ ಇವರ ಮಗನಾಗಿ ದಿನಾಂಕ: 08.04.1952 ರಲ್ಲಿ ಜನಿಸಿದರು. ಇವರು ಸಂಪೂರ್ಣ ರಾಮಾಯಣ, ಕುರುಕ್ಷೇತ್ರ, ದಾನಶೂರ ಕರ್ಣ, ಮಹಾಭಾರತ, ಗಿರಿಜಾಕಲ್ಯಾಣ, ರಾಜಾವಿಕ್ರಮ, ಮಲೆಮಹಾದೇಶ್ವರ, ಜಯವಿಜಯ ಶಾಪ ವಿಮೋಚನೆ, ಪಾಂಡುವಿಜಯ, ಭೀಷ್ಮ ಪ್ರತಿಜ್ಞೆ, ಶಿಜಲೇಂದ್ರ, ಮುಂತಾದ ಪೌರಾಣಿಕ ನಾಟಕಗಳನ್ನು ಕಲಿಸಿದ್ದಾರೆ.

ಇವರು ರಾಮನಹಳ್ಳಿ, ಶಿವನಹಳ್ಳಿ, ಗಡಸಹಳ್ಳಿ, ದೊಡ್ಡತಾಂಡ್ಯ, ತೊಳಸಿದೊಡ್ಡಿ, ಬಂಡೆದೊಡ್ಡಿ, ಮಂಚನದೊಡ್ಡಿ, ಕುಂಬಾರದೊಡ್ಡಿ, ಗುರುಕಾರದೊಡ್ಡಿ, ಕೂತಗೊಂಡನಹಳ್ಳಿ, ಹನುಮನಹಳ್ಳಿ, ಹಲಸಿನಮರದೊಡ್ಡಿ, ಕನಕಪುರ, ಚಿಕ್ಕಮುದುವಾಡಿ, ಸಂಕ್ರಾಂತಿ ತಾಂಡ್ಯ, ಹರಳಿಗುಡ್ಡೆ, ತಾಂಡ್ಯ,

ಕೊಂತಿಕಲ್‌ದೊಡ್ಡಿ, ಕೊನಮಾನಹಳ್ಳಿ, ದುನ್ನಸಂದ್ರ, ಬಿಳಗನಕುಪ್ಪೆ, ಕಾಡು ಜಕ್ಕಸಂದ್ರ, ರಾವುಗೊಡ್ಲು, ಯಲಚೇನಹಳ್ಳಿ, ಅಂಜನಾಪುರ, ಬನಶಂಕರಿ, ಡಿಪೋ ನೌಕರರಿಂದ ರವೀಂದ್ರ ಕಲಾಕ್ಷೇತ್ರ, ಬೆಂಗಳೂರು ಮುಂತಾದ ಕಡೆ ನಾಟಕವನ್ನು ಪ್ರದರ್ಶಿಸಿದ್ದಾರೆ.

ಇವರ ಕಲೆಗೆ ಸಂದ ಪ್ರಶಸ್ತಿ, ಗೌರವಗಳು ಹಲವು. 1995 ರಲ್ಲಿ ಕರ್ನಾಟಕ ಸಂಘ, ರಂಗಲೋಕ ಕನಕಪುರ 1999 ರಲ್ಲಿ ಗೌರವಿಸಿ ಸನ್ಮಾನಿಸಿದ್ದಾರೆ. ಇವರ ಕಲೆಗೆ ಇನ್ನೂ ಹೆಚ್ಚು ಪ್ರೋತ್ಸಾಹ ಸಿಗಲೆಂದು ಹಾರೈಸೋಣ.

*****